ಪ್ರಜಾವಾಣಿ ಶನಿವಾರ • ನವೆಂಬರ್ 2, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

Commercial Property FOR SALE & RENT

IMMIDIATE POSSESSION

VACANT PROPERTY

North East Corner Commercial Property located in the heart of MALLESHWARAM In the Densely Populated Market Area

11th cross, Sampige road, Malleshwaram.

Property is spread on 3600 sqft area offers around 18 SHOPS on the ground & basement,

it has 4 levels Basement, Ground, 1st and 2nd floor.

interested parties please contact:

97408 00003 / 84472 99780

OPENING A GATEWAY TO VARIOUS BUSINESS OPPORTUNITIES YIELD HIGH RENTAL INCOME

SALE

CHAMRAJPET

COMMERCIAL BUILDING

18,000 SFT,

RENTAL INCOME 7.5 LACS

SALE PRICE 13.50 CRORES.

Call: 96322-37557/ 96069-07557

House

Jayanagar

SALE 65X122

East Facing old House 3rd Block Jayanagar Near Ashoka Pillar Main Road Prime Location Call:9611844667 8123515830

J P Nagar

SALE 40X60-BDA

Prime Corner Property J.P.Nagar 2nd Phase Near Innisfree House School Only Genuine Buyers Call:9886079998

Rajajinagar

SALE 15X35, West facing, Rajajinagar 2nd stage A block, Good location, Near Orion mall. 9845527196.

Sanjaynagar

RMV BHOOPASANDRA BDA Site 29'x57' E/F 40' Road, off Chawla Road @ 17,500 per Sft, Owner:9980555558

Vijayanagar

HOUSE FOR SALE: 29x40 Dimension (1160 Sq.ft) Prashanth Nagar (9th cross NHBC Layout). Per Sq.ft- 19,000 (South Facing) + Building Value; 20 Lakhs. Rental income- 45,000/- (Clear Documents). Contact No: 8762485002, 9482140636

Vishweshwariah Layout

"VISHVESHWARAIAH 1ST-BLOCK 50x80 North 40ft Road, parallel to 80ft Road near Shirckey circle. 9886908408"

VISVESHVARAIAH LAYOUT First Block 2nd Main, 60x40 2325 Sft. NF, Clear Title, Immediate SALE 9880567246.

Vidyaranyapura

HOUSE FOR sell BEL 1st Block vidyaranya pura 40X60 North East corner 15000 for square feet Contact:9611011070

REAL ESTATE SELLING

Sites

Anjanapura

BDA E-AUCTION

East-South Corner Site No 902`for Sale`at Further Extension`of Anjanapura 11th`Block Bannerghatta`Rd 2645sqft Rs.14500/- Call:9448138640 9731125533

Kempegowda Layout

***NADAPRABHU* KEMPEGOWDA** LAYOUT 1st-Block K Sector 30x40 W/F 84 Lakhs,7th Block _F Sector 50x80 West-facing behind 100feet Road on 50 feet road, Nayara Petrol bunk backside_and Vishveshwaraiah Layout_3rd-Block 40x60 East-facing. Contact:9686469799

BDA SITE For Sale 3.5 KM from Brigade Panorama Apartment Gurupunvanni Properties Ph:9900006355

WANTED BDA & BBMP SITES, Anjanapura, JP.Nagar,Banashankari 6th Stage, Vishweshwaraiah Layout. Any Measurements Immediate Settlement Genuine Sellers Contact: 9972223222, 9606632777

Banashankari

BANASHANKARI 6TH Stage, 6th Block, 30x40 West Facing, Rs.9,000 Per Sq.ft. Owner 8971544918/ 9886052148

KANAKAPURA ROAD, Banashankari 6th Stage, 50x80 Site, And Concorde Napa Vally Villa For Sale: 9916817739

Kengeri Satellite Town

SITE FOR Sale 18X25 KHB Site at Kengeri Satellite Town 11500/- per sqft Contact :9108171093

Nagarabhavi

"NAGARABHAVI NEAR BDA Complex 30x45 North 40x60 South BDA 100% Vasthu Site 40ft Road. 9448432633"

Hebbal

BDA 60X40 Site 511 East Face NTI PH2 Rajiv Gandhi Nagar Kodigehalli 6364712736

T C Palya

"TC.PALYA GATED Community BBMP B-Katha New Independent House Ground and First Floor 1.50`Crore. Owner. 9449008336"

Flat

Langford Town

✓ **SALE: BEAUTIFUL** 3 BHK flat, 2500 sft, 3 balconies, 3 car parks, on Eagle Street, 'A' Khata. G.N Properties 9845044179



PRM/KA/RERA/1251/309/PR/220424/006825
https://rera.karnataka.gov.in

URBAN ELITE

EXPERIENCE LUXURY IN EVERY SQUARE FOOT!

NELAMANGALA
SONDEKOPPA ROAD
OFF TUMKUR ROAD

733 811 0744

LUXURIOUS VILLA PLOTS & ICE VILLAS

ICE VILLAS STARTS FROM 72 L*

HYDROENERGISER THE WATER CONDITIONER

world's most efficient Water Structuring Device.

HYDRO ENERGISER

Solution to Hard Water Problems in HOME, FLAT, VILLAS & AGRICULTURAL application.



Reduced Hair Fall | Solution to Itchy Skin | Improves Soap Lather | Improves Hydration

Prevents Hair Damage | Increases Effectiveness of Detergents | Protects Washing Machine/Heaters | Prevents Skin Damage | Prevents Damage to Appliances | Doorstep Delivery | All India Warranty

* Source : Test report compared to normal bore water by the University of Horticulture Sciences, Bagalkot.

HYDROENERGISER
Rajajinagar, Bangalore

94835 34488 / 94835 34499

20x30 ಸೈಟ್‌ನ ಬೆಲೆ ಕೇವಲ ₹ 10 ಲಕ್ಷ

VIRAJ ENCLAVE

ತಿಟ್ಟಹಳ್ಳಿ

ಕನಕಪುರ ರಸ್ತೆ ಇಂದ ಕೇವಲ 5 kms
ಕುಂಬಳಗೋಡು ನಿಂದ ಕೇವಲ 7 kms

Bank Loan Available | All Basic Amenities provided

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

63601 92136 | 99800 56566

ಗುಂಡಿನ ದಾಳಿ: ಬಾಲಕ ಸೇರಿ ಇಬ್ಬರ ಸಾವು

ನವದೆಹಲಿ (ಪಿಟಿಐ): ದೆಹಲಿಯ ಶಾಹ್‌ದರಾದಲ್ಲಿ ಇಬ್ಬರು ಶಸ್ತ್ರಧಾರಿಗಳು ಗುರುವಾರ ನಡೆಸಿದ ಗುಂಡಿನ ದಾಳಿಯಲ್ಲಿ ಒಬ್ಬ ಬಾಲಕ ಸೇರಿದಂತೆ ಇಬ್ಬರು ಮೃತಪಟ್ಟಿದ್ದಾರೆ.

ಫರ್ಶ್ ಬಜಾರ್ ಪ್ರದೇಶದ ನಿವಾಸಿಗಳಾದ ಆಕಾಶ್ ಶರ್ಮ ಅಲಿಯಾಸ್ ಛೋಟು(40) ಮತ್ತು ಆತನ ಸೋದರಳಿಯ (16) ರಿಷಬ್ ಶರ್ಮ ಮೃತಪಟ್ಟವರು. ಘಟನೆಯಲ್ಲಿ ಆಕಾಶ್ ಪುತ್ರ ಕ್ರಿಶ್ ಶರ್ಮಗೂ(10) ಗುಂಡು ತಗುಲಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ELECTRONICS INDIA | ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್, ಕೋಲ್ಕತಾ | सी डैक CDAC

ಭಾರತ ಸರ್ಕಾರದ ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ (ಎಂಇಐಟಿಇ) ಒಂದು ವೈಜ್ಞಾನಿಕ ಸೊಸೈಟಿ

ಆಸಕ್ತಿ ವ್ಯಕ್ತಪಡಿಸುವಿಕೆ

ಭಾರತ ಸರ್ಕಾರದ ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ (ಎಂಇಐಟಿಇ) ಅಡಿಯಲ್ಲಿನ ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ (ಸಿ–ಡಾಕ್) ಕೋಲ್ಕತಾ, ಪ್ಲಾಟ್– ಇ2/1, ಬ್ಲಾಕ್–ಜಿಪಿ, ಸೆಕ್ಟರ್–5, ಸಾಲ್ಟ್ ಲೇಕ್ ಇಲೆಕ್ಟ್ರಾನಿಕ್ಸ್ ಕಾಂಪ್ಲೆಕ್ಸ್, ವಿಧಾನನಗರ, ಕೋಲ್ಕತಾ–700091 ಇವರು, **"ಇಲೆಕ್ಟ್ರಾನಿಕ್ಸ್ ಆಧಾರದಲ್ಲಿ ಡೈರಿ ಸೊಲ್ಯೂಷನ್"**ನ ಟ್ರಾನ್ಸ್‌ಫರ್ ಆಫ್ ಟೆಕ್ನಾಲಜಿ (ಟಿಒಟಿ) ಗಾಗಿ ಆಸಕ್ತಿಯುಳ್ಳ ಪಕ್ಷಗಾರರಿಂದ/ಉದ್ಯಮಶೀಲರಿಂದ **"ಆಸಕ್ತಿ ವ್ಯಕ್ತಪಡಿಸುವಿಕೆ (ಇಒಐ)"** ಆಹ್ವಾನಿಸಿದ್ದಾರೆ. ವಿವರಗಳಿಗಾಗಿ, ದಯವಿಟ್ಟು www.cdac.in ವೆಬ್‌ಸೈಟ್‌ಗೆ ಭೇಟಿ ಕೊಡಿ. ವಿಚಾರಣೆಗಾಗಿ, ದಯವಿಟ್ಟು ದೂರವಾಣಿ: 033 2357 9846 / 5989 / 4764 / 3581 (ಎಕ್ಸ್‌ಟೆನ್ಷನ್: 3000/3020) ಸಂಖ್ಯೆಗಳನ್ನು ಸಂಪರ್ಕಿಸಿರಿ. ಇಒಐ ಸಲ್ಲಿಕೆಗೆ ಕೊನೆಯ ದಿನಾಂಕ: **29.11.2024 ರಂದು ಸಂಜೆ 5:00 ಗಂಟೆ.**

CBC 06147/12/0004/2425

RUNNING SUCCESSFULLY

PVR - INOX CINEMAS {DIRECTORS CUT, FORUM REX WALK, 9:30, 12:55, 3:30, 6:45, 9:30 p.m. | NEXUS FORUM MALL, KORMANGALA, 8:35, 9:25, 11:55, 12:30, 3:40, 6:30, 7:05, 10:30 p.m. | ORION MALL, YESHWANTPUR, 8:40, 9:40, 12:05, 12:45, 3:30, 3:55, 6:55, 10:20 p.m. | VAISHNAVI SAPPHIRE MALL, TUMKUR ROAD, 8:55, 12:20, 7:05, 10:30 p.m. | VEGA CITY MALL, 8:30, 9:15, 12:10, 3:35, 6:55, 10:30 p.m., IN ATMOS : 12:15, 3:15, 10:10 p.m. | MSR REGALIA, 8:50, 12:15, 3:40, 7:05, 10:30 p.m. | PHOENIX MARKET CITY, K.R. PURAM, 8:50, 12:15, 2:25, 3:40, 5:50, 7:05, 10:30 p.m. | BHARTIYA CITY, 9:10, 12:20, 3:50, 7:05, 10:30 p.m. | GT WORLD MALL, 9:00, 3:15, 10:00 p.m. | AURA PARK SQUARE, WHITEFIELD ROAD, 12:00, 6:35, 10:00 p.m. | SPIRIT MALL, 9:00, 3:55, 10:30 p.m. | VR MALL, WHITEFIELD ROAD, 8:30, 11:30, 12:00, 2:35, 3:25, 6:05, 6:50, 9:30, 10:15 p.m. | GLOBAL MALL, NAYANDALLI, 9:00, 11:50, 6:35, 10:00 p.m. | FALCON CITY MALL KANAKAPURA ROAD, 9:00, 9:40, 12:25, 12:50, 3:40, 6:45, 7:05, 10:30 p.m. | UPTOWN OMR MALL, 9:00, 3:35, 10:10 p.m. | SUPERPLEX FALCON CITY | PHOENIX MALL OF ASIA,12:20, 6:55 p.m., IN ATMOS : 8:35, 9:05, 11:45, 12:30, 3:10, 3:55, 6:35, 6:50, 10:00, 10:30 p.m. | MANTRI MALL, 9:00, 7:05 p.m., IN ATMOS : 12:15, 3:25, 10:10 p.m. | CENTRAL MALL, J.P.NAGAR, 9:20, 12:45, 6:45 p.m. | GARUDA MALL, 9:10, 12:35, 3:55, 6:35, 10:00 p.m. | SWAGATH MALL, 12:35, 10:20 p.m. | BROOKFIELD MALL, 9:00, 3:35, 10:10 p.m. | LIDO, 12:20, 6:55 p.m. | VALUE MALL, 9:05, 12:30, 3:45, 7:05, 10:30 p.m. | GALLERIA MALL, RMZ YELAHANKA, 9:05, 12:30, 7:05 p.m., IN ATMOS : 10:20 p.m.| GARUDA, YELAHANKA, 9:00, 3:35, 10:10p.m. | SBR HORIZON, SEEGEHALLI, 9:00, 12:25, 3:35, 6:45, 10:10 p.m.} | CINEPOLIS CINEMAS {ROYAL MEENAKSHI MALL, 9:30, 10:00, 12:30, 3:55, 7:05, 10:10, 10:25 p.m. | ETA MALL, BINNY MILL,9:00, 9:30, 12:10: 3:35, 6:45, 7:00, 10:10, 10:25 p.m. | EAST ORION MALL, 9:35, 12:30, 7:05, 10:30 p.m. | SHANTINIKETAN, 8:30, 9:20, 11:55, 2:50, 3:55, 6:15, 6:45, 10:10, 10:30 p.m. | SJR SPECTRUM MALL, 9:20, 12:20, 3:44, 4:05, 6:55, 10:30 p.m. | LULU MALL (TRD), 8:30, 9:10, 11:40, 12:30, 3:45, 7:05, 10:20 p.m. | LULU MALL (VIP), 9:45, 4:25, 10:30 p.m.} | GOPALAN CINEMAS {ARCADE MALL, 9:45 p.m. | LEGACY MALL, 4:30, 7:30, 10:30 p.m. | GRAND MALL, 11:00, 4:00, 9:45 p.m. | SIGNATURE MALL, 1:30, 6:45 p.m. | INNOVATION MALL, 4:30, 7:30, 10:00 p.m.} | INNOVATIVE {MARATHHALLI, 10:00, 12:45, 3:00, 7:00, 9:45 p.m.} | CINEPHILE {HSR LAYOUT, 10:00, 1:00, 4:15, 10:00 p.m.} | MIRAJ CINEMAS {SUNKADAKATTE, 5 SHOWS} | MOVIE TIME {DAVANGERE, 10:00, 7:30 p.m. | BELLARY, 10:00, 4:30, 7:00, 10:30 p.m. | RR NAGAR, 10:00, 4:00, 6:45, 10:30 p.m.} | NEW FANGLED MULTIPLEX {12:00, 3:15, 6:45, 9:15, 10:15 p.m.} | SRINIVASA THEATRE {SG PALYA, 1:15, 4:15, 7:15 p.m.} | PRASANNA THEATRE {DAILY 2 SHOWS} | SANTOSH RPC LAYOUT {DAILY 3 SHOWS} | VINAYAKA THEATRE {VARTHUR, 7:30 p.m.} | VAISHNAVI VYBHAVI {DAILY 3 SHOWS} | VYBHAV THEATRE {1:15, 4:15, 7:00 p.m.} | KAMAKYA THEATRE {1:30, 4:30, 7:30 p.m.} | RADHAKRISHNA CHITRAMANDIRA {10:30 p.m.} | SRI RAMA THEATRE {RAMANAGARA, TOTAL 3 SHOWS} | NARTHAKI THEATRE {KG ROAD, DAILY 5 SHOWS} | SIDDALINGESHWARA {1:30, 7:30 p.m.} | VENKATESWARA {KENGERI, 8:30 p.m.} | BALAJI {CHIKKALSANDRA, 7:30 p.m.} | ROCKLINE {1:00, 4:00, 9:45 p.m.} | KINO CINEMAS {4:30, 10:30 p.m.} | V CLASS CINEMAS {1:30, 4:30, 7:30 p.m.} | SHANKARNAG {1:45, 7:30 p.m.} | MAHADESHWARA {DAILY 2 SHOWS} | RAVI THEATRE {SARJAPURA, 9:45 p.m.} | PVR - INOX CINEMAS {FIZA MALL, MANGALORE, 9:15, 12:40, 6:40, 10:05 p.m. | FORUM MALL, MYSORE, 9:05, 3:40, 6:35, 10:15 p.m. | GARUDA MALL, MYSORE, 9:00, 3:45, 10:30 p.m. | CENTRAL, MANIPAL, 9:15, 3:45, 10:30 p.m. | SATYAM MALL, MYSORE, 8:55, 12:00, 6:45 p.m. | S MALL, TUMKUR, 8:45, 12:10, 6:45, 10:10 p.m. | CENTRO MALL MYSORE, 9:10, 3:45, 10:20 p.m.} | CINEPOLIS {CITY CENTRE MALL, MANGALORE, 9:20, 12:30, 3:55, 7:05, 10:30 p.m.} | BHARATH CINEMAS {MANGALORE, 10:15, 1:30, 4:15, 7:30, 10:30 p.m. | MANIPAL, 10:30, 1:30, 4:30, 7:30, 10:30 p.m. | KUNDAPUR, 10:15, 1:15, 7:15, 10:00 p.m. | PADUBIDRE, 4 SHOWS | PUTTUR, 10:15, 4:30, 7:30 p.m. | SHIMOGA, 5 SHOWS | UDUPI, 4:30, 10:15 p.m.} | DRC CINEMAS {MYSORE, 4 SHOWS} | JAI BHARATH {TUMKUR} | TRINETRA THEATRE {Davanagere} | VASANTHA THEATRE {Davanagere} | NATARAJ COMPLEX {Bellary} | LAKSHMI THEATRE {Hospet} | CINE GALAXY {SURATKAL, 11:00, 4:45, 7:00, 10:00 p.m.} | VISION CINEMA {MYSORE, 4 SHOWS} | SRI BALAJI DELUXE THEATRE {MYSORE, SHOWS} | SANGAM {MYSORE, 4 SHOWS} | SAHYADRI {HASSAN, 4 SHOWS}.

SCAN THIS QR CODE & BOOK YOUR TICKETS ON bookmyshow

FARNAZ

ಪಾನಮತ್ತರಾಗಿ ಶಾಲಾ ವಾಹನ ಚಾಲನೆ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳ

108 ಚಾಲಕರ ವಿರುದ್ಧ ಎಫ್‌ಐಆರ್

• ಕೆ.ಎಸ್.ಸುನಿಲ್

ಮುಖ್ಯಾಂಶಗಳು

- ಪ್ರತಿ ಚಾಲಕರಿಗೆ ₹10 ಸಾವಿರದವರೆಗೂ ದಂಡ
- ನಗರದ ವಿವಿಧ ಭಾಗಗಳಲ್ಲಿ ವಿಶೇಷ ಕಾರ್ಯಾಚರಣೆ
- ಎಫ್‌ಸಿ ಹೊಂದಿರದ ಹಲವು ವಾಹನಗಳ ಜಪ್ತಿ

ಬೆಂಗಳೂರು: ಪಾನಮತ್ತರಾಗಿ ಶಾಲಾ ವಾಹನ ಚಾಲನೆ ಮಾಡುವ ಚಾಲಕರ ಪತ್ತೆಗಾಗಿ ಕಾರ್ಯಾಚರಣೆ ನಡೆಸುತ್ತಿರುವ ಸಂಚಾರ ಪೊಲೀಸರು, ಒಂಬತ್ತು ತಿಂಗಳಲ್ಲಿ 108 ಚಾಲಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಸಿಕ್ಕಿಬಿದ್ದ ಚಾಲಕರಿಗೆ ದಂಡ ವಿಧಿಸುವುದರ ಜತೆಗೆ ಚಾಲನಾ ಪರವಾನಗಿ (ಡಿ.ಎಲ್) ಅಮಾನತು ಪಡಿಸುವಂತೆ ಸಾರಿಗೆ ಇಲಾಖೆಗೆ ಶಿಫಾರಸು ಮಾಡಿದ್ದಾರೆ.

ಅಲ್ಲದೇ, 679 ಶಾಲಾ ವಾಹನಗಳು ನಿಗದಿತ ಸಾಮರ್ಥ್ಯಕ್ಕಿಂತ ಹೆಚ್ಚು ಮಕ್ಕಳನ್ನು ಕೊಂಡೊಯ್ಯುತ್ತಿರುವುದು ಕಂಡು ಬಂದಿದ್ದು, ಈ ಸಂಬಂಧ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿದೆ. ಇಂತಹ ಘಟನೆಗಳು ಮರುಕಳಿಸದಂತೆ ಶಾಲಾ ಬಸ್‌ಗಳ ಮಾಲೀಕರು ಹಾಗೂ ಶಾಲೆಗಳ ಮುಖ್ಯಸ್ಥರಿಗೂ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಪ್ರತಿ ಚಾಲಕರಿಗೆ ₹10 ಸಾವಿರ ದವರೆಗೂ ದಂಡ ವಿಧಿಸಲಾಗಿದ್ದು, ಶಾಲಾ ವಾಹನ ಚಾಲಕರಿಂದ ₹1.36 ಲಕ್ಷ ದಂಡ ವಸೂಲು ಮಾಡಲಾಗಿದೆ.

ಹಲವು ಖಾಸಗಿ ಶಾಲಾ ವಾಹನ ಚಾಲಕರು ಕೆಲಸದ ಅವಧಿಯಲ್ಲಿ ಮದ್ಯ ಸೇವಿಸಿ ವಾಹನ ಚಾಲನೆ ಮಾಡುವುದು, ಸಿಗ್ನಲ್ ಜಂಪ್, ಅತಿವೇಗ ಸೇರಿದಂತೆ ಹಲವು ಸಂಚಾರ ನಿಯಮಗಳನ್ನು ಪದೇ ಪದೇ ಉಲ್ಲಂಘಿಸುತ್ತಿರುವ ಬಗ್ಗೆ ದೂರುಗಳು ಬಂದಿದ್ದವು.

ನಗರದ ವಿವಿಧ ಭಾಗಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿರುವ ಸಂಚಾರ ಪೊಲೀಸರು, ಬೆಳಿಗ್ಗೆ 7 ರಿಂದ 9.30ರ ಅವಧಿಯಲ್ಲಿ ನಾಲ್ಕು ಸಾವಿರಕ್ಕೂ ಅಧಿಕ ವಾಹನಗಳನ್ನು ತಡೆದು ಆಲ್ಕೊಮೀಟರ್ ಉಪಕರಣದ ಮೂಲಕ ತಪಾಸಣೆ ಮಾಡಿದ್ದರು. ಈ ವೇಳೆ ಹಲವು ಚಾಲಕರು ಮದ್ಯ ಸೇವಿಸಿರುವುದು ದೃಢಪಟ್ಟಿದೆ.

ಚಾಲಕರ ವಿರುದ್ಧ ಪಾನಮತ್ತ ಚಾಲನೆ ಮತ್ತು ಅಜಾಗರೂಕ ಚಾಲನೆ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ. ತಪಾಸಣೆ ವೇಳೆ ಕಾರ್ಯಕ್ಷಮತೆ ಪ್ರಮಾಣ ಪತ್ರ (ಎಫ್‌ಸಿ) ಹೊಂದಿರದ ಹಲವು ವಾಹನಗಳನ್ನು ಜಪ್ತಿ ಮಾಡಿ, ಸಾರಿಗೆ ಇಲಾಖೆ ಅಧಿಕಾರಿಗಳ ವಶಕ್ಕೆ ಒಪ್ಪಿಸಿದ್ದಾರೆ.

‘ಆಟೊ, ಮಾರುತಿ ವ್ಯಾನ್, ಟೆಂಪೊ ಟ್ರಾವೆಲರ್, ಮಿನಿ ಬಸ್‌ಗಳಲ್ಲಿ ನಿಗದಿಗಿಂತ ಹೆಚ್ಚಿನ ಮಕ್ಕಳನ್ನು ಕರೆದೊಯ್ಯುತ್ತಿರುವುದು ತಪಾಸಣೆ ವೇಳೆ ಕಂಡು ಬಂದಿದೆ. ಆಟೊಗಳಲ್ಲಿ ಹತ್ತಾರು ಮಕ್ಕಳನ್ನು ನಿಲ್ಲಲು ಸ್ಥಳಾವಕಾಶ ಇಲ್ಲದಂತೆ ತುಂಬಿಕೊಂಡು ಕೊಂಡೊಯ್ಯುತ್ತಾರೆ. ಮಕ್ಕಳಿಗಿಂತ ಹೆಚ್ಚು ತೂಕದ ಶಾಲಾ ಬ್ಯಾಗ್‌ಗಳು ಆಟೊಗಳ ಎರಡೂ ಬದಿಯಲ್ಲಿ ತೂಗಾಡುತ್ತಿರುತ್ತವೆ. ಶಾಲಾ ವಾಹನದಲ್ಲಿ ಸೀಟುಗಳ ಸಂಖ್ಯೆಯಷ್ಟೇ ಮಕ್ಕಳನ್ನು ಕರೆದೊಯ್ಯಬೇಕು.

ಆದರೆ, ಸೀಟುಗಳ ಪ್ರಮಾಣಕ್ಕಿಂತ ಎರಡು, ಮೂರು ಪಟ್ಟು ಹೆಚ್ಚಿನ ಮಕ್ಕಳನ್ನು ಹತ್ತಿಸಿಕೊಂಡು ಸಾಗುತ್ತಾರೆ. ಕೆಲ ಶಾಲೆಗಳಲ್ಲಿ ಸ್ವಂತ ವಾಹನಗಳು ಇಲ್ಲದ ಕಾರಣ ಹೊರಗುತ್ತಿಗೆ ನೀಡುತ್ತಾರೆ. ವಾಹನ ನೋಂದಣಿ ಪತ್ರ, ಕಾರ್ಯಕ್ಷಮತೆ ಪ್ರಮಾಣ ಪತ್ರ, ಪ್ರಥಮ ಚಿಕಿತ್ಸೆ ಪೆಟ್ಟಿಗೆ ಇರಬೇಕು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಪೋಷಕರು ತಮ್ಮ ಮಕ್ಕಳ ಸುರಕ್ಷತೆ ಬಗ್ಗೆ ಶಾಲಾ ಆಡಳಿತ ಮಂಡಳಿ ಕೈಗೊಂಡಿರುವ ಕ್ರಮಗಳ ಬಗ್ಗೆ ಪ್ರಶ್ನಿಸಬೇಕು. ಲಕ್ಷಾಂತರ ರೂಪಾಯಿ ವಂತಿಗೆ ನೀಡಿ ಮಕ್ಕಳನ್ನು ಶಾಲೆಗೆ ಸೇರಿಸುತ್ತಾರೆ. ಬಸ್ ಚಾಲನೆಗೂ ಮುನ್ನ ಚಾಲಕ ಮದ್ಯ ಸೇವಿಸಿದ್ದಾನೆಯೇ ಎಂಬುದನ್ನು ಪರೀಕ್ಷಿಸಬೇಕು’ ಎಂದು ಹಿರಿಯ ಅಧಿಕಾರಿಯೊಬ್ಬರು ಸಲಹೆ ನೀಡಿದರು.

‘ನಿರಂತರ ಕಾರ್ಯಾಚರಣೆ ನಡೆಯುತ್ತಿದ್ದು, ಪಾನಮತ್ತ ಚಾಲಕರು ಪತ್ತೆಯಾಗುತ್ತಿದ್ದಾರೆ. ಕೆಲಸದ ಅವಧಿಯಲ್ಲಿ ಚಾಲಕರು ಮದ್ಯ ಸೇವಿಸಿದ್ದಾರೆಯೇ ಇಲ್ಲವೇ ಎಂಬುದರ ಬಗ್ಗೆ ಶಾಲಾ ಆಡಳಿತ ಮಂಡಳಿ ಪರಿಶೀಲನೆ ನಡೆಸುತ್ತಿಲ್ಲ. ಮಕ್ಕಳ ಸುರಕ್ಷತೆ ಬಗ್ಗೆ ಗಮನ ಹರಿಸುತ್ತಿಲ್ಲ’ ಎಂದು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಶಾಲಾ ವಾಹನಗಳ ಚಾಲಕರ ವಿರುದ್ಧ ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿದರು

ಚಾಲನಾ ಪರವಾನಗಿ ರದ್ದತಿಗೆ ಮನವಿ

ಸಂಚಾರ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಜೈನ್ ಮಾತನಾಡಿ, ‘ನಿಯಮಿತ ತಪಾಸಣೆ ವೇಳೆ ಕೆಲಸದ ಅವಧಿಯಲ್ಲಿ ಶಾಲಾ ವಾಹನ ಚಾಲಕರು ಮದ್ಯ ಸೇವಿಸಿ ಸಿಕ್ಕಿಬಿದ್ದಿದ್ದಾರೆ. ಹಿಂದಿನ ರಾತ್ರಿ ಮದ್ಯ ಸೇವಿಸಿರುವುದಾಗಿ ಚಾಲಕರು ವಿಚಾರಣೆ ವೇಳೆ ಹೇಳಿದ್ದಾರೆ. ಆದರೆ, ಆಲ್ಕೊಮೀಟರ್ ಉಪ ಕರಣದಲ್ಲಿ ತಪಾಸಣೆ ಮಾಡಿದಾಗ ಮದ್ಯ ಸೇವಿಸಿರುವುದು ಗೊತ್ತಾಗಿದೆ. ಕೆಲಸದ ಒತ್ತಡ ಸೇರಿದಂತೆ ನಾನಾ ಕಾರಣಗಳ ನೆಪದಲ್ಲಿ ಮದ್ಯ ಸೇವಿಸಿದ್ದಾಗಿ ತಿಳಿಸಿದ್ದಾರೆ’ ಎಂದು ಹೇಳಿದರು.

‘ಸಾರಿಗೆ ಇಲಾಖೆ ಚಾಲನಾ ಪರವಾನಗಿ ಅಮಾನತು-ಗೊಳಿಸಿದ್ದರೂ ಮದ್ಯ ಸೇವಿಸಿ ಚಾಲನೆ ಮಾಡಿ ಸಿಕ್ಕಿಬೀಳುತ್ತಲೇ ಇದ್ದಾರೆ. ಹಾಗಾಗಿ ವಾಹನಗಳ ಪರವಾನಗಿ ಯನ್ನು ರದ್ದುಗೊಳಿಸುವಂತೆ ಆರ್‌ಟಿಒಗೆ ಮನವಿ ಮಾಡಲಾಗುವುದು. ಸಂಚಾರ ನಿಯಮ ಮತ್ತು ಸುರಕ್ಷಿತ ವಾಹನ ಚಾಲನೆಯ ಬಗ್ಗೆ ಸವಾರರಿಗೆ ಜಾಗೃತಿ ಮೂಡಿಸ ಲಾಗುತ್ತಿದೆ’ ಎಂದು ತಿಳಿಸಿದರು.

‘ನಾವು ತಿದ್ದಿಕೊಳ್ಳಲು ಹಿರಿಯರು ಹೇಳಿದ್ದಾರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಲ್ಲಿಕಾರ್ಜುನ ಖರ್ಗೆ ಅವರು ನಮ್ಮ ಪಕ್ಷದ ಹಿರಿಯರು. ನಾವು ತಿದ್ದಿಕೊಳ್ಳಲಿ ಎಂದು ಹೇಳುತ್ತಾರೆ. ಅವರ ಸಲಹೆಗಳನ್ನು ನಾವು ಪಾಲಿಸುತ್ತೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ರಾಜ್ಯೋತ್ಸವದ ಸಮಾರಂಭದ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು. ಪಕ್ಷದ ಕಚೇರಿಯಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಖರ್ಗೆ ಅವರು ರಾಜ್ಯದ ನಾಯಕರಿಗೆ ಬುದ್ಧಿವಾದ ಹೇಳಿದ್ದರ ಬಗ್ಗೆ ಪ್ರಶ್ನಿಸಿದಾಗ, ‘ಒಗ್ಗಟ್ಟಾಗಿರಿ ಎಂದು ಪಕ್ಷದ ಕೆಲ ಕಾರ್ಯಕರ್ತರಿಗೆ ಹೇಳಿದ್ದಾರೆ’ ಎಂದು ಉತ್ತರಿಸಿದರು.

‘ನಾನು ಕೆಪಿಸಿಸಿ ಅಧ್ಯಕ್ಷನಾದ ದಿನದಿಂದ ರಾಜ್ಯದ ನಾಯಕರ ಮಧ್ಯೆ ಎಂದಾದರೂ ಗಲಾಟೆಗಳಾಗಿವೆಯೇ? ಪಕ್ಷ ಮತ್ತು ಸರ್ಕಾರವನ್ನು ನಾವು ಸಮನ್ವಯದಿಂದ ನಡೆಸಿಕೊಂಡು ಹೋಗುತ್ತಿದ್ದೇವೆ’ ಎಂದರು.

‘ಶಕ್ತಿ ಯೋಜನೆ ಬಗ್ಗೆ ಶೇ 5–10ರಷ್ಟು ಮಹಿಳೆಯರು ಏನು ಹೇಳುತ್ತಾರೆ ಎಂಬುದನ್ನಷ್ಟೇ ನಾನು ಪ್ರಸ್ತಾಪಿಸಿದ್ದೆ. ನಾನು ಮಾತನಾಡಿರುವ ವಿಡಿಯೊವನ್ನು ಪೂರ್ತಿ ನೋಡಿ, ಆಮೇಲೆ ಮಾತನಾಡಿ’ ಎಂದು ಗ್ಯಾರಂಟಿ ಪರಿಷ್ಕರಣೆ ಬಗ್ಗೆ ಖರ್ಗೆ ಅವರ ಅಸಮಾಧಾನದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದರು.

‘ಗ್ಯಾರಂಟಿಗಳು ದೇಶಕ್ಕೇ ಮಾದರಿಯಾಗಿವೆ. ಆದರೆ ಇಂತಹ ಕಾರ್ಯಕ್ರಮಗಳನ್ನು ಮಾಡಲು ರಾಜ್ಯ ಬಿಜೆಪಿಗೆ ಆಗುವುದಿಲ್ಲ. ನಾವು ಯಶಸ್ವಿಯಾಗಿ ಮಾಡುತ್ತಿರುವುದನ್ನು ಸಹಿಸಿಕೊಳ್ಳಲೂ ಅವರಿಗೆ ಆಗುತ್ತಿಲ್ಲ’ ಎಂದರು.

ಕಾರ್ಮಿಕರ ಸಾವು ಪ್ರಕರಣ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮಾಂತರ ಜಿಲ್ಲೆಯ ದಾಬಸ್‌ಪೇಟೆಯ ಸೋಂಪುರ ಕೈಗಾರಿಕಾ ಪ್ರದೇಶದ ಆಶಾ ಸ್ವೀಟ್ಸ್ ಕಂಪನಿ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಬಿದ್ದು ಕಾರ್ಮಿಕರಿಬ್ಬರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಕಂಪನಿಯ ಉಸ್ತುವಾರಿ ಸಂತೋಷ್ ಹಾಗೂ ರಮೇಶ್ ಬಂಧಿತರು. ಆಶಾ ಸ್ವೀಟ್ಸ್‌ನ ಮಾಲೀಕ ಮಯೂರ್ ತಲೆ ಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ. ಎಫ್‌ಐಆರ್‌ನಲ್ಲಿ ಮಯೂರ್ ಅವರನ್ನು ಎರಡನೇ ಆರೋಪಿಯಾಗಿ ಹೆಸರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಂಪನಿಯಲ್ಲಿರುವ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಗುರುವಾರ ಸಂಜೆ ಆಕಸ್ಮಿಕವಾಗಿ ಬಿದ್ದು ಮಡಕಶಿರದ ನವೀನ್(45) ಹಾಗೂ ಮಧುಗಿರಿ ತಾಲ್ಲೂಕಿನ ಗಂಜಲಗುಂಟೆ ಗ್ರಾಮದ ಲಿಂಗರಾಜು (26) ಮೃತಪಟ್ಟಿದ್ದರು. ಆಶಾ ಸ್ವೀಟ್ಸ್ ಕಂಪನಿಗೆ ಸೇರಿದ 18ಕ್ಕೂ ಹೆಚ್ಚು ಮಳಿಗೆಗಳು ಬೆಂಗಳೂರಿನಲ್ಲಿ ಇವೆ.

1) ದೀಪಾವಳಿ ಹಬ್ಬಕ್ಕೆ ಹೂವು, ಹಣ್ಣು, ಬಾಳೆದಿಂಡು ಹಾಗೂ ಇತರ ವಸ್ತುಗಳ ಖರೀದಿಗೆ ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕರು ನಗರದ ಕೆ. ಆರ್. ಮಾರುಕಟ್ಟೆಗೆ ಬಂದಿದ್ದ ದೃಶ್ಯ ಶುಕ್ರವಾರ ಕಂಡುಬಂತು
2) ನಗರದ ಚಿಕ್ಕಪೇಟೆಯಲ್ಲಿ ಶುಕ್ರವಾರ ಜನರು ಪಟಾಕಿ ಸಿಡಿಸಿ ಸಂಭ್ರಮಿಸಿದರು

ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್.ಜಿ.

PVR - INOX CINEMAS {DIRECTORS CUT, FORUM REX WALK | NEXUS FORUM MALL, KORMANGALA | ORION MALL, YESHWANTPUR | VAISHNAVI SAPPHIRE MALL, TUMKUR ROAD | VEGA CITY MALL | MSR REGALIA | PHOENIX MARKET CITY, K.R. PURAM | BHARTIYA CITY | GT WORLD MALL | AURA PARK SQUARE, WHITEFIELD ROAD | SPIRIT MALL | VR MALL, WHITEFIELD ROAD | GLOBAL MALL, NAYANDALLI | UPTOWN OMR MALL | SUPERPLEX FALCON CITY | MALL OF ASIA | MANTRI MALL | CENTRAL MALL, J.P.NAGAR | GARUDA MALL | SWAGATH MALL | BROOKFIELD MALL | LIDO | VALUE MALL | GALLERIA MALL, RMZ YELAHANKA, | GARUDA, YELAHANKA | SBR HORIZON, SEEGEHALLI} | CINEPOLIS CINEMAS {ROYAL MEENAKSHI MALL | ETA MALL, BINNY MILL | EAST ORION MALL | SHANTINIKETAN | SJR SPECTRUM MALL | LULU MALL (TRD) | LULU MALL (VIP)} | GOPALAN CINEMAS {ARCADE MALL | LEGACY MALL | GRAND MALL | SIGNATURE MALL | INNOVATION MALL} | INNOVATIVE {MARATHHALLI} | KINO CINEMA {SEEGEHALLI} | CINEPHILE {HSR LAYOUT} | ROCKLINE CINEMA MALL {JALAHALLI CROSS} | MIRAJ CINEMAS {SUNKADAKATTE} | MOVIE TIME {YGR SIGNATURE MALL, RR Nagar} | BALAJI {CHIKKALSANDRA} | V CINEMAS {RAMAMURTHY NAGAR} | NEW FANGLED MULTIPLEX & Other Cinemas.

FARNAZ

ಮೊಬೈಲ್ ದುರ್ಬಳಕೆ ಮಾಡಿಕೊಂಡು ಮಹಿಳೆಯ ನಗ್ನ ದೃಶ್ಯ ಸೆರೆ

ಆರೋಪಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹಿಣಿಯ ಗಮನಕ್ಕೆ ಬಾರದಂತೆ ಅವರ ಮೊಬೈಲ್‌ನಲ್ಲಿ ಆ್ಯಪ್ ಡೌನ್‌ಲೋಡ್ ಮಾಡಿ ಆಕೆಯ ನಗ್ನ ದೃಶ್ಯವನ್ನು ವಿಡಿಯೊ ಮಾಡಿಕೊಂಡು ಹಣಕ್ಕೆ ಬೇಡಿಕೆ ಇಟ್ಟಿದ್ದ ಆರೋಪಿ ಸಂಜಯ್ (27) ಎಂಬಾತನ ವಿರುದ್ಧ ಆರ್.ಆರ್. ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಆರೋಪಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

‘ಸಂತ್ರಸ್ತೆ ನಗರದ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅದೇ ಕಂಪನಿಯಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ವಿಷ್ಣು ಎಂಬಾತನ ಮೂಲಕ 2023ರಲ್ಲಿ ಆರೋಪಿ ಸಂಜಯ್‌ಕುಮಾರ್ ಪರಿಚಯ ಆಗಿತ್ತು. ಮೂವರೂ ಆತ್ಮೀಯ ಆಗಿದ್ದರು. ಒಟ್ಟಿಗೆ ಉದ್ಯಾನಗಳಲ್ಲಿ ಸುತ್ತಾಟ ನಡೆಸುತ್ತಿದ್ದರು. ಈ ನಡುವೆ ಸಂತ್ರಸ್ತೆಯ ಮೊಬೈಲ್ ಅನ್ನು ಕೆಲಕಾಲ ಸಂಜಯ್ ಉಪಯೋಗಿಸಿದ್ದ. 2024ನೇ ಫೆಬ್ರುವರಿಯಲ್ಲಿ ಸಂಜಯ್, ಸಂತ್ರಸ್ತೆ ಮೊಬೈಲ್‌ನಲ್ಲಿ ‘ಥರ್ಡ್ ಪಾರ್ಟಿ ಅಪ್ಲಿಕೇಷನ್’ ಅನ್ನು ಆಕೆಗೆ ತಿಳಿಯದಂತೆ ಡೌನ್‌ಲೋಡ್ ಮಾಡಿಕೊಂಡು ಮೊಬೈಲ್ ಸ್ಕ್ರೀನ್‌ನಲ್ಲಿ ಕಾಣದಂತೆ ಇಟ್ಟುಕೊಂಡಿದ್ದ. ಸಂತ್ರಸ್ತೆ ಮನೆಯಲ್ಲಿ ಇದ್ದಾಗ ತುರ್ತು ಕರೆ ಬರಬಹುದೆಂದು ಭಾವಿಸಿ, ಮೊಬೈಲ್ ಅನ್ನು ಸ್ನಾನದ ಕೋಣೆಗೆ ಕೊಂಡೊಯ್ದಿದ್ದರು. ಅದೇ ವೇಳೆಯಲ್ಲಿ ಸಂಜಯ್ ಸಂತ್ರಸ್ತೆಯ ಮೊಬೈಲ್‌ಗೆ ಹಾಕಿದ್ದ ಅಪ್ಲಿಕೇಷನ್ ಆನ್ ಮಾಡಿಕೊಂಡು ವಿಡಿಯೊ ರೆಕಾರ್ಡ್ ಮಾಡಿಕೊಂಡಿದ್ದ. ಅದನ್ನು ಮೊಬೈಲ್‌ನಲ್ಲಿ ಇಟ್ಟುಕೊಂಡಿದ್ದ’ ಎಂಬ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.

‘ಈ ಮಧ್ಯೆ ಸಂಜಯ್ ಸಂತ್ರಸ್ತೆಗೆ ಕರೆ ಮಾಡಿ, ವಿಷ್ಣು ವಿಡಿಯೊ ಮಾಡಿಕೊಂಡಿದ್ದಾನೆ. ಅದನ್ನು ನಿನಗೆ ಕಳುಹಿಸುವುದಾಗಿ ಆರೋಪಿ ಹೇಳಿದ್ದ. ನಂತರ ಆಕೆಗೆ ಕಳುಹಿಸಿ ವಿಷ್ಣು ಅವರನ್ನು ನಂಬಬೇಡ ಎಂದೂ ಹೇಳಿದ್ದ. ಇತ್ತ ವಿಡಿಯೊ ಗಮನಿಸಿ ಆಘಾತಕ್ಕೆ ಒಳಗಾಗಿದ್ದ ಸಂತ್ರಸ್ತೆ ಸಂಜಯ್ ಬಳಿ ಮೊದಲು ಆ ವಿಡಿಯೊ ಡಿಲೀಟ್ ಮಾಡುವಂತೆ ಕೇಳಿಕೊಂಡಿದ್ದರು. ವಿಡಿಯೊ ಡಿಲೀಟ್ ಮಾಡಿದ್ದೇನೆ ಎಂದು ಹೇಳಿ ಪ್ರೀತಿಸುವಂತೆ ಬಲವಂತ ಮಾಡಿದ್ದ. ನಿನ್ನ ಪತಿ ಮದ್ಯ ಸೇವಿಸುತ್ತಾರೆ. ಅವರನ್ನು ಬಿಟ್ಟು ಬರುವಂತೆಯೂ ಹೇಳಿದ್ದ’ ಎಂಬುದಾಗಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಬಳಿಕ ಆರೋಪಿ ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೊ ಹರಿಯಬಿಡುವುದಾಗಿ ಬೆದರಿಕೆ ಹಾಕಿ ಹಣಕ್ಕೆ ಬೇಡಿಕೆ ಇಟ್ಟಿದ್ದ. ₹15 ಸಾವಿರ ಪಡೆದಿದ್ದ. ಸೆ.7ರಂದು ಸಂತ್ರಸ್ತೆಯನ್ನು ಮಾತನಾಡುವ ನೆಪದಲ್ಲಿ ಮನೆಗೆ ಕರೆಸಿಕೊಂಡು ಸಂತ್ರಸ್ತೆಯ ಮೊಬೈಲ್ ಕಸಿದುಕೊಂಡು ಒಡೆದು ಹಾಕಿದ್ದ. ಬಳಿಕ ಅತ್ಯಾಚಾರ ಎಸಗಿದ್ದ’ ಎಂದು ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ.

ವಿಮಾನ ನಿಲ್ದಾಣದ ಸಿಬ್ಬಂದಿಗೆ ಬೆದರಿಕೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಿಬ್ಬಂದಿಯನ್ನು ಬ್ಯಾಗ್ ಪರಿಶೀಲನೆ ವೇಳೆ ನಿಂದಿಸಿ, ಬೆದರಿಕೆಯೊಡ್ಡಿದ್ದ ಆರೋಪದ ಅಡಿ ಇಬ್ಬರ ವಿರುದ್ಧ ಬಿಐಎಎಲ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಕೆಐಎಎಲ್‌ನ ಸಿಐಎಸ್‌ಎಫ್ ವಿಭಾಗದ ಪ್ರದ್ಯುಮ್ನ ಕುಮಾರ್ ನೀಡಿರುವ ದೂರು ಆಧರಿಸಿ ಬಿಹಾರದ ಅಮನ್‌ರಾಜ್ (32), ಜಾರ್ಖಂಡ್‌ನ ಅದಿತಿ ಕುಮಾರಿ (28) ವಿರುದ್ಧ ಪ್ರಕರಣ ದಾಖಲಾಗಿದೆ.

‘ಅ.29ರಂದು ಇಂಡಿಗೊ ವಿಮಾನದಲ್ಲಿ ಪ್ರಯಾಣಿಸಲು ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಬ್ಯಾಗ್‌ಗಳ ಸ್ಕ್ರೀನಿಂಗ್ ವೇಳೆ ಅನುಮಾನಾಸ್ಪದ ವಸ್ತು ಪತ್ತೆಯಾಗಿತ್ತು. ಬ್ಯಾಗ್ ಅನ್ನು ಕೆಐಎಎಲ್ ಸಿಬ್ಬಂದಿ ಖುದ್ದು ತಪಾಸಣೆ ಮಾಡಲು ಮುಂದಾದ ವೇಳೆ ಆರೋಪಿಗಳು ಸಹಕರಿಸದೇ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಬೆದರಿಕೆವೊಡ್ಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರು’ ಎಂದು ಪೊಲೀಸರು ತಿಳಿಸಿದರು.

‘ವಿಮಾನ ನಿಲ್ದಾಣದ ಸಿಬ್ಬಂದಿ ಈ ವಿಚಾರವನ್ನು ಮೇಲಧಿಕಾರಿಗಳ ಗಮನಕ್ಕೆ ತಂದಿದ್ದರು. ಅದನ್ನು ಆಧರಿಸಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಆರೋಪಿಗಳ ಬ್ಯಾಗ್ ಪರಿಶೀಲಿಸಿದಾಗ ಲೈಟರ್ ಪತ್ತೆ ಆಗಿತ್ತು’ ಎಂದರು.

ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ (ಸಿ–ಡಾಕ್)

ನಮ್ಮಲ್ಲಿ ಸೇರಿಕೊಳ್ಳಿ ಮತ್ತು ಉನ್ನತವಾದದ್ದನ್ನು ಸಾಧಿಸಿರಿ

ಹುದ್ದೆ– ಸೈಂಟಿಸ್ಟ್ ಬಿ	ಶ್ರೇಡಿಯಲ್ಲಿನ ವೇತನ ಶ್ರೇಣಿ – ಲೆವೆಲ್ 10 (56100–177500) ಪೇಸ್ಕೇಲ್ ಮೇಲೆ ನಿರಂತರ ಗುತ್ತಿಗೆ ಹುದ್ದೆಗಳು
ಹುದ್ದೆಗಳ ಸಂಖ್ಯೆ / ಮೀಸಲಾತಿ	22 (ಯುಆರ್–11, ಎಸ್‌ಟಿ–1, ಒಬಿಸಿ (ಎನ್‌ಸಿಎಲ್)–4, ಇಡಬ್ಲ್ಯುಎಸ್–6)

ಆರಂಭಿಕ ನೇಮಕಾತಿ ಸ್ಥಳ: ಬೆಂಗಳೂರು, ದೆಹಲಿ, ಪುಣೆ, ಹೈದರಾಬಾದ್

ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 30 ದಿನಗಳು.

ವಿವರವಾದ ಜಾಹೀರಾತಿಗಾಗಿ ಮತ್ತು ಅರ್ಜಿ ಸಲ್ಲಿಕೆಗಾಗಿ www.cdac.in ವೆಬ್‌ಸೈಟ್‌ನಲ್ಲಿನ "ಕರಿಯರ್" ಪುಟಕ್ಕೆ ಭೇಟಿ ಕೊಡಿ.

ಜಾಹೀರಾತು ಸಂ.ಸಿಒಆರ್‌ಪಿ/ಜಿಆರ್‌ಪಿ.ಎ/04/2024 | ಕಾರ್ಪೊರೇಟ್ ಮುಖ್ಯಸ್ಥರು

ರಾಷ್ಟ್ರೀಯ ಅಭಿವೃದ್ಧಿಗಾಗಿ ಪ್ರಗತಿಪರ ತಂತ್ರಜ್ಞಾನ

CBC 06132/12/0011/2425

Branding & Communications Group / C-DAC Pune / CORP HRD 2024

ನಗರದಲ್ಲಿ ಇಂದು

‘ಕರುನಾಡು ರಂಗಾಗೈತೋ’ ವಿಡಿಯೊ ಆಲ್ಬಂ ಬಿಡುಗಡೆ: ನಿರ್ಮಾಣ: ಆರ್. ಕೆ. ಮ್ಯೂಸಿಕ್, ಅತಿಥಿಗಳು: ಚೈತ್ರಾ, ಸುಚೇಂದ್ರ ಪ್ರಸಾದ್, ಬೈರಮಂಗಲ ರಾಮೇಗೌಡ, ಶಾಂತರಾಜು, ಸ್ಥಳ: ಕನ್ನಡ ಪರಿಷತ್ತು, ಚಾಮರಾಜಪೇಟೆ, ಸಂಜೆ 4

ಕಾವ್ಯಶ್ರೀ ಕನ್ನಡ ಸಾಹಿತ್ಯ ಸಮ್ಮೇಳನ: ಅಧ್ಯಕ್ಷ: ಎಸ್. ರಾಮಲಿಂಗೇಶ್ವರ, ಸಾನ್ನಿಧ್ಯ: ಆರೂಢ ಭಾರತೀ ಸ್ವಾಮೀಜಿ, ಉದ್ಘಾಟನೆ: ಸುಬ್ಬು ಹೊಲೆಯಾರ್, ಅತಿಥಿಗಳು:ಆರ್ ವಾದಿರಾಜ್, ಜಿ. ಶಿವಣ್ಣ, ಮಹೇಂದ್ರ ಮುಣ್ಣೋತ, ಚಂದ್ರಶೇಖರ ಮಾಡಲಗೇರಿ, ಶಾಂತಿ ವಾಸು, ಆಯೋಜನೆ: ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 9.30

ನಗರದಲ್ಲಿ ನಾಳೆ

‘ಭಕ್ತಿ ಭಾವಾನಂದ’ ಅಖಂಡ ಭಜನೆಗಳು: ಆಯೋಜನೆ ಮತ್ತು ಸ್ಥಳ: ಸತ್ಯ ಸಾಯಿ ಸಂಘಟನೆ, ಸತ್ಯ ಸಾಯಿ ಬಾಬಾ ಆಶ್ರಮ, ಸಾಯಿ ರಮೇಶ ಕಾಡುಗೋಡಿ, ಬೆಳಿಗ್ಗೆ 9

54ನೇ ಸಂಗೀತ ಸಮ್ಮೇಳನ: ಉದ್ಘಾಟನೆ: ಎನ್. ಸಂತೋಷ್ ಹೆಗ್ಡೆ, ಅತಿಥಿಗಳು: ಸ್ವಾಮಿ ವೀರೇಶಾನಂದ ಸರಸ್ವತಿ, ಎಂ.ಆರ್.ವಿ. ಪ್ರಸಾದ್, ಎಸ್.ಸಿ. ಶರ್ಮ, ಮಧೂರ್ ಪಿ. ಬಾಲಸುಬ್ರಮಣ್ಯಮ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಬೆಳಿಗ್ಗೆ 10

ಸು.ರುದ್ರಮೂರ್ತಿ ಶಾಸ್ತ್ರಿ ಮತ್ತು ಎಂ.ವಿ. ನಾಗರಾಜರಾವ್ ರಚಿಸಿದ ಪುಸ್ತಕಗಳ ಬಿಡುಗಡೆ: ಲೋಕಾರ್ಪಣೆ: ಮಲ್ಲೇಪುರಂ ಜಿ. ವೆಂಕಟೇಶ್, ಅತಿಥಿಗಳು: ಡಾ.ಆರ್. ಶೇಷಶಾಸ್ತ್ರಿ, ಎಚ್.ಎಸ್. ಸತ್ಯನಾರಾಯಣ, ಆಯೋಜನೆ ಮತ್ತು ಸ್ಥಳ: ಅಂಕಿತ ಪುಸ್ತಕ, ಗಾಂಧಿ ಬಜಾರ್ 53ನೇ ಮುಖ್ಯರಸ್ತೆ, ಬಸವನಗುಡಿ, ಬೆಳಿಗ್ಗೆ 11

ಕನ್ನಡ ಸುಮಧುರ ಹಾಡುಗಳ ಗಾಯನ ಸಂಭ್ರಮ ಹಾಗೂ ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ವಿ.ರೇಣುಕಾ ಪ್ರಸನ್ನ, ಅತಿಥಿಗಳು: ಎಂ. ಶಿವಸ್ವಾಮಿ, ಬಿ.ಎ. ನಂಜುಂಡಸ್ವಾಮಿ, ಅಂಬುಜಾಕ್ಷಿ ಬೀರೇಶ್, ಉಪೇಂದ್ರಕುಮಾರ್ ಎಂ.ಆರ್., ಆಯೋಜನೆ: ಜೇನುಗೂಡು ಕಲಾ ಬಳಗ ಮತ್ತು ಕನ್ನಡ ಕಲಿಕಾ ಗಾನ ಕಲಾವಿದರ ವೇದಿಕೆ, ಸ್ಥಳ: ಶಿವಗಂಗಾ ರಂಗಮಂದಿರ, ಸರ್ ಎಂ.ವಿಶ್ವೇಶ್ವರಯ್ಯ ಲೇಔಟ್, ಕೆಂಗೇರಿ, ಮಧ್ಯಾಹ್ನ 2

ಪಟಾಕಿ ಅವಘಡ ● ಹಲವರ ಕಣ್ಣಿಗೆ ಹಾನಿ ● ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ದಾಖಲು

40ಕ್ಕೂ ಹೆಚ್ಚು ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಭವಿಸಿದ ಪಟಾಕಿ ಅವಘಡಗಳಲ್ಲಿ ಮಕ್ಕಳು, ಮಹಿಳೆಯರು ಸೇರಿದಂತೆ 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಹಲವು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಣ್ಣಿಗೆ ಗಂಭೀರ ಹಾನಿ ಮಾಡಿಕೊಂಡವರು ಶಂಕರ ಆಸ್ಪತ್ರೆ, ನಾರಾಯಣ ನೇತ್ರಾಲಯ ಹಾಗೂ ಮಿಂಟೋ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ. ಕೆಲವರಿಗೆ ಮೈ, ಕೈಗೆ ಸುಟ್ಟ ಗಾಯಗಳಾಗಿವೆ.

‘ಪಟಾಕಿ ಸಿಡಿಸುವಾಗ ಕಿಡಿಯೊಂದು ತಗುಲಿ ಬಾಲಕನೊಬ್ಬನ ಕಣ್ಣಿಗೆ ಗಂಭೀರ ಗಾಯವಾಗಿದ್ದು, ದೃಷ್ಟಿ ಕಳೆದುಕೊಳ್ಳುವ ಆತಂಕವಿದೆ. ಮಕ್ಕಳು, ವಯಸ್ಕರು ಸೇರಿದಂತೆ 23 ಮಂದಿ ದಾಖಲಾಗಿದ್ದು, ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಈ ಪೈಕಿ ಎಂಟು ಮಕ್ಕಳ ಕಣ್ಣಿನ ಕಾರ್ನಿಯಾಗೆ ಹಾನಿಯಾಗಿದೆ. ಐದು ವರ್ಷದ ಬಾಲಕಿಯ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಲಾಗಿದ್ದು, ಹತ್ತು ವರ್ಷದ ಬಾಲಕನಿಗೆ ಶಸ್ತ್ರಚಿಕಿತ್ಸೆ ಮಾಡಬೇಕಿದೆ’ ಎಂದು ಶಂಕರ್ ಕಣ್ಣಿನ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಪಟಾಕಿ ಸಿಡಿಸುತ್ತಿರುವುದನ್ನು ನೋಡುತ್ತಿದ್ದ ಮೂರು ವರ್ಷದ ಹೆಣ್ಣು ಮಗುವಿಗೆ ಬೆಂಕಿಯ ಕಿಡಿ ತಗುಲಿ, ಕಣ್ಣಿನ ಕಾರ್ನಿಯಾಗೆ ಹಾನಿಯಾಗಿದೆ.

ಪಟಾಕಿ ಅವಘಡದಲ್ಲಿ ಗಾಯಗೊಂಡ ಮಕ್ಕಳಿಗೆ ಮಿಂಟೋ ಆಸ್ಪತ್ರೆಯಲ್ಲಿ ವೈದ್ಯರು ಚಿಕಿತ್ಸೆ ನೀಡಿದರು ಪ್ರಜಾವಾಣಿ ಚಿತ್ರ

ಮತ್ತೊಂದೆಡೆ 10 ವರ್ಷದ ಬಾಲಕನೊಬ್ಬ ಸಿಡಿಯದ ಪಟಾಕಿಯನ್ನು ಪರಿಶೀಲಿಸಲು ಮುಂದಾದ ವೇಳೆ ಸ್ಫೋಟಗೊಂಡು ಕಣ್ಣಿಗೆ ಗಾಯವಾಗಿದೆ.

‘ಆನೆ ಪಟಾಕಿ ಸ್ಫೋಟದಿಂದಾಗಿ ಆಂಧ್ರಪ್ರದೇಶದ ವ್ಯಕ್ತಿಯೊಬ್ಬರ ಕಣ್ಣಿನ ಕಾರ್ನಿಯಾಗೆ ತೀವ್ರವಾಗಿ ಹಾನಿಯಾಗಿದೆ. ಹಲವರಿಗೆ ಕಾರ್ನಿಯಾ ಸವೆತ ಉಂಟಾಗಿದೆ. ಮೂವರು ಮಹಿಳೆಯರು, ಆರು ಮಕ್ಕಳು ಸೇರಿ ಹದಿನಾಲ್ಕು ಮಂದಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ’ ಎಂದು ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ.ರೋಹಿತ್ ಶೆಟ್ಟಿ ತಿಳಿಸಿದ್ದಾರೆ .

ಮಿಂಟೋ ಆಸ್ಪತ್ರೆಯಲ್ಲಿ ಶುಕ್ರವಾರ ಎಂಟು ಮಂದಿ ದಾಖಲಾಗಿದ್ದಾರೆ. ಪಟಾಕಿ ಸಿಡಿಸುವ ವೇಳೆ 17 ವರ್ಷದ ಬಾಲಕನ ಕಣ್ಣಿಗೆ ಗಾಯವಾಗಿದ್ದು, ಚಿಕಿತ್ಸೆ ನೀಡಲಾಗಿದೆ. ಪಟಾಕಿ ಕಿಡಿ ತಗುಲಿ 40 ವರ್ಷದ ವ್ಯಕ್ತಿಯ ಕಣ್ಣಿನ ಕಾರ್ನಿಯಾಗೆ ಗಾಯವಾಗಿದೆ.

‘ಪಟಾಕಿ ಸಿಡಿಸುವುದನ್ನು ನೋಡುತ್ತಿರುವ ವೇಳೆ ಕಣ್ಣಿಗೆ ಕಿಡಿ ತಗುಲಿ ಗಾಯಗೊಂಡಿರುವ 18 ವರ್ಷದ ಬಾಲಕ ಮತ್ತು 5 ವರ್ಷದ ಮಗುವಿಗೆ ಚಿಕಿತ್ಸೆ ನೀಡಲಾಗಿದೆ. ಬಾಲಕನ ಎಡಗಣ್ಣಿನ ಕಾರ್ನಿಯಾಗೆ ಗಂಭೀರ ಗಾಯವಾಗಿದ್ದು, ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಎರಡು ವಾರಗಳ ನಂತರ ಎಷ್ಟು ಪ್ರಮಾಣದಲ್ಲಿ ದೃಷ್ಟಿ ಹೋಗಿದೆ ಎಂಬುದು ತಿಳಿಯಲಿದೆ’ ಎಂದು ಚಿಕಿತ್ಸೆ ನೀಡುತ್ತಿರುವ ವೈದ್ಯರು ತಿಳಿಸಿದ್ದಾರೆ.

ಅಗರವಾಲ್ ಕಣ್ಣಿನ ಆಸ್ಪತ್ರೆಯಲ್ಲಿ 9 ಮಂದಿ ದಾಖಲಾಗಿ, ಚಿಕಿತ್ಸೆ ಪಡೆಯುತ್ತಿದ್ದಾರೆ.

ಪಟಾಕಿ ಸಿಡಿಸುವ ವೇಳೆ ಸಾರ್ವಜನಿಕರು ಎಚ್ಚರ ವಹಿಸಬೇಕು ಹಾಗೂ ಮಕ್ಕಳ ಕಣ್ಣಿಗೆ ಹಾನಿ ಆಗದಂತೆ ಕನ್ನಡಕ ಧರಿಸಬೇಕು ಎಂದು ವೈದ್ಯರು ಸಲಹೆ ನೀಡಿದ್ದಾರೆ.

ಪಟಾಕಿ ಅಕ್ರಮ ಮಾರಾಟ 56 ಎಫ್‌ಐಆರ್ ದಾಖಲು

ಬೆಂಗಳೂರು: ದೀಪಾವಳಿ ಹಬ್ಬದ ಅಂಗವಾಗಿ ನಗರದ ವಿವಿಧ ಸ್ಥಳಗಳಲ್ಲಿ ಪಟಾಕಿಯನ್ನು ಅಕ್ರಮವಾಗಿ ಮಾರಾಟ ಹಾಗೂ ದಾಸ್ತಾನು ಮಾಡಲಾಗಿದ್ದು, ಅಂತಹ ವರ್ತಕರಿಗೆ ನಗರ ಪೊಲೀಸರು ಬಿಸಿ ಮುಟ್ಟಿಸುತ್ತಿದ್ದಾರೆ.

ತಳ್ಳುಗಾಡಿ, ರಸ್ತೆ ಬದಿ ಹಾಗೂ ಗೂಡಂಗಡಿಗಳಲ್ಲಿ ಪಟಾಕಿ ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು, ಪಟಾಕಿ ಜಪ್ತಿ ಮಾಡಿಕೊಳ್ಳಲಾಗಿದೆ. ಅಲ್ಲದೇ, 56ಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

‘ಪಟಾಕಿ ಮಾರಾಟಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು. ದೊಡ್ಡ ಸಂಖ್ಯೆಯಲ್ಲಿ ಅರ್ಜಿಗಳು ಬಂದಿದ್ದವು. ನಗರದ 72 ಮೈದಾನಗಳಲ್ಲಿ ತಾತ್ಕಾಲಿಕವಾಗಿ ಪಟಾಕಿ ಮಾರಾಟಕ್ಕೆ 315 ಪರವಾನಗಿ ನೀಡಲಾಗಿದೆ. ಆದರೆ, ಪರವಾನಗಿ ಪಡೆಯದ ಕೆಲವರು ರಸ್ತೆಬದಿ ಹಾಗೂ ತಳ್ಳುಗಾಡಿಗಳಲ್ಲಿ ಪಟಾಕಿ ಮಾರಾಟ ನಡೆಸುತ್ತಿರುವುದು ಕಂಡುಬಂದಿದೆ. ಅಂತಹವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಉತ್ತರ ವಿಭಾಗದಲ್ಲಿ 9, ದಕ್ಷಿಣ 4, ಪೂರ್ವ 6, ಈಶಾನ್ಯ 19, ಆಗ್ನೇಯ 9, ವೈಟ್‌ಫೀಲ್ಡ್ 9 ಸೇರಿದಂತೆ ಒಟ್ಟು 56 ಪ್ರಕರಣಗಳು ದಾಖಲಾಗಿವೆ. ಶನಿವಾರ ಹಾಗೂ ಭಾನುವಾರ ಸಹ ಕಾರ್ಯಾಚರಣೆ ನಡೆಸಲಾಗುವುದು’ ಎಂದು ಪೊಲೀಸರು ಹೇಳಿದರು.

ನಿಯಮ ಉಲ್ಲಂಘನೆ: ಹಸಿರು ಪಟಾಕಿ ಸಿಡಿಸಲು ಮಾತ್ರ ಅವಕಾಶ ಕಲ್ಪಿಸಲಾಗಿದೆ. ರಾತ್ರಿ 8ರಿಂದ 10ವರೆಗೆ ಮಾತ್ರ ಪಟಾಕಿ ಸಿಡಿಸಲು ಅನುಮತಿ ನೀಡಲಾಗಿದೆ. ಆದರೆ, ಹಗಲು ವೇಳೆಯಲ್ಲೂ ಪಟಾಕಿ ಸಿಡಿಸಲಾಗಿದ್ದು, ಅಂತಹವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

एचएलएल लाइफ़केयर लिमिटेड (भारत सरकार का उद्यम)
HLL Lifecare Limited (A Government of India Enterprise)
CIN: U25193 KL 1966 GOI 002621
Corporate & Regd. Office: Poojappura, Thiruvananthapuram-695 012, Kerala

WALK IN SELECTION

HLL Lifecare Limited (HLL), a Mini Ratna Central Public Sector Enterprise under the Ministry of Health & Family Welfare, Government of India is a global provider of high-quality healthcare products & services.

Retail Business Division of HLL has set-up **Janasanjeevini Drug Stores at various Government Hospitals of Karnataka state and Amrit Pharmacy outlet at NIMHANS Bangalore** for which the company is looking for dynamic and performance driven professionals with the right attitude for the following position on **Fixed Term Contract** basis.

POSITION	QUALIFICATION & EXPERIENCE
PHARMACIST	B.Pharm / D.Pharm with minimum 2 years of post qualification experience in retail pharmacy.
ASSISTANT PHARMACIST	B Pharm / D Pharm

Date of walk in selection	Venue
04.11.2024	Amrit Pharmacy, National Institute of Mental Health and Neuro Sciences (NIMHANS), Hosur Road, Bangalore- 560 029
07.11.2024	Janasanjeevini Drug Store, Government District Hospital, Athani Road, Shastri Nagar, Vijaypur, Vijayapura- 586 102

Interested candidates may attend the walk - in selection in between 10.00 am and 01.00 pm. **Surrendering of Pharmacy Council registration certificate is mandatory.** For more details on the eligibility criteria and for downloading the application form please visit www.lifecarehll.com. Contact No - 9188401559, Email: rbdhr@lifecarehll.com.

स्वस्थ पीढ़ियों के लिए नवान्वेषण | Innovating for Healthy Generations

ನೆಟ್ಟಾರು ಪ್ರಕರಣ: ಕೇಸ್ ಡೈರಿ ಪ್ರತಿ ಪುಟಕ್ಕೂ ಸಹಿ- ಮೇಲ್ಮನವಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತನಿಖಾ ಸಂಸ್ಥೆಗಳು ನಿರ್ವಹಿಸುತ್ತಿರುವ ಕೇಸ್ ಡೈರಿಯನ್ನು (ಸಿ.ಡಿ) ತಿದ್ದುವ ಅಥವಾ ತಿರುಚುವ ಸಾಧ್ಯತೆ ಇರುವ ಕಾರಣ ತನಿಖಾಧಿಕಾರಿಯು ಅದರ ಪ್ರತಿ ಪುಟಕ್ಕೂ ಸಹಿ ಹಾಕುವಂತೆ ನಿರ್ದೇಶಿಸಬೇಕು’ ಎಂದು ಕೋರಲಾಗಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ವಜಾ ಮಾಡಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿ ಯುವ ಮೋರ್ಚಾ ಸದಸ್ಯ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಆರೋಪಿ ಮೊಹಮ್ಮದ್ ಶಿಯಾಬ್ ಈ ಸಂಬಂಧ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

‘ಚಾಲ್ತಿ ಕಾನೂನುಗಳ ಅನುಸಾರ ಕೇಸ್ ಡೈರಿಯಲ್ಲಿ ಸಹಿ ಹಾಕಲು ಅವಕಾಶ ನೀಡುವಂತಹ ನಿಯಮಗಳಿಲ್ಲ. ಹೀಗಾಗಿ, ಏನೇ ತಕರಾರುಗಳಿದ್ದರೆ ಅವುಗಳನ್ನು ಹಾಲಿ ಕಾನೂನುಗಳ ಅಡಿ ವಿಶ್ಲೇಷಿಸಬಹುದೇ ಹೊರತು, ವಿಶ್ಲೇಷಣೆಯ ಹೆಸರಿನಲ್ಲಿ ಕೋರ್ಟ್ ಹೊಸ ಕಾನೂನು ಜಾರಿಗೊಳಿಸಲಾಗದು’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಶಾಸನಗಳಲ್ಲಿ ಇರುವ ಪದಗಳನ್ನು ವ್ಯಾಖ್ಯಾನಿಸಲು ಅಥವಾ ವಿಶ್ಲೇಷಿಸಲು ಕೋರ್ಟ್‌ಗೆ ಅಧಿಕಾರವಿದೆ. ಶಾಸನ ರೂಪಿಸಿದ ನಂತರ ಅದರಲ್ಲಿರುವ ಪದಗಳನ್ನು ಹೊರತುಪಡಿಸಿ ನ್ಯಾಯಾಲಯವೇ ಹೆಚ್ಚುವರಿ ಪದಗಳನ್ನು ಸೇರ್ಪಡೆ ಮಾಡಲು ಆಗದು’ ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯ ತನಿಖಾಧಿಕಾರಿಗೆ ‘ಕೇಸ್ ಡೈರಿ ಹಾಜರುಪಡಿಸಿ’ ಎಂದು ತನಿಖಾಧಿಕಾರಿಗೆ ನಿರ್ದೇಶನ ನೀಡಿತ್ತು. ಅದರಂತೆ ತನಿಖಾಧಿಕಾರಿ ಕೇಸ್ ಡೈರಿ ಸಲ್ಲಿಸಿ ಅದನ್ನು ವಾಪಸ್ ಪಡೆದುಕೊಂಡಿದ್ದರು. ಇದಕ್ಕೆ ಆರೋಪಿ ಮೊಹಮ್ಮದ್ ಶಿಯಾಬ್ ಮೆಮೊ ಸಲ್ಲಿಸಿ, ‘ಕೇಸ್ ಡೈರಿಯಲ್ಲಿ ಏನಾದರೂ ಸೇರ್ಪಡೆ ಅಥವಾ ತಿದ್ದುಪಡಿ ಮಾಡುವ ಸಾಧ್ಯತೆ ಇದೆ. ಹಾಗಾಗಿ, ತನಿಖಾಧಿಕಾರಿ ಕೋರ್ಟ್‌ಗೆ ಕೇಸ್ ಡೈರಿ ಸಲ್ಲಿಸಿದಾಗ ಅದರ ಪ್ರತಿ ಪುಟದಲ್ಲೂ ಸಹಿ ಹಾಕುವಂತೆ ನಿರ್ದೇಶಿಸಬೇಕು’ ಎಂದು ವಿಚಾರಣಾ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಆದರೆ, ವಿಚಾರಣಾ ನ್ಯಾಯಾಲಯ 2022ರ ನವೆಂಬರ್ 16ರಂದು ಈ ಮನವಿಯನ್ನು ತಿರಸ್ಕರಿಸಿತ್ತು.

ಇದನ್ನು ಪ್ರಶ್ನಿಸಿ ಆರೋಪಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ ಈ ರಿಟ್ ಅರ್ಜಿಯನ್ನು ವಜಾ ಮಾಡಿ ವಿಚಾರಣಾ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದಿತ್ತು.

‘ನಿವೇಶನ ವಾಪಸ್ ಪಡೆಯಲು ಕ್ರಮ’

ಮೈಸೂರು: ‘ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 50:50 ಅನುಪಾತದಡಿ ನಡೆದಿರುವ ಹಂಚಿಕೆಯಲ್ಲಿ ಅಕ್ರಮ ಕಂಡು ಬಂದಿದ್ದರೆ ಅಂಥ ನಿವೇಶನಗಳನ್ನು ವಾಪಸ್ ಪಡೆಯಲಾಗುವುದು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ಇಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಮುಡಾ ಪ್ರಕರಣದ ತನಿಖೆ ನಡೆಯುತ್ತಿದ್ದು, ಅಕ್ರಮವಾಗಿದ್ದರೆ ನಿಶ್ಚಿತವಾಗಿ ಅವು ಕಾನೂನು ವ್ಯಾಪ್ತಿಗೆ ಬರಲಿವೆ’ ಎಂದರು.

‘ಗ್ಯಾರಂಟಿ ಯೋಜನೆಯನ್ನು ಪರಿಷ್ಕರಿಸುವುದಿಲ್ಲ. ಯೋಜನೆಗಳನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ. ಕೆಲವರಿಗೆ ವಿದ್ಯುತ್ ಬಿಲ್ ಕಟ್ಟಲು ಆಗುತ್ತದೆ. ಮತ್ತೆ ಕೆಲವರು ಬಸ್ ಟಿಕೆಟ್ ಹಣ ಕೊಡುತ್ತೇವೆನ್ನುತ್ತಾರೆ. ಅದು ಅವರಿಚ್ಛೆ. ಸರ್ಕಾರ ಎಲ್ಲರಿಗೂ ಯೋಜನೆಗಳನ್ನು ನೀಡಿದೆ’ ಎಂದರು. ‘ಚನ್ನಪಟ್ಟಣ ಕ್ಷೇತ್ರದಲ್ಲಿ ಮತದಾರರಿಗೆ ಆಮಿಷವೊಡ್ಡಲಾಗಿರುವ ಬಗ್ಗೆ ಚುನಾವಣಾ ಆಯೋಗವು ಕ್ರಮವಹಿಸಲಿದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮುಡಾ: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮಾನಹಾನಿ ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ದೂರು ನೀಡಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನನ್ನ ವಿರುದ್ಧ ಕೀಳು ಅಭಿರುಚಿಯ ಹೇಳಿಕೆ ನೀಡಿದ್ದು, ಅವರ ವಿರುದ್ಧ ಮಾನಹಾನಿ ಪ್ರಕರಣ ದಾಖಲಿಸಲು ಆದೇಶಿಸಬೇಕು’ ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ ಜನಪ್ರತಿನಿಧಿಗಳ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದಾರೆ.



‘ರಾಜ್ಯಪಾಲರು ಸಿದ್ದರಾಮಯ್ಯ ವಿರುದ್ಧ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ 2024ರ ಆಗಸ್ಟ್ 2ರಂದು ತನಿಖೆಗೆ ಅನುಮತಿ ನೀಡಿ ಆದೇಶ ಹೊರಡಿಸಿದ ನಂತರ ಸಿದ್ದರಾಮಯ್ಯ ಮಾಧ್ಯಮ ಗೋಷ್ಠಿ ನಡೆಸಿದ್ದರು. ಅಲ್ಲಿ ನನ್ನ ವಿರುದ್ಧ ಮಾನ ಹಾನಿಕರ ವಾದ ಕಪೋಲಕಲ್ಪಿತ, ಸುಳ್ಳು ಆರೋಪಗಳನ್ನು ಮಾಡಿದ್ದಾರೆ. ಏಕ ವಚನದಲ್ಲಿ ನಿಂದಿಸುವ ಮೂಲಕ ನನ್ನ ಘನತೆಗೆ ಕುಂದು ತಂದಿದ್ದಾರೆ. ನನ್ನನ್ನು ಬ್ಲ್ಯಾಕ್‌ಮೇಲರ್ ಎಂದು ಜರಿದಿದ್ದಾರೆ. ಸುಪ್ರೀಂ ಕೋರ್ಟ್ ನನಗೆ ₹ 25 ಲಕ್ಷ ದಂಡ ವಿಧಿಸಿದೆ ಎಂದಿದ್ದಾರೆ. ಇದನ್ನು ಕನ್ನಡ ಮತ್ತು ರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿವೆ. ಅಂತೆಯೇ, ಈ ವಿಚಾರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಿಸುವ ಮೂಲಕ ನನ್ನ ತೇಜೋವಧೆ ಮಾಡಲಾಗಿದೆ. ಇವೆಲ್ಲವೂ ನಿರಾಧಾರ ಆರೋಪಗಳು’ ಎಂದು ದೂರಿನಲ್ಲಿ ವಿವರಿಸಿದ್ದಾರೆ.

‘ಸಿದ್ದರಾಮಯ್ಯ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ಕಾಯ್ದೆ-2023ರ ಕಲಂ 356 (1) ಮತ್ತು (2)ರ ಅನ್ವಯ ಅಪರಾಧ ಪ್ರಕರಣ ದಾಖಲಿಸಬೇಕು’ ಎಂದು ಅಬ್ರಹಾಂ ದೂರಿನಲ್ಲಿ ಮನವಿ ಮಾಡಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಮನೆ ಕಟ್ಟಲು ಸೈಟು ಮಾತ್ರ ಸಾಕಾ..?

ಮನೆ ಎಲ್ಲಿ ಕಟ್ಟುತ್ತಿದ್ದೇವೆ ಎಂದು ಹೇಳಲು ಹೆಮ್ಮೆ ಇರಬೇಡವೆ..?

ಹಾಸನಾಂಬ
ಸಿಟಿ ಡೆವಲಪರ್ಸ್ ಮತ್ತು ಬಿಲ್ಡರ್ಸ್
HAASANAMBA
CITY DEVELOPERS AND BUILDERS

(ಚನ್ನರಾಯಪಟ್ಟಣ)

"ಶ್ರೀ H.D. ದೇವೇಗೌಡ ಸ್ಮಾರ್ಟ್ ಸಿಟಿ"

ಸ್ವಚ್ಛ ಮತ್ತು ಸುಂದರ ಪ್ರಕೃತಿಯ ನಡುವೆ
ವಿಶಾಲವಾಗಿ ಹರಡಿಕೊಂಡ ಬಡಾವಣೆ..

ಮನೆ ಕಟ್ಟಲು ಮಾತ್ರವಲ್ಲ ಭವಿಷ್ಯದ
ಹೂಡಿಕೆಗೂ ಉತ್ತಮ ಆಯ್ಕೆ

Actual Photo

**ಉತ್ತಮ ರಸ್ತೆ, ಕುಡಿಯುವ ನೀರು
ವಿದ್ಯುತ್, ಪಾರ್ಕ್, ವಾಕಿಂಗ್ ಟ್ರ್ಯಾಕ್
ಓಪನ್ ಜಿಮ್ ಹಾಗೂ
ಎಲ್ಲ ಮೂಲಭೂತ ಮತ್ತು ಆಧುನಿಕ
ಸೌಕರ್ಯಗಳನ್ನು ಹೊಂದಿದೆ.**

ಇಲ್ಲಿ ನಿವೇಶನ ಖರೀದಿಸಲು
ಬ್ಯಾಂಕ್ ಲೋನ್ ದೊರೆಯುತ್ತದೆ.

Approved by DTCP & RERA

RERA APPROVED · DTCP APPROVED · BANK LOAN AVAILABLE · E-Khata

Scan for Location



ಸಂಪರ್ಕಿಸಿ : 70261 88688

Actual Photo

Actual Photo

Actual Photo

94+
ಎಕರೆ
ವಿಶಾಲವಾದ ಬಡಾವಣೆ

ವಿಳಾಸ : ಅನಘ ಗ್ರ್ಯಾಂಡ್ ಹೋಟೆಲ್ ಹತ್ತಿರ ಬರಗೂರು ಹ್ಯಾಂಡ್ ಪೋಸ್ಟ್, ಚನ್ನರಾಯಪಟ್ಟಣ
ಬಡಾವಣೆಯ ನಿರ್ಮಾಣ ಹಾಸನಾಂಬ ಸಿಟಿ ಡೆವಲಪರ್ಸ್ ಮತ್ತು ಬಿಲ್ಡರ್ಸ್

13 ಗಂಟೆಗಳ ತಡೆರಹಿತ ಶಾಪಿಂಗ್
(ಮಳಿಗೆಗಳು 9.30AM - 10.30PM)

ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ

FINANCE BONANZA
Upto ₹10,000 ಕ್ಯಾಶ್ ಬ್ಯಾಕ್*

CASH BACK BONANZA
Upto ₹26,000 ಕ್ಯಾಶ್ ಬ್ಯಾಕ್*

ಬಲಿಪಾಡ್ಯಮಿ Sale

ಸ್ಕ್ರ್ಯಾಚ್ ಮಾಡಿ ಗೆಲ್ಲಿರಿ* ಭರವಸೆಯ
ಚಿನ್ನ ಮತ್ತು ಬೆಳ್ಳಿ ನಾಣ್ಯಗಳು
ಇಂದು ಮಾತ್ರ

EXCHANGE DHAMAKA
Upto ₹65,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್, ಗೃಹೋಪಯೋಗಿ ವಸ್ತುಗಳು, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು.
ಎಕ್ಸ್‌ಚೇಂಜ್ ಮೇಲೆ*

ಉಚಿತ*
FIRE-BOLTT SMART CALLING WATCH WORTH ₹20000

AXIS BANK | citi | HDFC BANK | HSBC | ICICI Bank | IndusInd Bank | kotak | RBL BANK | Union Bank | YES BANK | Standard Chartered | Bank of Baroda | FEDERAL BANK | SBI card

FINANCE POWERED BY Groww — 0% EMI | Upto 3,500 Cash Back* | MIN PRODUCT VALUE ₹10,000

1 ಇ.ಎಮ್.ಐ ಉಚಿತ*

HDFC BANK — FESTIVE TREATS — 10% INSTANT DISCOUNT ON CC & DC EMI* MIN SWIPE ₹17,500 MAX CASH BACK UPTO ₹3,000

IDFC FIRST Bank CREDIT CARDS — 5% INSTANT CASHBACK ON CC EMI* MIN SWIPE ₹5000 MAX CASH BACK UPTO ₹10000

YES BANK — 5% INSTANT CASHBACK ON CC EMI* MIN SWIPE ₹20000 MAX CASH BACK UPTO ₹2000

DBS BANK — 5% INSTANT CASHBACK ON CC EMI* MIN SWIPE ₹15000 MAX CASH BACK UPTO ₹2500

ASSURED BUYBACK UPTO 70% On New Purchase*

Redmi NOTE 13 5G 6+128 — EFFECTIVE PRICE ₹14,999* (PRICE AFTER CASH BACK) — EMI STARTS FROM ₹1,250 — ಉಚಿತ: 10000 MAH POWERBANK WORTH ₹1599*

vivo Y200E 8/128 — EFFECTIVE PRICE ₹17,290* (PRICE AFTER CASH BACK) — EMI STARTS FROM ₹1,441 — ಉಚಿತ: BT NECK BAND OR 10000 MAH POWER BANK WORTH ₹1599*

oppo F27 8/128 — EFFECTIVE PRICE ₹17,690* (PRICE AFTER CASH BACK) — EMI STARTS FROM ₹1,474 — ಉಚಿತ: BT NECK BAND OR 10000 MAH POWER BANK WORTH ₹1599*

SAMSUNG A35 8+128 — ₹25,999* — EMI STARTS FROM ₹2,166 — GET: EARBUDS @ ₹199*

iPhone 16 — EFFECTIVE PRICE ₹74,900* (PRICE AFTER CASH BACK) EXCHANGE BONUS UPTO ₹6000 — EMI STARTS FROM ₹2,825 — ಉಚಿತ: ANC EARBUDS OR WIRELESS MAGSAFE POWER BANK WORTH ₹6499*

Lenovo SLIM 3i — 10% CASH BACK — HOT DEALS
- 14TH GEN CORE5 120U
- 16GB, 512GB SSD
- 15.6 FHD
- WIN 11 MSO, 21

OFFER PRICE ₹58,990 — ಇ.ಎಮ್.ಐ ₹4,916 — MRP ₹95,090 — 2 YEARS WARRANTY
ಉಚಿತ: UPGRADE TO 2 YRS WARRANTY + BAG + SMART WATCH WORTH ₹10999*

hp VICTUS — 10% CASH BACK
- RYZEN 5, 5600H
- 512GB SSD, 16GB
- 4GB GFX RX6500M
- 15.6 FHD 144 HZ
- WIN 11

OFFER PRICE ₹53,990 — ಇ.ಎಮ್.ಐ ₹4,499 — MRP ₹67,264
ಉಚಿತ: SMART WATCH WORTH ₹7,999*

MacBook — EMI STARTS FROM ₹3,031 — UPTO ₹10000 CASHBACK
ಉಚಿತ: 1 YEAR EXTENDED WARRANTY WORTH ₹9999*

Lenovo SLIM 3 — 10% CASH BACK
- RYZEN 5 7520U
- 16GB, 512GB SSD
- RADEON 610M
- 15.6" FHD
- WIN 11 MSO, 21

OFFER PRICE ₹43,990 — ಇ.ಎಮ್.ಐ ₹3,666 — MRP ₹69,890
ಉಚಿತ: 32GB PENDRIVE AND W/L MOUSE WORTH ₹1,299*

DELL INS 15 3535 — 10% CASH BACK
- Ryzen 3-7320U
- 8GB 512GB SSD
- 15.6 FHD
- Win 11 MSO 21

OFFER PRICE ₹31,490 — ಇ.ಎಮ್.ಐ ₹2,624 — MRP ₹49,395
ಉಚಿತ: 32GB PENDRIVE + W/L MOUSE WORTH ₹1299*

SAMSUNG 98 ಇಂಚ್ ಕ್ಯೂಎಲ್‌ಇಡಿ SMART TV 98Q80C — ಇ.ಎಮ್.ಐ ₹19,990

LG 65 ಇಂಚ್ ಒಎಲ್‌ಇಡಿ EVO AI 4K SMART TV OLED65G46LA — ಇ.ಎಮ್.ಐ ₹2,999

SONY 65 ಇಂಚ್ 4K ULTRA HD HIGH DYNAMIC RANGE (HDR) SMART TV (GOOGLE TV) K-65XR80 — ಇ.ಎಮ್.ಐ ₹6,500

ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

Haier 43 ಕ್ಯೂಎಲ್‌ಇಡಿ GOOGLE TV — ಇ.ಎಮ್.ಐ ₹3,208
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

NVY PRIDE OF INDIA — LOWEST PRICE CHALLENGE — 4K ಎಲ್‌ಇಡಿ — 52% OFF
NVY Official LED partner of RCB

Model	Price	EMI
43 4K SMART	₹18,990	₹1,582
55 4K SMART	₹29,490	₹2,457

LG 650 Ltrs CONVERTIBLE SIDE BY SIDE REFRIGERATOR WITH PREMIUM GLASS DOOR, SMART INVERTER COMPRESSOR, HYGIENE FRESH+™ GL-B257DBM3 — ಇ.ಎಮ್.ಐ ₹3,999

SAMSUNG 653 LITRES SIDE BY SIDE RS76CG8103S9HL — ಇ.ಎಮ್.ಐ ₹4,990

ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

Whirlpool 411L 2 Star Convertible Frost Free Double-Door Refrigerator — ಇ.ಎಮ್.ಐ ₹3,733
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

BOSCH 7 ಕೆಜಿ ಫ್ರಂಟ್ ಲೋಡಿಂಗ್ — ಇ.ಎಮ್.ಐ ₹2,925
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

Godrej 8 ಕೆಜಿ ಫ್ರಂಟ್ ಲೋಡಿಂಗ್ — ಇ.ಎಮ್.ಐ ₹2,975
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

LG 28ಲೀ ಕನ್‌ವೆಕ್ಷನ್ ಮೈಕ್ರೋವೇವ್ 286UFW — ಇ.ಎಮ್.ಐ ₹2,142

DAIKIN 1.0 TON 3 STAR INVERTER SPLIT AC — ಇ.ಎಮ್.ಐ ₹3,249
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

OFFER VALID TILL STOCK LAST | OFFER VALID TILL STOCK LAST

MIXER GRINDER — ₹1,299 ONWARDS — Preethi, BAJAJ, Prestige, Greenchef, HAVELLS, Lifelong, Panasonic, morphy richards, Butterfly, V-GUARD

INDUCTION STOVE — ₹1,299 ONWARDS — Preethi, Prestige, Butterfly, Lifelong, V-GUARD, KENSTAR, HAVELLS

GEYSER — ₹2,990 ONWARDS — Racold, Haier, HAVELLS, BAJAJ, V-GUARD, Symphony, KENSTAR

WATER PURIFIER RO + UV — ₹7,490 ONWARDS — EUREKA FORBES, LG, BRITA, Livpure, HAVELLS

LG SOUND BAR SC9S, 3.1.3 CH, 400W, DOLBY ATMOS & IMAX ENHANCED. — OFFER PRICE ₹31,990 — EMI ₹2,666 — MRP ₹89,990

LG | SAMSUNG | SONY | Haier | Panasonic | NVY | IFB | Godrej | LLOYD | Whirlpool | BOSCH | Electrolux | PHILIPS | hp | acer | DELL | Lenovo | ASUS | vivo | oppo | ONEPLUS | mi | iPhone | JBL
BLUE STAR | HAFELE | Symphony | HAVELLS | USHA | DAIKIN | GENERAL | Prestige | VOLTAS | VOLTAS beko | Butterfly | Preethi | VIJAYALAKSHMI | ULTRA | EUREKA FORBES | pureit | Livpure | FABER | KENSTAR | Pigeon | BAJAJ | Crompton | MAHARAJA WHITELINE | V-GUARD | ZEBRONICS | KAFF | OZONE

GIRIAS THE CONSUMER DURABLE PEOPLE Since 1971

ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಉತ್ತರಹಳ್ಳಿ 90362 89563 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಭಾರ್ತಿಯಾ ಮಾಲ್ 70900 00981 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633 | ಹೊಸೂರು ರಸ್ತೆ 9035499022

STORE LOCATOR

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ರಿಯಾಯಿತಿ. ರೂ.10000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. 3 ಇಎಂಐ ಅನ್ನು ತೆರವುಗೊಳಿಸಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / ಬಿಎಫ್‌ಎಲ್ ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ. ಆಯ್ಕೆಮಾಡಿದ ಮೊಬೈಲ್‌ಗಳಲ್ಲಿ 70% ವರೆಗೆ ಖಚಿತವಾದ ಮರುಖರೀದಿಯು ಮಾನ್ಯವಾಗಿರುತ್ತದೆ.*ಉತ್ತಮ ಕೆಲಸದ ಸ್ಥಿತಿಯಲ್ಲಿರಲು ಎಂ.ಆರ್.ಪಿ ಮತ್ತು ಉತ್ಪನ್ನದ ಮೇಲೆ ಮಾನ್ಯವಾದ ವಿನಿಮಯ ಕೊಡುಗೆ. ಹಳೆಯ ಉತ್ಪನ್ನದ ಸ್ಥಿತಿಯನ್ನು ಆಧರಿಸಿ ವಿನಿಮಯ ಮೌಲ್ಯವು ಭಿನ್ನವಾಗಿರುತ್ತದೆ. ಗೋಲ್ಡ್/ಸಿಲ್ವರ್ ಸ್ಕ್ರಾಚ್ ಕಾರ್ಡ್ ₹25000 ಮತ್ತುಅಧಿಕ ಖರೀದಿಯ ಮೇಲೆ, ಆಯ್ದ ಮಾದರಿಗಳು ಮಾಡೆಲ್ ಮತ್ತು ಬ್ರಾಂಡ್ ಮಾನ್ಯವಾಗಿದೆ.

165 ಮೆಗಾ ಸ್ಟೋರ್ಸ್, ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com

"like" us on facebook HTTPS://WWW.FACEBOOK.COM/GIRIAS.INDIA

WE SUPPORT ROUND TABLE INDIA LADIES CIRCLE INDIA www.roundtableindia.org www.ladiescircleindia.org

ಭೂಮಿಕಾ
ಮಹಿಳೆಯ ಆಪ್ತ ಸಂಗಾತಿ

> ಹೆಣ್ಣುಮಕ್ಕಳೆಲ್ಲ ದುಡಿಯುವುದಷ್ಟೆ ಅಲ್ಲದೆ ಹೂಡಿಕೆಯತ್ತಲೂ ಮನಸ್ಸು ಮಾಡಬೇಕು. ಉಳಿತಾಯ ಹಾಗೂ ಹೂಡಿಕೆಗೆ ಸಂಬಂಧಿಸಿದಂತೆ ಮಾರುಕಟ್ಟೆಯಲ್ಲಿ ಹಲವು ಪ್ರಚಲಿತ ಮಾರ್ಗಗಳಿವೆ. ಅದನ್ನು ತಿಳಿದುಕೊಂಡು, ಅನುಷ್ಠಾನಗೊಳಿಸಿದಾಗಷ್ಟೆ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲು ಸಾಧ್ಯ. ಆದಾಯ, ಖರ್ಚು, ವೆಚ್ಚ, ಉಳಿತಾಯ ಎಲ್ಲದರ ನೀಲನಕ್ಷೆಯೊಂದು ಹೆಣ್ಣುಮಕ್ಕಳ ಮುಂದಿದ್ದರೆ, ಅದಕ್ಕೆ ತಕ್ಕನಾದ ಬದುಕನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಬೆಳಕಿನ ಹಬ್ಬದ ಈ ಹೊತ್ತಿನಲ್ಲಿ ಮಹಿಳೆಯರಿಗಾಗಿ ಒಂದಷ್ಟು 'ಅರ್ಥ' ಸಲಹೆಗಳು ಇಲ್ಲಿವೆ.

ಉಳಿತಾಯದಿಂದ ಹೂಡಿಕೆ ಕಡೆಗೆ

ವಿಜಯ ಜೋಷಿ

ಭಾರತದಲ್ಲಿ ಮಹಿಳೆಯರಿಗೂ ಬಂಡವಾಳ ಮಾರುಕಟ್ಟೆಯ ಹೂಡಿಕೆಗೂ ಆಗಿಬರುವುದಿಲ್ಲ ಎಂಬುದನ್ನು ಈ ವರ್ಷದ ಜನವರಿಯಲ್ಲಿ ಬಹಿರಂಗವಾದ ಅಧ್ಯಯನ ವರದಿಯೊಂದು ಹೇಳಿತ್ತು. ಡಿಬಿಎಸ್ ಬ್ಯಾಂಕ್ ಮತ್ತು ರೇಟಿಂಗ್ಸ್ ಸಂಸ್ಥೆ ಕ್ರಿಸಿಲ್ ಒಟ್ಟಾಗಿ ಸಿದ್ಧಪಡಿಸಿದ ವರದಿಯೊಂದು, ದೇಶದ ನಗರವಾಸಿ ಮಹಿಳೆಯರ ಪೈಕಿ ಶೇಕಡ 51ರಷ್ಟು ಮಂದಿ ತಮ್ಮ ಹಣವನ್ನು ನಿಶ್ಚಿತ ಠೇವಣಿಗಳಲ್ಲಿ ಹಾಗೂ ಉಳಿತಾಯ ಖಾತೆಯಲ್ಲಿ ಇರಿಸುವುದನ್ನು ಇಷ್ಟಪಡುತ್ತಾರೆ ಎಂದು ಹೇಳಿತ್ತು.

ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ತೊಡಗಿಸುವ ಮಹಿಳೆಯರ ಪ್ರಮಾಣ ಶೇ 15ರಷ್ಟು, ನೇರವಾಗಿ ಷೇರುಗಳಲ್ಲಿ ಹಣ ತೊಡಗಿಸುವ ಮಹಿಳೆಯರ ಪ್ರಮಾಣ ಶೇ 7ರಷ್ಟು ಮಾತ್ರ ಎಂಬುದನ್ನು ದೇಶದ 10 ನಗರಗಳ 800ಕ್ಕೂ ಹೆಚ್ಚಿನ ಮಹಿಳೆಯರನ್ನು ಒಳಗೊಂಡಿದ್ದ ಆ ಸಮೀಕ್ಷೆಯು ಕಂಡುಕೊಂಡಿತ್ತು. ಆದರೆ, ಪರಿಸ್ಥಿತಿಯಲ್ಲಿ ಬದಲಾವಣೆ ಆಗುತ್ತಿದೆ ಎಂಬುದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧಿಕಾರಿಗಳ ಮಾತುಗಳು ಹೇಳುತ್ತವೆ.

'ಈಗ ಭಾರತದ ಷೇರುಪೇಟೆಗಳಲ್ಲಿ ಹೂಡಿಕೆ ಮಾಡುತ್ತಿರುವವರ ಪೈಕಿ ಶೇಕಡ 22ರಷ್ಟು ಮಹಿಳೆಯರೇ ಇದ್ದಾರೆ' ಎಂಬುದನ್ನು ಸೆಬಿ ಅಧಿಕಾರಿಗಳು ಆಗಸ್ಟ್‌ನಲ್ಲಿ ತಿಳಿಸಿದ್ದರು. ಇಂದಿಗೂ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಬಂಡವಾಳ ಮಾರುಕಟ್ಟೆಯಲ್ಲಿ ಮಹಿಳೆಯರ ಪಾಲು ಹೆಚ್ಚಾಗುತ್ತಿರುವುದರಲ್ಲಿ ಹೊಸ ಕಾಲದ, ತಂತ್ರಜ್ಞಾನದ ಆಧಾರಿತ ಆ್ಯಪ್‌ಗಳ ಕೊಡುಗೆಯೂ ಇದೆ.

ಈಚೆಗೆ ಮತ್ತೆ ಕೆಲಸಕ್ಕೆ ಸೇರಿರುವ ಲಕ್ಷ್ಮಿ (ಹೆಸರು ಬದಲಾಯಿಸಲಾಗಿದೆ) ಅವರಿಗೆ ಷೇರುಪೇಟೆ ಅಂದರೆ ಆಗಿಬರುತ್ತಿರಲಿಲ್ಲ. ಅವರು ತಮ್ಮ ಉಳಿತಾಯದ ಹಣವನ್ನೆಲ್ಲ ಇರಿಸಿದ್ದು ಅಂಚೆ ಕಚೇರಿಯ ವಿವಿಧ ಉಳಿತಾಯ ಯೋಜನೆಗಳಲ್ಲಿ. ಅಲ್ಲಿ ಸಿಗುವ ಬಡ್ಡಿ ಪ್ರಮಾಣ ಕಡಿಮೆ ಎಂಬುದು ಗೊತ್ತಿದ್ದರೂ, ಅದು ಸುರಕ್ಷಿತ ಎಂದು ಅವರು ಹಾಗೆ ಮಾಡುತ್ತಿದ್ದರು. 'ಆದರೆ, ಹಣದುಬ್ಬರ ಹೆಚ್ಚಳ ಹಾಗೂ ಬಂಡವಾಳ ಮಾರುಕಟ್ಟೆಯಲ್ಲಿ ಸಿಗುವ ಲಾಭದ ಪ್ರಮಾಣ ಕಂಡು ನನಗೂ ಷೇರುಗಳಲ್ಲಿ ಹೂಡಿಕೆ ಮಾಡುವ ಮನಸ್ಸಾಯಿತು. ಆ್ಯಪ್ ಬಳಸಿ, ಮ್ಯೂಚುವಲ್ ಫಂಡ್ ಮೂಲಕ ಹೂಡಿಕೆ ಆರಂಭಿಸಿದ್ದೇನೆ. ಮನೆಯಿಂದಲೇ ಖಾತೆ ತೆರೆಯುವ, ಆಧಾರ್ ಸಂಖ್ಯೆ ಬಳಸಿ ಕೆವೈಸಿ ಪ್ರಕ್ರಿಯೆ ಪೂರ್ಣಗೊಳಿಸುವ ಅವಕಾಶವು ಹೂಡಿಕೆ ನಿರ್ಧಾರವನ್ನು ಕಾರ್ಯರೂಪಕ್ಕೆ ತರುವಲ್ಲಿ ಬಹಳ ನೆರವಿಗೆ ಬಂತು' ಎಂದು ಅವರು ಹೇಳುತ್ತಾರೆ. ಆ್ಯಪ್ ಆಧಾರಿತ ಹೂಡಿಕೆಯು ಬ್ಯಾಂಕ್‌ಗಳಿಗೆ, ಅಂಚೆ ಕಚೇರಿಗೆ ತೆರಳಿ ವಿವಿಧ ನಮೂನೆಗಳನ್ನು ಭರ್ತಿ ಮಾಡಿ, ಹಣ ಠೇವಣಿ ಇರಿಸುವುದಕ್ಕಿಂತ ಸುಲಭದ್ದಾಗಿದೆ ಎಂಬುದು ಅವರ ಅನಿಸಿಕೆ.

ಅವರ ಮಾತನ್ನು ದೇಶದ ಅತಿದೊಡ್ಡ ಷೇರು ಬ್ರೋಕರೇಜ್ ಹಾಗೂ ಮ್ಯೂಚುವಲ್ ಫಂಡ್ ವಿತರಕ ಕಂಪನಿಯಾದ 'ಗ್ರೋ' ಕೂಡ ಅನುಮೋದಿಸುತ್ತದೆ. 'ಈ ವರ್ಷದ ಜನವರಿಯಿಂದ ಆಗಸ್ಟ್‌ವರೆಗಿನ ಅವಧಿಯಲ್ಲಿ ಮಹಿಳೆಯರ ಕಡೆಯಿಂದ ಬರುತ್ತಿರುವ ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಸಂಖ್ಯೆಯು 3.5 ಪಟ್ಟು ಹೆಚ್ಚಾಗಿದೆ. 2023ರಲ್ಲಿ ಪ್ರತಿ ಐದು ಎಸ್‌ಐಪಿ ಹೂಡಿಕೆಗಳಲ್ಲಿ ಒಂದು ಎಸ್‌ಐಪಿ ಮಹಿಳೆಯ ಕಡೆಯಿಂದ ಆಗುತ್ತಿತ್ತು (ಒಟ್ಟು ಎಸ್‌ಐಪಿಗಳಲ್ಲಿ ಶೇ 20ರಷ್ಟು). 2024ರಲ್ಲಿ ಪ್ರತಿ ನಾಲ್ಕು ಎಸ್‌ಐಪಿಗಳಲ್ಲಿ ಒಂದು ಎಸ್‌ಐಪಿ ಮಹಿಳೆಯಿಂದ ಆಗುತ್ತಿದೆ (ಶೇ 25ರಷ್ಟು)' ಎಂದು ತಮ್ಮಲ್ಲಿನ ದತ್ತಾಂಶ ಆಧರಿಸಿ 'ಗ್ರೋ' ವಕ್ತಾರರು ಪ್ರಜಾವಾಣಿ ಜೊತೆ ಮಾಹಿತಿ ಹಂಚಿಕೊಂಡಿದ್ದಾರೆ.

ಷೇರು ಮಾರುಕಟ್ಟೆ ಹೂಡಿಕೆಯಿಂದ ಸಿಗುವ ಲಾಭದ ಪ್ರಮಾಣವು ಕೋವಿಡ್ ನಂತರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇರುವುದು ಮಾತ್ರವೇ ಅಲ್ಲದೆ, ಮಹಿಳೆಯರ ತೊಡಗಿಸಿಕೊಳ್ಳುವಿಕೆ ಹೆಚ್ಚಾಗಿರುವುದಕ್ಕೆ ಇನ್ನೂ ಹಲವು ಕಾರಣಗಳಿವೆ. 'ಹೂಡಿಕೆ ಪ್ರಕ್ರಿಯೆಯನ್ನು ಸುಲಭವಾಗಿಸುವಲ್ಲಿ ತಂತ್ರಜ್ಞಾನವು ಬಹಳ ದೊಡ್ಡ ಪಾತ್ರ ನಿರ್ವಹಿಸಿದೆ. ಆಧಾರ್ ಮೂಲಕ ನಡೆಯುವ ಇ-ಸಹಿ ಪ್ರಕ್ರಿಯೆಯು ಮನೆಯಿಂದಲೇ ಎಲ್ಲ ಕೆಲಸಗಳನ್ನು ನಿರ್ವಹಿಸುವುದನ್ನು ಸಾಧ್ಯವಾಗಿಸಿದೆ. ಇದರಿಂದಾಗಿ ಸ್ವತಂತ್ರವಾಗಿ ಹೂಡಿಕೆ ನಿರ್ಧಾರಗಳನ್ನು ಕೈಗೊಳ್ಳುವ ವಿಶ್ವಾಸವು ಹೆಣ್ಣುಮಕ್ಕಳಲ್ಲಿ ಮೂಡಿದೆ. ವಿಶ್ವಾಸಾರ್ಹ ವೇದಿಕೆಗಳಿಂದ ಅಗತ್ಯ ಮಾಹಿತಿ ಕಲೆಹಾಕುವ ಕೌಶಲ ಹೆಣ್ಣುಮಕ್ಕಳಿಗೆ ಇದೆ. ಹಣಕಾಸು ಸಂಸ್ಥೆಗಳು ಗ್ರಾಹಕಸ್ನೇಹಿ ಆ್ಯಪ್‌ಗಳನ್ನು ರೂಪಿಸಿರುವ ಕಾರಣ ಹೂಡಿಕೆ ಪ್ರಕ್ರಿಯೆಯು ಬಹಳ ಸರಳವಾಗಿದೆ. ಇವೆಲ್ಲವೂ ಒಟ್ಟಾಗಿ ಮಹಿಳೆಯರಿಗೆ ಬಂಡವಾಳ ಮಾರುಕಟ್ಟೆಯನ್ನು ಹತ್ತಿರವಾಗಿಸಿವೆ' ಎಂದು ಆ್ಯಕ್ಸಿಸ್ ಸೆಕ್ಯುರಿಟೀಸ್‌ನ ಆನ್‌ಲೈನ್ ವಹಿವಾಟುಗಳ ಮುಖ್ಯಸ್ಥ ಸಮೀರ್ ಶಾ ಅವರು ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಮಹಿಳೆಯರಲ್ಲಿ ಹೂಡಿಕೆಯ ಹವ್ಯಾಸವನ್ನು ಹೆಚ್ಚು ಮಾಡುವ ಉದ್ದೇಶದಿಂದಲೇ ಕೆಲವು ಆಸ್ತಿ ನಿರ್ವಹಣಾ ಕಂಪನಿಗಳು ಪ್ರತ್ಯೇಕ ತರಗತಿಗಳನ್ನು ಕೂಡ ಆರಂಭಿಸಿವೆ. ಅಲ್ಲದೆ, ಕೆಲವು ಬ್ರೋಕರೇಜ್ ಕಂಪನಿಗಳು ಮಹಿಳಾ ಹೂಡಿಕೆದಾರರಿಗೆ ಹೆಚ್ಚಿನ ರಿಯಾಯಿತಿಗಳನ್ನು ಕೂಡ ನೀಡುತ್ತಿವೆ.

'ಡಿಮ್ಯಾಟ್ ಖಾತೆ ತೆರೆಯುವ ಶುಲ್ಕ, ಖಾತೆ ನಿರ್ವಹಣಾ ಶುಲ್ಕ, ಬ್ರೋಕರೇಜ್ ಶುಲ್ಕದಲ್ಲಿ ಮಹಿಳೆಯರಿಗೆ ರಿಯಾಯಿತಿಗಳನ್ನು ಕೆಲವು ಕಂಪನಿಗಳು ನೀಡುತ್ತಿವೆ. ಮಹಿಳೆಯರು ಹಣಕಾಸಿನ ದೃಷ್ಟಿಯಿಂದ ಹೆಚ್ಚು ಮಾಹಿತಿ ಹೊಂದಿದವರಾಗುವಂತೆ ಮಾಡಲು ತರಬೇತಿ ಕಾರ್ಯಕ್ರಮಗಳನ್ನು ಕೂಡ ನಡೆಸಲಾಗುತ್ತದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ದೀಪಕ್ ಜಸನಿ ಹೇಳಿದರು.

'ಕುಟುಂಬಗಳು ಕಿರಿದಾಗುತ್ತಿರುವುದು, ಮದುವೆಯನ್ನು ತಡವಾಗಿ ಆಗುತ್ತಿರುವುದು, ಮಹಿಳೆಯರಲ್ಲಿ ಕೆಲವರು ಮದುವೆಯಿಂದ ದೂರ ಉಳಿಯುತ್ತಿರುವ ಕಾರಣದಿಂದಾಗಿಯೂ, ಹಣಕಾಸಿನ ಅರಿವು ಹೆಚ್ಚಾಗಿದೆ' ಎಂದರು.

'ಹಣಕಾಸಿನ ತೀರ್ಮಾನಗಳಲ್ಲಿ ಮಹಿಳೆಯರಿಗೆ, ಪುರುಷರಿಗೆ ಇರುವಂಥದ್ದೇ ಅಧಿಕಾರ ಇರಬೇಕು. ಆದರೆ, ಭಾರತದಲ್ಲಿ ಹಲವಾರು ಮಹಿಳೆಯರಿಗೆ ಮಾನಸಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅಡ್ಡಿಗಳು ಎದುರಾಗುತ್ತವೆ. ಮಹಿಳೆಯರು ಹಣಕಾಸಿನ ವಿಚಾರದಲ್ಲಿ ಇನ್ನಷ್ಟು ಸಬಲರಾಗುವಂತೆ ಮಾಡಲು ಹಾಗೂ ಹಣಕಾಸಿನ ಒಳಗೊಳ್ಳುವಿಕೆಯನ್ನು ಹೆಚ್ಚು ಮಾಡಲು ಹಣಕಾಸಿನ ಸಾಕ್ಷರತೆಯನ್ನು ಇನ್ನಷ್ಟು ಹೆಚ್ಚು ಮಾಡಬೇಕು' ಎಂದು ಅವರು ಹೇಳಿದರು.

ಇವುಗಳನ್ನು ಗಮನಿಸಬಹುದು...

ಭಾರತದ ಹತ್ತು ಮುಂಚೂಣಿ ಬ್ರೋಕರೇಜ್ ಕಂಪನಿಗಳು ಇವು: ಗ್ರೋ, ಜೆರೊದಾ, ಏಂಜೆಲ್ ವನ್, ಅಪ್‌ಸ್ಟಾಕ್ಸ್, ಐಸಿಐಸಿಐ ಡೈರೆಕ್ಟ್, ಕೋಟಕ್ ಸೆಕ್ಯುರಿಟೀಸ್, ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್, ಮೋತಿಲಾಲ್ ಓಸ್ವಾಲ್, ಎಸ್‌ಬಿಐ ಸೆಕ್ಯುರಿಟೀಸ್, ಪೇಟಿಎಂ ಮನಿ.

(*ದತ್ತಾಂಶಗಳನ್ನು ಆಧರಿಸಿದ ಮಾಹಿತಿ ಒದಗಿಸುವ ವೇದಿಕೆ ಸ್ಟಾಟಿಸ್ಟಾದಲ್ಲಿ ಇರುವ ಅಂಕಿ-ಅಂಶಗಳ ಪ್ರಕಾರ. ಇವುಗಳಲ್ಲಿ ಹೆಚ್ಚಿನ ಕಂಪನಿಗಳು ತಮ್ಮ ಆ್ಯಪ್ ಮೂಲಕ, ಮನೆಯಿಂದಲೇ ಡಿಮ್ಯಾಟ್ ಖಾತೆ ತೆರೆಯಲು, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಲು ಅವಕಾಶ ಕಲ್ಪಿಸುತ್ತವೆ.)

ಪ್ರಭಾವಿಸುವವರ ಪ್ರಭಾವ!

ಈಚಿನ ವರ್ಷಗಳಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕ ಹಣಕಾಸು ವಿಚಾರಗಳ ಬಗ್ಗೆ ಮಾಹಿತಿ ನೀಡುವವರ, ಪ್ರಭಾವ ಬೀರುವವರ ಸಂಖ್ಯೆ ಗಣನೀಯವಾಗಿದೆ. ಇವರನ್ನು ಫಿನ್‌ಫ್ಲುಯೆನ್ಸಿಯರ್ಸ್ ಎಂದು ಗುರುತಿಸಲಾಗುತ್ತಿದೆ. ಇವರು ಜನರ ಮೇಲೆ ಪ್ರಭಾವ ಬೀರುತ್ತಿರುವ ಬಗೆಯ ಕುರಿತು ಕೆಲವು ಟೀಕೆಗಳೂ ಇವೆ. ಆದರೆ, ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವಲ್ಲಿ ಇಂಥವರ ಕೊಡುಗೆ ಇದೆ ಎಂಬುದನ್ನು ತಜ್ಞರು ಗುರುತಿಸುತ್ತಾರೆ.

'ಫಿನ್‌ಫ್ಲುಯೆನ್ಸಿಯರ್‌ಗಳು ಹಾಗೂ ಬ್ರೋಕರೇಜ್ ಕಂಪನಿಗಳು ಹಣಕಾಸಿನ ಸಂಗತಿಗಳನ್ನು ಸರಳವಾಗಿ ಹೇಳುವ ಕೆಲಸಕ್ಕೆ ಮುಂದಾದರು. ಇದು ಮಹಿಳೆಯರು ಸೇರಿದಂತೆ ಬಂಡವಾಳ ಮಾರುಕಟ್ಟೆಗೆ ಮೊದಲ ಬಾರಿಗೆ ಪ್ರವೇಶಿಸುತ್ತಿರುವ ಎಲ್ಲರಿಗೂ ಸಹಾಯ ಮಾಡಿದೆ. ಮಹಿಳೆಯರನ್ನು ಕೇಂದ್ರೀಕರಿಸಿಕೊಂಡಿರುವ ಹಣಕಾಸು ವಿಷಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚೆಚ್ಚು ಸಿಗುತ್ತಿವೆ' ಎಂದು ಶೇರ್‌ಖಾನ್ ಬೈ ಬಿಎನ್‌ಪಿ ಪಾರಿಬಾಸ್‌ನ ಮುಖ್ಯ ಬಿಸಿನೆಸ್ ಅಧಿಕಾರಿ ಪರ್ಮಿಂದರ್ ವರ್ಮಾ ತಿಳಿಸಿದರು. ಈ ವರ್ಷದ ಫೆಬ್ರುವರಿಯಲ್ಲಿ ಮ್ಯೂಚುವಲ್ ಫಂಡ್‌ಗಳಲ್ಲಿ ಮಹಿಳೆಯರ ಪ್ರಮಾಣ ಹಿಂದಿನ ವರ್ಷದ ಫೆಬ್ರುವರಿಗೆ ಹೋಲಿಸಿದರೆ ಶೇಕಡ 25ರಷ್ಟು ಹೆಚ್ಚಾಗಿದೆ ಎಂಬುದನ್ನು ಮ್ಯೂಚುವಲ್ ಫಂಡ್ ಹೂಡಿಕೆಗೆ ಸಂಬಂಧಿಸಿದ ಸೇವೆ ಒದಗಿಸುವ 'ಕ್ಯಾಮ್ಸ್'ನ ವರದಿಯೊಂದು ಹೇಳಿದೆ ಎಂದು ವರ್ಮಾ ಮಾಹಿತಿ ನೀಡಿದರು.

ದೀಪಗಳ ಬೆಳಕು ಹಾಡುಗಳ ಹೊಳಪು

ಉಮಾ ಅನಂತ್

ಬೆಳಕಿನ ಹಬ್ಬ ದೀಪಾವಳಿ ತನ್ನ ಪ್ರಭಾವಳಿ ಬೀರಲಾರಂಭಿಸಿದೆ. ಹಬ್ಬಗಳ ಸಡಗರದಲ್ಲಿ ಜನ ತೇಲಾಡಲಾರಂಭಿಸಿದ್ದಾರೆ. ರಂಗು ರಂಗಿನ ರಂಗೋಲಿ, ಹೂವುಗಳ ಅಲಂಕಾರ, ತಳಿರು ತೋರಣ, ಸಾಲು ಸಾಲು ಹಣತೆಗಳ ದೀಪ, ಮನೆಯೊಳಗೆ ಘಮಘಮಿಸುವ ಸಿಹಿತಿಂಡಿ, ಪಟಾಕಿ, ಎಣ್ಣೆ ಸ್ನಾನ ಇವುಗಳ ಮಧ್ಯೆ ಕಿವಿಗೆ ಇಂಪಾಗುವ, ಮನಸ್ಸಿಗೆ ಹಿತವಾಗುವ, ಹೃದಯಕ್ಕೆ ಹತ್ತಿರವಾಗುವ ಮಧುರಾತಿಮಧುರ ಹಾಡುಗಳೂ ಹಬ್ಬಕ್ಕೆ ಉತ್ತಮ ಸಾಥಿ ನೀಡುತ್ತವೆ.

ದೀಪಾವಳಿ ಕುರಿತು 'ರಸಾಸ್ವಾದ' ಬೀರುವ ಹಾಡುಗಳು ಬಂದಿವೆ. ಈ ಹಾಡುಗಳು ಹಬ್ಬದ ಸೊಬಗನ್ನು ವರ್ಣಿಸುತ್ತವೆ, ಅದು ಲಘು ಶಾಸ್ತ್ರೀಯ ಹಾಡೇ ಆಗಿರಲಿ, ಜನಪದ ಹಾಡೇ ಇರಲಿ, ಸಿನಿಮಾ ಸಂಗೀತವೇ ಇರಲಿ, ಅಭಂಗ, ಚೀಜ್, ವಾದ್ಯ ಸಂಗೀತವೇ ಇರಲಿ, ದೀಪಗಳ ವೈಭವವನ್ನು ಸಾರುವುದನ್ನು ಕೇಳಲು ಮನಸ್ಸಿಗೆಷ್ಟು ಆನಂದ, ಕಿವಿಗೆಷ್ಟು ಶ್ರವಣಾನಂದಕರ! 'ಹಣತೆ ಹಣತೆ ಬೆಳಕಿನಲ್ಲಿ ದೀಪಾವಳಿಯು ಬಂದಿದೆ ವರುಷವೆಲ್ಲ ಹರುಷ ಚೆಲ್ಲಿ ಶುಭೋದಯವ ಸಾರಿದೆ'

ಈ ಹಾಡಿನಲ್ಲಿ ಬೆಳಕಿನ ಹಬ್ಬದ ಸೌಂದರ್ಯವೇ ಅಡಗಿದೆ.

ಬಾಲಿವುಡ್ ಸೂಪರ್ ಹಿಟ್ ಸಿನಿಮಾ 'ಚಿಚ್ಚೋರ್'ನಲ್ಲಿ ಖ್ಯಾತ ಗಾಯಕ ಕೆ.ಜೆ. ಯೇಸುದಾಸ್ ಅವರು ಹಾಡಿರುವ 'ಜಬ್ ದೀಪ್ ಜಲೇ ಆನಾ..' ಹಾಡನ್ನು ಕೇಳಿ, ಆನಂದಿಸಿ, ಆಸ್ವಾದಿಸದೇ ಇರುವ ಸಹೃದಯರೇ ಇಲ್ಲ. 'ದೀಪ್ ಜಲೇಂಗೆ ದೀಪ್ ದೀಪಾವಳಿ ಆಯಿ ಹೋ', 1957ರಲ್ಲಿ ಬಿಡುಗಡೆಯಾದ 'ಪೈಸಾ' ಚಿತ್ರದ ಈ ಹಾಡು ಬಾಲಿವುಡ್ ಗಾಯಕಿ ಗೀತಾ ದತ್ ಅವರ ಮಧುರ, ಸೌಮ್ಯವಾದ ದನಿಯಲ್ಲಿ ಮೂಡಿಬಂದಿದ್ದು ಬಹಳ ಇಂಪಾಗಿದೆ.

'ಏಕ್ ವೋ ಭಿ ದೀಪಾವಳಿ ಥಿ' 1961ರ ಹಿಂದಿ ಸಿನಿಮಾ 'ನಜ್ರಾನಾ' ಸೂಪರ್ ಹಿಟ್ ಆಗಿದ್ದೇ ದೀಪಾವಳಿ ಕುರಿತ ಈ ಹಾಡನ್ನು ಮುಖೇಶ್ ಹಾಡಿದ ಕಾರಣಕ್ಕಾಗಿ ಎಂಬುದನ್ನು ಸಂಗೀತಪ್ರಿಯರು ಎಂದಿಗೂ ಮರೆಯುವಂತಿಲ್ಲ.

ಇದೇ ರೀತಿ ಕನ್ನಡದಲ್ಲಿ 'ಮುದ್ದಿನ ಮಾವ' ಸಿನಿಮಾದ 'ದೀಪಾವಳಿ, ದೀಪಾವಳಿ ಗೋವಿಂದ ಲೀಲಾವಳಿ...' ಹಾಡು ಕೂಡ ಎಂದಿಗೂ ಗುನುಗುನಿಸುವಂತಿದೆ.

> ಬೆಳಕಿನ ಹಬ್ಬದ ಜೊತೆಗೆ ನಾದ ವೈಭವವೂ ಸೇರಿದರೆ ಮನೆಮನ ಉಲ್ಲಾಸಮಯ. ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಮರಾಠಿ ಅಭಂಗ, ಚೀಜು, ಬಂದೀಶ್‌ಗಳು, ಭಕ್ತಿ ಸಂಗೀತ, ಬಾಲಿವುಡ್, ಕನ್ನಡ ಸಿನಿಮಾ ಸಂಗೀತ, ವಾದ್ಯ ಸಂಗೀತ ಎಲ್ಲವೂ ದೀಪಾವಳಿ ಸಂಭ್ರಮವನ್ನೇ ಬಿಂಬಿಸುತ್ತದೆ.

'ನಂಜುಂಡಿ' ಸಿನಿಮಾದ 'ದೀಪದಿಂದ ದೀಪವ ಹಚ್ಚಬೇಕು ಮಾನವ...' ಹಾಡಿನಲ್ಲಿ ಹಬ್ಬದ ಸೊಬಗಿನ ಜೊತೆಗೆ ಮಾನವೀಯ ಸಂಬಂಧದ ಸೂಕ್ಷ್ಮ ಸಂವೇದನೆಯೂ ಅಡಕವಾಗಿದೆ.

ಲಹರಿ

'ಆನಂದಾಚಿ ದಿವಾಲಿ, ಘರೀಬೋಲ ವಾ ವನಮಾಲಿ..' ಬಾಬಜಿ ಆರ್. ಕಾನಡೆ.. ಹಾಡಿದ ಅಭಂಗ, ಆಲಿ ಮಾಜ್ಹಾ ಘರೀ ಹಿ ದಿವಾಲಿ.. ರಮಾ ರಘುನಂದನ್ ಹಾಡಿದ ಮರಾಠಿ ಅಭಂಗ ದೀಪಾವಳಿ ಮಹಿಮೆಯನ್ನು ಸಾರುತ್ತವೆ.

'ನಾಡಿನಂದ ಈ ದೀಪಾವಳಿ ಬಂತು; ಸಂತೋಷ ತಾಳಿ ನಮ್ಮೀ ಬಾಳ ಕಾರಿರುಳ...' ಸೋರಟ್ ಅಶ್ವಥ್ ಸಾಹಿತ್ಯದ, ಎಂ. ವೆಂಕಟರಾಜು ಸಂಗೀತದ ಈ ಲಘು ಶಾಸ್ತ್ರೀಯ ಗೀತೆಯನ್ನು ಖ್ಯಾತ ಗಾಯಕಿಯರಾದ ಎಸ್. ಜಾನಕಿ ಮತ್ತು ಪಿ. ಸುಶೀಲ ಹಾಡಿದ್ದು, ದೀಪಾವಳಿ ಸಂದರ್ಭದಲ್ಲಿ ಹಬ್ಬದ ಘಮಲನ್ನು ಹೆಚ್ಚಿಸಲು ಸಹಕಾರಿಯಾಗಿದೆ.

'ಕಲ್ಲಿನ ಕಲ್ಲಿನ ಪಾದ; ಲಕ್ಷ್ಮೀ ಬಂದಳು ನೋಡೆ..., ಗಾಯಕಿ ಕೆ.ಎಸ್. ಸುರೇಖಾ ಹಾಡಿರುವ ಈ ಸುಗಮ ಸಂಗೀತ ದೀಪಾವಳಿ ದಿನಗಳಲ್ಲಿ ಲಕ್ಷ್ಮೀ ವೈಭವವನ್ನು ಸಾರಿಹೇಳುತ್ತದೆ. ಇದೇ ಆಲ್ಬಂನಲ್ಲಿ ಲಕ್ಷ್ಮಿಯ ಮೇಲೆ ಇರುವ ಇನ್ನೊಂದು ಹಾಡು ನಂದಿತಾ ಹಾಡಿದ್ದು, 'ಪಾಲಿಸು ಲಕ್ಷ್ಮಿಯೇ' ಗಾನ ಮಾಧುರ್ಯ ದೈವೀಭಾವನೆಯನ್ನು ಉಕ್ಕಿಸುವಂತಿದೆ.

'ದೀಪ ದೀಪ ದೀಪ; ದೇದೀಪ್ಯಮಾನ ದೀಪ, ಬೆಳ್ಳಿಯ ಬೆಳಕನ್ನು ಚೆಲ್ಲುವ ದೀಪ, ಹೊನ್ನಿನ ಕಿರಣವ ಹೊಮ್ಮುವ ದೀಪ...' ಉಪಾಸನಾ ಮೋಹನ ಸಂಗೀತ ನಿರ್ದೇಶನದಲ್ಲಿ ಲಲಿತಾ ಬೆಳವಾಡಿ ಹಾಡಿದ್ದು, ದೀಪದ ಹಬ್ಬದ ಸಡಗರವನ್ನು ವರ್ಣಿಸಿದೆ. ಇವೆಲ್ಲದರ ಜೊತೆಗೆ ಅಮರವಾದ ಅಭಂಗಗಳು, ಠುಮ್ರಿಗಳು, ನಾಟ್ಯ ಸಂಗೀತ, ಗಜಲ್‌ಗಳು ಮತ್ತು ಬಂದಿಶ್‌ಗಳ ಪ್ರಸ್ತುತಿಯೂ ದೀಪಾವಳಿಯ ಉತ್ಸಾಹವನ್ನು ಬೆಳಗಿಸುತ್ತದೆ.

ಇಷ್ಟೇ ಅಲ್ಲದೆ ಸಂಗೀತ ವಾದ್ಯಗಳಾದ ನಾದಸ್ವರ, ಡೋಲಕ್, ತವಿಲ್, ಶೆಹನಾಯ್ ಕೂಡ ದೀಪಾವಳಿ ಹಬ್ಬದ ದಿನಗಳಲ್ಲೇ ವಿಶೇಷವಾಗಿ ನುಡಿಸುವ, ಮಧುರ ನಾದವನ್ನು ಕೊಡುವ ಮಂಗಳಕರ ವಾದ್ಯಗಳಾಗಿವೆ.

ದೀಪಾವಳಿ ವಿಶ್ವದ ಹಬ್ಬ, ಹಾಡುಗಳ ಹಬ್ಬವೂ ಹೌದು. ಬೆಳಕಿನ ಪ್ರಖರತೆಯ ಮಧ್ಯೆ ಸ್ವರಗಳ ಹೊನಲು ಒಂದು ರೀತಿಯಲ್ಲಿ ಜುಗಲಬಂದಿ ಹಾಡುತ್ತವೆ, ಹಬ್ಬದ ದಿಬ್ಬಣ ಸಾಗಿದಂತೆ ಹಾಡಿನ ಔತಣ ಸಂಗೀತಪ್ರಿಯರ, ಸಹೃದಯರ ಮನಗೆಲ್ಲುತ್ತದೆ, ಮನೆ ಬೆಳಗುತ್ತದೆ.

ಹಬ್ಬಕ್ಕೆ ಸಿಹಿ ಖಾದ್ಯ

ರಸಾಸ್ವಾದ

ಕವಿತಾ ಪಾಟೀಲ

ಹೆಸರುಬೇಳೆ ಬತ್ತಾಸ್

ಬೇಕಾಗುವ ಸಾಮಗ್ರಿಗಳು: ಹೆಸರುಬೇಳೆ, ಮೆಣಸಿನಕಾಯಿ, ಶುಂಠಿ, ಓಂ ಕಾಳು, ಉಪ್ಪು, ಅಡಿಗೆ ಸೋಡಾ, ಎಣ್ಣೆ, ಅರಿಶಿನ, ಗರಂ ಮಸಾಲ ಮತ್ತು ಆಮ್ ಚೂರ್ ಪೌಡರ್.

ಮಾಡುವ ವಿಧಾನ: ಮೊದಲಿಗೆ ಒಂದು ಗಂಟೆಗಳ ಕಾಲ ಒಂದು ಕಪ್ ಹೆಸರು ಬೇಳೆಯನ್ನು ನೆನೆಸಿಡಬೇಕು. ಬೇಳೆ ನೆಂದ ನಂತರ ನೆಂದ ಹೆಸರುಬೇಳೆ,ಮೂರರಿಂದ ನಾಲ್ಕು ಮೆಣಸಿನಕಾಯಿ, ಒಂದು ಇಂಚಿನಷ್ಟು ಶುಂಠಿ ಸೇರಿಸಿ ರುಬ್ಬಿಕೊಳ್ಳಬೇಕು ನಂತರ ರುಬ್ಬಿಕೊಂಡ ಮಿಶ್ರಣವನ್ನು ಪಾತ್ರೆಗೆ ತೆಗೆದುಕೊಂಡು ಅದಕ್ಕೆ ಅರ್ಧ ಕಪ್ ತುಪ್ಪ ,ಅರ್ಧ ಕಪ್ ಗೋಧಿ ಹಿಟ್ಟು, ಕಾಲು ಕಪ್ ಚಿರೋಟಿ ರವೆ, ಅರಿಶಿನ ಅರ್ಧ ಚಮಚ, ದನಿಯಾ ಪುಡಿ, ಗರಂ ಮಸಾಲಾ ಅರ್ಧ ಚಮಚ, ಒಂದು ಚಮಚ ಓಂ ಕಾಳು ಎರಡು ಚಮಚ, ಎಳ್ಳು ಮತ್ತು ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಎಲ್ಲವನ್ನು ಮಿಶ್ರಣ ಮಾಡಿಕೊಂಡು ಚಪಾತಿ ಹಿಟ್ಟಿನ ಹದಕ್ಕೆ ನಾದಿಕೊಳ್ಳಬೇಕು. ಚಪಾತಿ ಲಟ್ಟಿಸಿ ಅದಕ್ಕೆ ಸ್ವಲ್ಪ ತುಪ್ಪ ಸವರಿ ಸುರುಳಿ ಮಾಡಿಕೊಂಡು ಸಣ್ಣ ಸಣ್ಣದಾಗಿ ಕತ್ತರಿಸಿಕೊಂಡು ಬೆರಳಿಂದ ಒತ್ತಿ ಬತ್ತಾಸ್ ತರ ಮಾಡಿಕೊಳ್ಳಬೇಕು ನಂತರ ಎಣ್ಣೆಯಲ್ಲಿ ಕರೆದರೆ ಹೆಸರುಬೇಳೆ ಬತ್ತಾಸ್ ತಿನ್ನಲು ಸಿದ್ಧ.

ಡ್ರೈ ಫ್ರೂಟ್ಸ್ ಕರ್ಚಿಕಾಯಿ

ಬೇಕಾಗುವ ಸಾಮಗ್ರಿಗಳು: ಬಾದಾಮಿ, ವಾಲ್ನಟ್, ಗೋಡಂಬಿ, ದ್ರಾಕ್ಷಿ , ಪಿಸ್ತಾ, ಕೊಬ್ಬರಿ, ಕರ್ಜೂರ, ಚಿರೋಟಿ ರವೆ, ಉಪ್ಪು , ಎಣ್ಣೆ, ತುಪ್ಪ, ತುರಿದ ಕೊಬ್ಬರಿ, ಗಸಗಸೆ, ಏಲಕ್ಕಿ.

ಮಾಡುವ ವಿಧಾನ: ತಲಾ ಅರ್ಧ ಕಪ್ ದ್ರಾಕ್ಷಿ, ಗೋಡಂಬಿ, ಬಾದಾಮಿ, ಪಿಸ್ತಾ , ವಾಲ್ನಟ್ಸ್,ತುರಿದ ಕೊಬ್ಬರಿಯನ್ನು ತೆಗೆದುಕೊಂಡು ತುಪ್ಪದಲ್ಲಿ ಹುರಿದುಕೊಂಡು ತರಿತರಿಯಾಗಿ ರುಬ್ಬಿಕೊಳ್ಳಬೇಕು ಹಾಗೆ ಒಂದು ಕಪ್ ಕರ್ಜೂರವನ್ನು ನುಣ್ಣಗೆ ರುಬ್ಬಿ. ನಂತರ ರುಬ್ಬಿದ ಎಲ್ಲಾ ಪದಾರ್ಥಗಳನ್ನು ಒಂದು ಪಾತ್ರೆಯಲ್ಲಿ ಮಿಶ್ರಣ ಮಾಡಿ ಅದಕ್ಕೆ ತುರಿದು ಹುರಿದ ಕೊಬ್ಬರಿ, ಹುರಿದ ಗಸಗಸೆ, ಏಲಕ್ಕಿ ಪುಡಿ ಹಾಕಿ ಎಲ್ಲವನ್ನು ಮಿಶ್ರಣ ಮಾಡಿ ಹೂರಣ ತಯಾರಿಸಿಕೊಳ್ಳಿ.

ಇನ್ನೊಂದು ಪಾತ್ರೆಯಲ್ಲಿ ಒಂದು ಕಪ್ ಚಿರೋಟಿ ರವೆ, ಅರ್ಧ ಕಪ್ ಗೋಧಿ ಹಿಟ್ಟು ಹಾಕಿ ನಂತರ ಅದಕ್ಕೆ ಎರಡು ಟೇಬಲ್ ಸ್ಪೂನ್ ಕಾದ ಎಣ್ಣೆ, ಸ್ವಲ್ಪ ಉಪ್ಪು ,ಚಿಟಿಕೆ ಸೋಡಾಪುಡಿಯನ್ನು ಹಾಕಿ ಮಿಶ್ರಣ ಮಾಡಿ. ಅದಕ್ಕೆ ಬೇಕಾದಷ್ಟು ನೀರು ಹಾಕಿ ಪೂರಿ ಹಿಟ್ಟಿನ ಹದಕ್ಕೆ ನಾದಿಕೊಂಡು ಅರ್ಧ ಗಂಟೆ ನೆನೆಯಲು ಬಿಡಿ.

ನಂತರ ನಾದಿಟ್ಟ ಹಿಟ್ಟಿನಲ್ಲಿ ಚಿಕ್ಕ ಚಿಕ್ಕ ಉರುಳೆಗಳನ್ನು ಮಾಡಿಕೊಂಡು ಪೂರಿಯಂತೆ ಲಟ್ಟಿಸಿ ಕರ್ಚಿಕಾಯಿ ಮಾಡುವ ಮೋಲ್ಡ್ ಗೆ ಹಾಕಿ ಮಾಡಿಟ್ಟ ಡ್ರೈ ಫ್ರೂಟ್ಸ್ ಹೂರಣವನ್ನು ತುಂಬಿ ಕರ್ಚಿಕಾಯನ್ನು ತಯಾರಿಸಿಕೊಳ್ಳಿ .ನಂತರ ಕಾದ ಎಣ್ಣೆಯಲ್ಲಿ ಒಂದಾದಾಗಿ ಹಾಕಿ ಕರಿದರೆ ಡ್ರೈ ಫ್ರೂಟ್ಸ್ ಕರ್ಚಿಕಾಯಿ ತಿನ್ನಲು ತಯಾರಾಗುತ್ತದೆ.

ಅವಲಕ್ಕಿ ಚಕ್ಕುಲಿ

ಬೇಕಾಗುವ ಸಾಮಗ್ರಿಗಳು: ಅವಲಕ್ಕಿ, ಹುರಿಗಡಲೆ ಹಿಟ್ಟು, ಎಳ್ಳು, ಅಕ್ಕಿಹಿಟ್ಟು ,ತುಪ್ಪ, ಓಂ ಕಾಳು, ಸೋಡಾಪುಡಿ, ಉಪ್ಪು, ಅಚ್ಚ ಖಾರಾದಪುಡಿ ಮತ್ತು ಎಣ್ಣೆ.

ಮಾಡುವ ವಿಧಾನ: ಒಂದು ಕಪ್ ಅವಲಕ್ಕಿಯನ್ನು ನುಣ್ಣಗೆ ಪುಡಿಮಾಡಿಕೊಂಡು ಒಂದು ಪಾತ್ರೆಗೆ ತೆಗೆದಿಟ್ಟುಕೊಳ್ಳಬೇಕು ನಂತರ ಅದಕ್ಕೆ ಅರ್ಧ ಕಪ್ ಹುರಿಗಡಲೆ ಹಿಟ್ಟು, ಅರ್ಧ ಕಪ್ ಅಕ್ಕಿ ಹಿಟ್ಟು, ಒಂದು ಚಮಚ ಓಂ ಕಾಳು, ಎರಡು ಚಮಚ ಹುರಿದ ಎಳ್ಳು, ಒಂದು ಚಮಚ ಅಚ್ಚ ಖಾರದ ಪುಡಿ ಸ್ವಲ್ಪ ಅರಿಶಿನ,ಚಿಟಿಗೆ ಸೋಡಾಪುಡಿ ಮತ್ತು ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಎಲ್ಲವನ್ನು ಮಿಕ್ಸ್ ಮಾಡಿಕೊಳ್ಳಿ ನಂತರ ಕಾಲು ಕಪ್ ತುಪ್ಪವನ್ನು ಕಾಯಿಸಿ ತಯಾರಿಸಿದ ಹಿಟ್ಟಿಗೆ ಹಾಕಿ ಮತ್ತಮ್ಮೆ ಮಿಕ್ಸ್ ಮಾಡಿಕೊಳ್ಳಬೇಕು. ಒಂದು ಲೋಟ ನೀರನ್ನು ಕುದಿಯುವಂತೆ ಕಾಯಿಸಿ ಮಾಡಿಟ್ಟ ಮಿಶ್ರಣಕ್ಕೆ ಸೇರಿಸಿ ಹದವಾಗಿ ನಾದಿ ಅರ್ಧಗಂಟೆ ನೆನೆಯಲಿಡಬೇಕು . ನಂತರ ಸ್ವಲ್ಪ ಹಿಟ್ಟನ್ನು ತೆಗೆದುಕೊಂಡು ಹದಕ್ಕೆ ನಾದಿ ಚಕ್ಕಲಿ ಮಾಡುವ ಒತ್ತು ಪಾತ್ರೆಗೆ ಹಾಕಿ ಚಕ್ಕಲಿ ತಯಾರಿಸಿಕೊಂಡು ಎಣ್ಣೆಯಲ್ಲಿ ಕರಿದರೆ ಅವಲಕ್ಕಿ ಚಕ್ಕುಲಿ ತಿನ್ನಲು ಸಿದ್ಧ.

ದೀಪಾವಳಿಗೆ ದೇವರ ಅಲಂಕಾರ

ಪವಿತ್ರಾ ಭಟ್

ಮನೆಯಲ್ಲಿ ಸದಾ ಸಂಪತ್ತು, ಸಮೃದ್ಧಿ ತುಂಬಿರಲಿ ಎಂಬ ಪ್ರಾರ್ಥನೆಯೊಂದಿಗೆ ದೀಪಾವಳಿ ಹಬ್ಬದ ಸಂದರ್ಭದಲ್ಲಿ ದೇವರನ್ನು ಆರಾಧಿಸಲಾಗುತ್ತದೆ. ದೀಪಾವಳಿಗೆ ದೇವರ ಅಲಂಕಾರ ಹೇಗೆಲ್ಲ ಮಾಡಬಹುದು ಎಂಬುದಕ್ಕೆ ಇಲ್ಲಿದೆ ಮಾಹಿತಿ.

ಥೀಮ್ ಅಲಂಕಾರ: ದೇವರನ್ನು ಅಲಂಕರಿಸುವಾಗ ನೀವು ಯಾವುದಾದರೊಂದು ಥೀಮ್ ಅನುಸರಿಸಬಹುದು. ಅದು ಬಣ್ಣಗಳ ಕಾಂಬಿನೇಷನ್, ಹೂವುಗಳ ಅಲಂಕಾರ, ದೀಪಗಳ ಅಲಂಕಾರ, ಪೇಪರ್ ಕ್ರಾಫ್ಟ್‌ಗಳ ಮೂಲಕವೂ ಶೃಂಗರಿಸಬಹುದು.

ವಿಗ್ರಹಕ್ಕೆ ಸೀರೆ ಧಾರಣೆ: ಲಕ್ಷ್ಮೀದೇವಿಯ ಮೂರ್ತಿ ಅಥವಾ ಮುಖದ ಅಚ್ಚನ್ನು ಇಟ್ಟು ಪೂಜೆ ಮಾಡಬಹುದು. ಅದಕ್ಕೆ ಸೀರೆ ಉಡಿಸಿ ಅಂದವಾಗಿ ಅಲಂಕರಿಸಿ. ಸೀರೆ ಉಡಿಸುವ ವಿಧಾನವೂ ಸುಲಭ. ಮೊದಲು ಸೀರೆಯ ಸೆರಗನ್ನು ಮಾಡಿಕೊಂಡು ಅದನ್ನು ಎರಡು ಭಾಗವಾಗಿ ಮಡಚಿ ನೆರಿಗೆ ಮಾಡಿ. ನಂತರ ಅದನ್ನು ದೊಡ್ಡ ಬಿಂದಿಗೆಗೆ ಸುತ್ತಿ. ಬಿಂದಿಗೆಯ ಮುಂಭಾಗದಲ್ಲಿ ನೆರಿಗೆಗಳು ಬರುವಂತೆ ನೋಡಿಕೊಳ್ಳಿ. ಭುಜದಂತೆ ಕಾಣಲು ಸೀರೆಯ ಬ್ಲೌಸ್ ಪೀಸ್‌ನ್ನು ಸುರುಳಿ ಮಾಡಿ ಅದರೊಳಗೆ ಮೆತ್ತನೆಯ ಪೇಪರ್ ತುಂಬಿ ಬಿಂದಿಗೆಯ ಮೇಲಿಡಿ. ಬಿಂದಿಗೆಯೊಳಗೆ ಅಕ್ಕಿಯನ್ನು ತುಂಬಿ ತೆಂಗಿನಕಾಯಿಯನ್ನು ಇರಿಸಿ, ಅದರ ಮೇಲೆ ದೇವಿಯನ್ನಿಟ್ಟು, ಒಡವೆ, ಹೂವುಗಳಿಂದ ಅಲಂಕರಿಸಬಹುದು.

ಲಕ್ಷ್ಮೀ ಅಲಂಕಾರ (ಚಿತ್ರ ಕೃಪೆ -ಶ್ರೀಶಾ ಕಲ್ಲೂರು)

ಫೋಟೊಗೆ ಪೂಜೆ ಮಾಡುವುದಾದರೆ: ನೀವೇನಾದರೂ ದೇವರ ಬೇರೆ ಬೇರೆ ಫೋಟೊವನ್ನಿಟ್ಟು ಪೂಜೆ ಮಾಡುವುದಾದರೆ ಹತ್ತಿಯ ಮಾಲೆಗಳನ್ನು ಅಂದರೆ ಗೆಜ್ಜೆವಸ್ತ್ರಗಳನ್ನು ಮಾಡಿ ಹಾಕಬಹುದು.

ಹತ್ತಿಯನ್ನು ಸುರುಳಿ ಮಾಡಿ ಹೂವಿನಾಕಾರದಲ್ಲಿ ಮಡಚಿ ಅದಕ್ಕೆ ಅರಿಶಿನ -ಕುಂಕುಮವನ್ನು ಹಚ್ಚಿದರೆ ಗೆಜ್ಜೆವಸ್ತ್ರ ಸಿದ್ಧ.

ತರಕಾರಿ ದೀಪಗಳ ಮೆರುಗು

ತರಕಾರಿಗಳನ್ನು ಕತ್ತರಿಸಿ ಅದರೊಳಗೆ ದೀಪಗಳನ್ನು ಇಟ್ಟರೆ ವಿಭಿನ್ನವಾಗಿ ಕಾಣುತ್ತದೆ. ಕಿತ್ತಳೆ ಹಣ್ಣು, ಕ್ಯಾರೆಟ್, ದೊಡ್ಡಮೆಣಸಿನ ಕಾಯಿ, ಟೊಮೆಟೊ ಹೀಗೆ ತರಹೇವಾರಿ ತರಕಾರಿಗಳನ್ನು ವಿವಿಧ ವಿನ್ಯಾಸದಲ್ಲಿ ಕತ್ತರಿಸಿ ಅದರೊಳಗೆ ಪುಟ್ಟ ದೀಪವಿಟ್ಟರೆ ಅದರ ಬೆಳಕಿಗೆ ತರಕಾರಿ ಬಣ್ಣವೂ ಮಿನುಗುತ್ತದೆ.

ರಂಗೋಲಿ ಚಿತ್ತಾರ: ಹಬ್ಬಗಳಿರಲಿ, ಸಾಮಾನ್ಯ ದಿನವೇ ಆಗಿರಲಿ, ಅಂಗಳದಲ್ಲಿ, ದೇವರ ಮುಂದೆ ರಂಗೋಲಿಯಿದ್ದರೆ, ಮನೆಯ ಕಳೆ ಹೆಚ್ಚುತ್ತದೆ. ಭಕ್ತಿ ಭಾವ ಮೂಡಿಸುತ್ತದೆ. ರಂಗೋಲಿಯಲ್ಲೂ ವೈವಿಧ್ಯ ಮೆರೆಯಬಹುದು.

> ದೇವರ ಮೂರ್ತಿಯನ್ನು ಅಲಂಕಾರ ಮಾಡುವುದು ಸೃಜನಾತ್ಮಕ ಕಲೆ. ಅಭಿರುಚಿಗೆ ತಕ್ಕ ಹಾಗೆ ವಿವಿಧ ರೀತಿಯಲ್ಲಿ ವಿನ್ಯಾಸ ಮಾಡಬಹುದು. ಈಗಂತೂ ಮಾರುಕಟ್ಟೆಯಲ್ಲಿ ಸಿದ್ಧ ದೀಪಗಳು, ಸೀರೆ, ಆಲಂಕಾರಿಕ ವಸ್ತುಗಳು ದೊರೆಯುತ್ತವೆ. ಅವುಗಳ ಮೂಲಕ ಸುಲಭವಾಗಿ ಅಲಂಕರಿಸಬಹುದು.
>
> **ಉಮಾ ಸರ್ವೇಶ್,** ಗೃಹಿಣಿ

> ರಂಗೋಲಿಗಳು ಮನೆಯಲ್ಲಿ ಧನಾತ್ಮಕ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಹೆಚ್ಚಿಸುತ್ತವೆ. ರಂಗೋಲಿ ಬಿಡಿಸುವುದು ಮನಸ್ಸಿಗೂ ಮುದ ನೀಡುತ್ತದೆ. ಅಲ್ಲದೆ ಕಡಿಮೆ ಖರ್ಚಿನಲ್ಲಿ ಮನೆ ಮತ್ತು ಪೂಜೆಯ ಮೆರುಗನ್ನು ಹೆಚ್ಚಿಸುತ್ತವೆ.
>
> **ಶ್ರೀಶಾ ಕಲ್ಲೂರು,** ರಂಗೋಲಿ ಕಲಾವಿದೆ

ಹೂವುಗಳ ರಂಗೋಲಿ

ಕೇರಳದಲ್ಲಿ ಓಣಂ ಸಮಯದಲ್ಲಿ ಹಾಕುವ ಹೂವುಗಳ ರಂಗೋಲಿಯನ್ನು ದೀಪಾವಳಿ ಸಂದರ್ಭದಲ್ಲೂ ಹಾಕಬಹುದು. ಇದು ಪೂಜೆ ಆವರಣಕ್ಕೆ ಹೆಚ್ಚು ಮೆರುಗು ನೀಡುತ್ತದೆ. ಸೇವಂತಿಗೆ, ಗುಲಾಬಿ, ಚೆಂಡು ಹೂ, ಪಾರಿಜಾತ ಹೀಗೆ ವಿವಿಧ ಬಣ್ಣಗಳ ಹೂವಿನ ಎಸಳುಗಳನ್ನು ರಂಗೋಲಿ ರೂಪದಲ್ಲಿ ನೆಲದ ಮೇಲೆ ಜೋಡಿಸಬಹುದು. ಅದರ ಮೇಲೆ ಒಂದೊಂದು ದೀಪವಿಟ್ಟರೆ ಅಂದ ಇಮ್ಮಡಿಯಾಗುತ್ತದೆ.

ಬಣ್ಣಗಳ ರಂಗೋಲಿ

ಮೊದಲು ಚಾಕ್‌ಪೀಸ್‌ನಿಂದ ನಿಮಗೆ ಬೇಕಾದ ಡಿಸೈನ್ ಬರೆದುಕೊಳ್ಳಿ. ಬಳಿಕ ಅದರ ಮೇಲೆ ಬಣ್ಣಗಳನ್ನು ತುಂಬುತ್ತಾ ಬನ್ನಿ, ನೆನಪಿಡಿ. ರಂಗೋಲಿ ಬಿಡಿಸುವುದು ಒಂದು ಕಲೆಯಾದರೆ, ಅದಕ್ಕೆ ಬಣ್ಣ ತುಂಬುವುದು ಕೂಡ ಕಲಾತ್ಮಕತೆಗೆ ಹಿಡಿದ ಕನ್ನಡಿ.

ಎಳೆಗಳ ರಂಗೋಲಿ

ಚುಕ್ಕಿಗಳನ್ನಿಟ್ಟು ಒಂದೊಂದಾಗಿ ಜೋಡಿಸುತ್ತಾ ಬೇಕಾದ ರೀತಿಯಲ್ಲಿ ವಿನ್ಯಾಸ ಮಾಡಬಹುದು. ಚುಕ್ಕಿ ರಂಗೋಲಿಗಳು ಬಿಡಿಸಲೂ ಸುಲಭ.

ದೇವ ದೇವತೆಗಳು ಸಿಂಗಾರಪ್ರಿಯರು ಎಂಬುದು ನಮ್ಮ ನಂಬಿಕೆ. ಹೀಗಾಗಿ ದೇವರ ಸಿಂಗಾರಕ್ಕೆ ಬಗೆಬಗೆಯ ಹೂವುಗಳನ್ನು ಬಳಸಿದರೂ ಭಕ್ತಿ ಭಾವ ಹೆಚ್ಚುತ್ತದೆ.

ಸ್ಥಾನಮಾನ ದೊರೆತು ಉರುಳಿದ 16 ವರ್ಷಗಳು ● ಸ್ವಂತ ನೆಲೆಯೂ ಇಲ್ಲದೆ ಕಾರ್ಯನಿರ್ವಹಣೆ

ಶಾಸ್ತ್ರೀಯ ಕನ್ನಡ ಕೇಂದ್ರಕ್ಕಿಲ್ಲ 'ಬಲ'

● ಎಂ. ಮಹೇಶ

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವು ಮೈಸೂರಿನ ಮಾನಸಗಂಗೋತ್ರಿಯ ತಾತ್ಕಾಲಿಕ ಕಟ್ಟಡದಲ್ಲಿ ಕಾರ್ಯನಿರ್ವಸುತ್ತಿದೆ

ಪ್ರಜಾವಾಣಿ ಚಿತ್ರ: ಹಂಪಾ ನಾಗರಾಜ್

ಮುಖ್ಯಾಂಶಗಳು

- 2008ರಲ್ಲಿ ದೊರೆತ ಸ್ಥಾನಮಾನ
- 2015ರಲ್ಲಿ ಆರಂಭವಾದ ಕೇಂದ್ರ
- ಸ್ವಂತ ನೆಲೆಗಾಗಿ ಕಾಯಬೇಕಾದ ಪರಿಸ್ಥಿತಿ

ಮೈಸೂರು: ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ದೊರೆತ ಬಳಿಕ ಸ್ಥಾಪಿಸಲಾಗಿರುವ 'ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ'ವನ್ನು 'ಬಲ'ಪಡಿಸುವ ಕಾರ್ಯ ಈವರೆಗೂ ನಡೆದಿಲ್ಲ. ಕೇಂದ್ರ ಸ್ವಾಯತ್ತವೂ ಆಗದೆ, ಸ್ವಂತ 'ನೆಲೆ'ಯೂ ಇಲ್ಲದೆ, ಇಲ್ಲಿನ ಮಾನಸಗಂಗೋತ್ರಿಯ ಎನ್‌ಸಿಎಚ್‌ಎಸ್ (ನ್ಯಾಷನಲ್ ಸೆಂಟರ್ ಫಾರ್ ಹಿಸ್ಟರಿ ಆಫ್ ಸೈನ್ಸ್) ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

'ಹಲವು ಹೋರಾಟಗಳಿಂದ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಸಿಕ್ಕಿದ್ದರೂ, ರಾಜ್ಯ ಸರ್ಕಾರದ ನಿರ್ಲಕ್ಷ್ಯ ಮತ್ತು ಕೇಂದ್ರ ಸರ್ಕಾರದ ತಾರತಮ್ಯ ಧೋರಣೆಯಿಂದ ಕೇಂದ್ರವು ಅನಾಥವಾಗಿಯೇ ಇರುವಂತಾಗಿದೆ' ಎಂಬ ಅಸಮಾಧಾನ ಕನ್ನಡಪ್ರೇಮಿಗಳಲ್ಲಿ ನಿರಂತರವಾಗಿದೆ.

ಅಲೆದಾಟ ತಪ್ಪಿಲ್ಲ: 2008ರಲ್ಲೇ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ಘೋಷಣೆಯಾದರೂ, 7 ವರ್ಷದ ಬಳಿಕ, ಕೇಂದ್ರವು ಮೈಸೂರಿನಲ್ಲಿ 2015ರಲ್ಲಿ ಕಾರ್ಯಾರಂಭ ಮಾಡಿತು. ಮೊದಲಿಗೆ ಭಾರತೀಯ ಭಾಷಾ ಸಂಸ್ಥಾನ (ಸಿಐಐಎಲ್), ಬಳಿಕ ಸರಸ್ವತಿಪುರಂನ ಅಗ್ನಿಶಾಮಕ ದಳದ ಎದುರಿನ ಕ್ವಾರ್ಟರ್ಸ್‌ನಲ್ಲಿ ಜಾಗ ನೀಡಲಾಗಿತ್ತು.

ಐದು ಯೋಜನಾ ನಿರ್ದೇಶಕರನ್ನು ಕಂಡಿರುವ ಕೇಂದ್ರಕ್ಕೆ ಸ್ವಂತ ಕಟ್ಟಡವಿಲ್ಲವೆಂಬ ಕಾರಣಕ್ಕೆ ಕೇಂದ್ರ ಸರ್ಕಾರದ ಅನುದಾನ ದೊರೆಯುತ್ತಿಲ್ಲ ಎನ್ನಲಾಗಿದೆ.

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಹೆಚ್ಚಿನ ಪ್ರೋತ್ಸಾಹ ದೊರೆಯಬೇಕು. ಈ ಮೂಲಕ ಭಾಷೆಯ ಬೆಳವಣಿಗೆಯಾಗಬೇಕು

ಪ್ರಧಾನ ಗುರುದತ್ತ, ಸಾಹಿತಿ, ಮೈಸೂರು

ಶಾಸ್ತ್ರೀಯ ಭಾಷೆ ವಿಷಯದಲ್ಲಿ ತಮಿಳುನಾಡಿನಲ್ಲಿ ಉತ್ತಮ ಕೆಲಸವಾಗಿದೆ. ನಮ್ಮಲ್ಲೂ ಕ್ರಮಕ್ಕೆ ಕೇಂದ್ರ, ರಾಜ್ಯ ಸರ್ಕಾರಗಳು ಮುಂದಾಗಬೇಕು

ಸ.ರ. ಸುದರ್ಶನ, ಪ್ರಧಾನ ಕಾರ್ಯದರ್ಶಿ, ಕನ್ನಡ ಕ್ರಿಯಾ ಸಮಿತಿ, ಮೈಸೂರು

ನಿವೇಶನ ನಿಗದಿಯಾದರೆ, ಸ್ವಂತ ಕಟ್ಟಡವನ್ನು ಕಟ್ಟಿಕೊಳ್ಳಲು ಕೇಂದ್ರ ಸರ್ಕಾರವು ₹ 50 ಕೋಟಿವರೆಗೆ ಅನುದಾನ ನೀಡುತ್ತದೆ

ಪ್ರೊ.ನೀಲಗಿರಿ ಎಂ.ತಳವಾರ

ಯೋಜನಾ ನಿರ್ದೇಶಕ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಮೈಸೂರು

'ಇತರ ಭಾಷೆಗಳ ವಿಷಯದಲ್ಲಿ ಆಗಿರುವಷ್ಟು ಅಭಿವೃದ್ಧಿ ಆಗಿಲ್ಲ' ಎಂಬ ಬೇಸರವೂ ಕನ್ನಡಪರ ಹೋರಾಟಗಾರರಲ್ಲಿದೆ.

'ಭಾಷೆಯ ಅಭಿವೃದ್ಧಿಗೆ ಪೂರಕವಾಗುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನ ಪಡೆಯಲು, ಅಲೆದಾಟ ತಪ್ಪಿಸಲು ತ್ವರಿತ ಕ್ರಮ ಕೈಗೊಳ್ಳಬೇಕು' ಎಂಬುದು ಅವರ ಒತ್ತಾಯ.

'ಕೇಂದ್ರವು ಬೆಕ್ಕಿನ ಸಂಸಾರದಂತೆ ಅತಂತ್ರವಾಗಿದೆ. ಸ್ವಂತ ಜಾಗ ದೊರೆಯದಿರುವುದೇ ಈ ಪರಿಸ್ಥಿತಿಗೆ ಕಾರಣ. ಜಾಗ ತೋರಿಸಿದ ಕಡೆಗೆಲ್ಲಾ ಹೋಗುತ್ತಿದ್ದೇವೆ. ಈಗ, ಮೈಸೂರು ವಿವಿಯ ತಾತ್ಕಾಲಿಕ ಜಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದೇವೆ' ಎಂದು ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ನೀಲಗಿರಿ ಎಂ.ತಳವಾರ 'ಪ್ರಜಾವಾಣಿ'ಗೆ ತಿಳಿಸಿದರು.

ಎಂಒಯು ಆಗಿಲ್ಲ: 'ಪ್ರೊ. ಜಿ.ಹೇಮಂತ್‌ಕುಮಾರ್ ಅವರು ಮೈಸೂರು ವಿವಿ ಕುಲಪತಿಯಾಗಿದ್ದಾಗ, ಮಾನಸಗಂಗೋತ್ರಿಯಲ್ಲೇ 4.12 ಎಕರೆ ಜಾಗ ಪಡೆಯುವ ಪ್ರಕ್ರಿಯೆ ನಡೆದಿತ್ತು. ಸಿಐಐಎಲ್ ಹಾಗೂ ವಿಶ್ವವಿದ್ಯಾಲಯದ ಜೊತೆ ಒಪ್ಪಂದವಾಗಲಿಲ್ಲ. ಜಯಲಕ್ಷ್ಮಿವಿಲಾಸ ಅರಮನೆಯಲ್ಲಿ ಜಾಗ ಕೊಡುವುದಾಗಿ ಹೇಳಿದ್ದರೂ ದುರಸ್ತಿ ನಡೆಯುತ್ತಿದ್ದರಿಂದ ದೊರೆಯಲಿಲ್ಲ. ಜಾಗದ ಸಂಬಂಧ ಸಿಂಡಿಕೇಟ್ ಸಭೆಯಲ್ಲೂ ಅನುಮೋದನೆ ದೊರೆತಿದ್ದು, ಪ್ರಕ್ರಿಯೆಗೆ ಜೀವ ತುಂಬಲು ಪ್ರಯತ್ನಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

'ಕೇಂದ್ರಕ್ಕೆ ಪ್ರತಿ ವರ್ಷ ದೊರಕುವ ₹2 ಕೋಟಿ ಅನುದಾನದಲ್ಲಿ ಸಂಶೋಧನೆ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. 8 ಕೃತಿಗಳನ್ನು ಪ್ರಕಟಿಸಲಾಗಿದೆ. ನವೆಂಬರ್‌ನಲ್ಲಿ ಒಟ್ಟು 21 ಕೃತಿಗಳನ್ನು ಬಿಡುಗಡೆ ಮಾಡಲಾಗುವುದು (7 ಪ್ರಚಾರೋಪನ್ಯಾಸ ಮಾಲೆ, ಪಂಪನ ಕುರಿತು ಪ್ರೊ.ಕೇಶವಶರ್ಮ ಅವರ ಕೃತಿ, ಹಾಗೂ ಕೇಂದ್ರದ 12 ಸಂಶೋಧಕರ ಕೃತಿಗಳು). ನ.11ರಿಂದ 52 ವಾರಗಳವರೆಗೆ ಶಾಸ್ತ್ರೀಯ ಕನ್ನಡದ ವಿವಿಧ ಆಯಾಮಗಳ ಬಗ್ಗೆ ವೆಬಿನಾರ್ ಹಮ್ಮಿಕೊಳ್ಳಲಾಗಿದೆ' ಎಂದು ತಿಳಿಸಿದರು.

'ಪ್ರೌಢಶಾಲೆಯವರಿಗೆ 'ಶಾಸ್ತ್ರೀಯ ಪಠ್ಯಗಳ ಓದು ಮತ್ತು ಅರ್ಥೈಸುವಿಕೆ' ಕಾರ್ಯಕ್ರಮವನ್ನು ಡಿಸೆಂಬರ್‌ನಲ್ಲಿ ಧರ್ಮಸ್ಥಳ, ಜನವರಿಯಲ್ಲಿ ರಾಯಚೂರು, ನಂತರ ಬೆಳಗಾವಿಯಲ್ಲಿ ನಡೆಸಲಾಗುವುದು' ಎಂದರು.

'ಕೇಂದ್ರದಲ್ಲಿ ಸಂಶೋಧಕರೊಂದಿಗೆ ಇಬ್ಬರು ಕ್ಲರ್ಕ್‌ಗಳು ಹಾಗೂ ನಾಲ್ವರು ಸಹಾಯಕ ಸಿಬ್ಬಂದಿ ಇದ್ದಾರೆ' ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU)

ಮುಕ್ತಗಂಗೋತ್ರಿ, ಮೈಸೂರು – 570006, ಕರ್ನಾಟಕ.

ಕಚೇರಿ ದೂರವಾಣಿ ಸಂಖ್ಯೆ: 0821-2500981, 2519941 / 43 / 48 / 52, ಸಹಾಯವಾಣಿ: 88003 35638 / 86905 44544.

ಇ-ಮೇಲ್: techsupport@ksouportal.com, ಅಂತರ್ಜಾಲ : www.ksoumysuru.ac.in

ACCREDITED WITH GRADE A+ NAAC — KARNATAKA STATE OPEN UNIVERSITY

ಅಧಿಸೂಚನೆ ಸಂಖ್ಯೆ : ಕರಾಮುವಿ/ಪ್ರವಿ/ಎಡಿಎಂ–1/129/2024–25 ದಿನಾಂಕ: 20–07–2024

ಇಂಟರ್ನ್‌ಶಿಪ್ ಮೂಲಕ ಸ್ಟೈಫಂಡ್ ಗಳಿಸುವ ಅವಕಾಶಗಳಿವೆ.

ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ

ಎರಡು ಶೈಕ್ಷಣಿಕ ಕಾರ್ಯಕ್ರಮಗಳನ್ನು (ಪ್ರೋಗ್ರಾಂಗಳನ್ನು) ಏಕ ಕಾಲದಲ್ಲಿ ಓದಲು ಅವಕಾಶವಿರುತ್ತದೆ. ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬಹುದು.

ನಿಮ್ಮ ಮನೆಯೇ 'ನಿರಂತರ' ಪಾಠ ಶಾಲೆ.

ಯು.ಜಿ.ಸಿ. ಮಾನ್ಯತೆ ಹೊಂದಿದ ಶಿಕ್ಷಣಕ್ರಮಗಳ ಅಧ್ಯಯನ ಅವಕಾಶವನ್ನು ಕ.ರಾ.ಮು.ವಿ. ಮೂಲಕ ಪಡೆಯಿರಿ

2024–25 ರ ಜುಲೈ ಆವೃತ್ತಿಗೆ ಪ್ರಥಮ ವರ್ಷದ ಒಡಿಎಲ್ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸ್ನಾತಕ (ಯುಜಿ) ಶಿಕ್ಷಣ ಕಾರ್ಯಕ್ರಮಗಳು

- ಬಿ.ಎ. • ಬಿ.ಕಾಂ.
- ಬಿ.ಎಲ್‌ಐ.ಎಸ್‌ಸಿ.
- ಬಿ.ಬಿ.ಎ.
- ಬಿ.ಎಸ್.ಡಬ್ಲ್ಯು
- ಬಿ.ಎಸ್‌ಸಿ (ಸಂಯೋಜನೆಗಳು)

(• PCM • PMCs • BcBZ • CBZ • BcBMi • BcMiFs • CBMi • CZEs • BcZEs • BcMiEs • BcBEs • CBEs • CMiEs)

[• P-Physics • C-Chemistry • M-Mathematics • Cs-Computer Science • B-Botany • Mi-Microbiology • Bc-Biochemistry • Z-Zoology • Es-Environmental Science • Fs-Food Science & Nutrition]

- ಬಿ.ಎಸ್‌ಸಿ – ಇನ್‌ಫರ್ಮೇಷನ್ ಟೆಕ್ನಾಲಜಿ (ಬಿ.ಎಸ್‌ಸಿ–ಐಟಿ)
- ಬಿ.ಸಿ.ಎ. – ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್

ಸ್ನಾತಕೋತ್ತರ (ಪಿಜಿ) ಶಿಕ್ಷಣ ಕಾರ್ಯಕ್ರಮಗಳು:

• ಎಂ.ಎ.

• ಕನ್ನಡ • ಇಂಗ್ಲಿಷ್ • ಸಂಸ್ಕೃತ • ಉರ್ದು • ಹಿಂದಿ • ತೆಲುಗು • ಶಿಕ್ಷಣ • ಇತಿಹಾಸ • ರಾಜ್ಯಶಾಸ್ತ್ರ • ಅರ್ಥಶಾಸ್ತ್ರ • ಸಾರ್ವಜನಿಕ ಆಡಳಿತ • ಸಮಾಜಶಾಸ್ತ್ರ • ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ • ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ

• ಎಂ.ಎಸ್.ಡಬ್ಲ್ಯು

• ಎಂ.ಬಿ.ಎ. – ಆನ್‌ಲೈನ್ ಪ್ರವೇಶ ಪರೀಕ್ಷೆಮೂಲಕ

ಸ್ಪೆಷಲೈಜೇಷನ್: • ಫೈನಾನ್ಸ್ • ಮಾರ್ಕೆಟಿಂಗ್ • ಹೆಚ್‌ಆರ್ • ಆಪರೇಷನ್ಸ್ • ಟೂರಿಸಂ • ಕಾರ್ಪೊರೇಟ್ ಲಾ • ಇನ್‌ಫರ್ಮೇಷನ್ ಟೆಕ್ನಾಲಜಿ • ಆಸ್ಪತ್ರೆ ಮತ್ತು ಆರೋಗ್ಯ ರಕ್ಷಣೆ ನಿರ್ವಹಣೆ.

• ಎಂ.ಕಾಂ.

ಡ್ಯುಯೆಲ್ ಸ್ಪೆಷಲೈಜೇಷನ್: • ಅಕೌಂಟಿಂಗ್ ಮತ್ತು ಫೈನಾನ್ಸ್/ಹೆಚ್‌ಆರ್‌ಎಂ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಮತ್ತು ಹೆಚ್‌ಆರ್‌ಎಂ/ಫೈನಾನ್ಸ್

• ಎಂ.ಸಿ.ಎ.

• ಎಂ.ಎಲ್‌ಐ.ಎಸ್‌ಸಿ.

• ಎಂ.ಎಸ್‌ಸಿ.

• ಭೌತಶಾಸ್ತ್ರ • ರಸಾಯನ ಶಾಸ್ತ್ರ • ಗಣಿತ ಶಾಸ್ತ್ರ • ಬಯೋಕೆಮಿಸ್ಟ್ರಿ • ಬಯೋಟೆಕ್ನಾಲಜಿ • ಕ್ಲಿನಿಕಲ್ ನ್ಯೂಟ್ರಿಷನ್ & ಡಯಟೆಟಿಕ್ಸ್ • ಪರಿಸರ ವಿಜ್ಞಾನ • ಭೂಗೋಳ ಶಾಸ್ತ್ರ • ಮೈಕ್ರೋ ಬಯಾಲಜಿ • ಮನಃಶಾಸ್ತ್ರ • ಸಸ್ಯಶಾಸ್ತ್ರ • ಪ್ರಾಣಿಶಾಸ್ತ್ರ • ಫುಡ್ & ನ್ಯೂಟ್ರಿಷನ್ ಸೈನ್ಸ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಸೈನ್ಸ್ • ಡಾಟಾ ಸೈನ್ಸ್ • ಅರ್ಥ್ ಸೈನ್ಸ್

ಪಿಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳು–(ಪದವಿ ಆಧಾರಿತ) (ಒಂದು ವರ್ಷ)

• ಇಂಗ್ಲಿಷ್ • ಕಮ್ಯುನಿಕೇಟಿವ್ ಇಂಗ್ಲಿಷ್ • ಪತ್ರಿಕೋದ್ಯಮ & ಸಮೂಹ ಸಂವಹನ • ಕುವೆಂಪು ಸಾಹಿತ್ಯ • ಹಣಕಾಸು ನಿರ್ವಹಣೆ • ಮಾನವ ಸಂಪನ್ಮೂಲ ನಿರ್ವಹಣೆ • ಬಿಸಿನೆಸ್ ಲಾ • ಬಿಸಿನೆಸ್ ಅಡ್ಮಿನಿಸ್ಟ್ರೇಷನ್ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ • ಅಂಬೇಡ್ಕರ್ ಅಧ್ಯಯನಗಳು • ನ್ಯೂಟ್ರಿಷನ್ & ಡಯಟೆಟಿಕ್ಸ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್.

ಡಿಪ್ಲೋಮ ಶಿಕ್ಷಣ ಕಾರ್ಯಕ್ರಮಗಳು–(10+2 ಆಧಾರಿತ) (ಒಂದು ವರ್ಷ)

• ಕನ್ನಡ • ಪತ್ರಿಕೋದ್ಯಮ • ನ್ಯೂಟ್ರಿಷನ್ & ಹೆಲ್ತ್ ಎಜುಕೇಷನ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್ • ಅರ್ಲಿ ಚೈಲ್ಡ್‌ಹುಡ್ ಕೇರ್ ಅಂಡ್ ಎಜುಕೇಷನ್ • ಭಾಷಾಂತರ ಅಧ್ಯಯನ

ಸರ್ಟಿಫಿಕೇಟ್ ಶಿಕ್ಷಣ ಕಾರ್ಯಕ್ರಮಗಳು (ಆರು ತಿಂಗಳು)

• ಪಂಚಾಯತ್ ರಾಜ್ • ನ್ಯೂಟ್ರಿಷನ್ & ಫುಡ್ • ಮಾಹಿತಿ ಸಂವಹನ ತಂತ್ರಜ್ಞಾನ (ಐಸಿಟಿ) • ಭಾಷಾಂತರ ಅಧ್ಯಯನ

ONLINE PROGRAMS • B.A. • B.Com

• M.A. ♦ Kannada ♦ Hindi ♦ Sanskrit ♦ Economics ♦ English

• M.Com • M.B.A. • M.Sc Mathematics

ಉನ್ನತ ಶಿಕ್ಷಣ ಎಲ್ಲರಿಗೂ, ಎಲ್ಲೆಡೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು NAAC A+ ಮಾನ್ಯತೆ ಪಡೆದಿದೆ, UGC-DEB ಪತ್ರ ಸಂಖ್ಯೆ F.No.39-2/2023 (DEB-1) ದಿನಾಂಕ: 17–08–2023, F.No.30-30/2023 (DEBIII) ದಿನಾಂಕ: 11–09–2023, ಮತ್ತು ಕರ್ನಾಟಕ ರಾಜ್ಯದಲ್ಲಿ ಅಧಿಕಾರ ಹೊಂದಿರುವ ಏಕೈಕ ಸಾರ್ವಜನಿಕ ವಿಶ್ವವಿದ್ಯಾಲಯವಾಗಿದ್ದು, ಉನ್ನತ ಶಿಕ್ಷಣ ಕಾರ್ಯಕ್ರಮಗಳನ್ನು ದೂರ ಶಿಕ್ಷಣ (ಒ.ಡಿ.ಎಲ್) ಪದ್ಧತಿಯಲ್ಲಿ. AICTE ಮೂಲಕ ಅನುಮೋದಿಸಿದೆ ಎಂಬಿಎ/ಎಂಸಿಎ/ಎಂಎಸ್‌ಸಿ ಡೇಟಾ ಸೈನ್ಸ್ ಪ್ರೋಗ್ರಾಂಗಳು ಅಧಿಸೂಚನೆ ಸಂಖ್ಯೆ: F.No.: ದಕ್ಷಿಣ: ಪಶ್ಚಿಮ/2023–24/1–43337817229, ದಿನಾಂಕ: 10.06.2023, ಅಡಿಯಲ್ಲಿ ಒದಗಿಸುತ್ತಿದೆ.

ವಿಶ್ವವಿದ್ಯಾನಿಲಯವು ಕೆಳಕಂಡ ವಿಶೇಷತೆಗಳನ್ನು ಹೊಂದಿರುತ್ತದೆ :

- ವಿಶಾಲ ಅತ್ಯಾಧುನಿಕ ಹಾಗೂ ಹಸಿರುಮಯ ಕ್ಯಾಂಪಸ್
- ಆಧುನಿಕ ಐಸಿಟಿ ತಂತ್ರಜ್ಞಾನ ಬೆಂಬಲಿತ ಬೋಧನಾ ಸೌಲಭ್ಯಗಳು
- ಅನುಭವಿ ಹಾಗೂ ನುರಿತ ಬೋಧನಾ ಸಿಬ್ಬಂದಿ
- ಸುಸಜ್ಜಿತ ಪ್ರಯೋಗಾಲಯಗಳು
- ಸುಸಜ್ಜಿತ ಗ್ರಂಥಾಲಯ ಹಾಗೂ ಇಂಟರ್ನೆಟ್ ಸೌಲಭ್ಯಗಳು
- ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯ (ಲರ್ನರ್ ಸಪೋರ್ಟ್ ಸೆಂಟರ್) ಕೇಂದ್ರಗಳನ್ನೊಳಗೊಂಡ ಸೇವಾ ವ್ಯವಸ್ಥೆ
- ಗುಣಮಟ್ಟದ ಸ್ವಯಂ ಕಲಿಕಾ ಸಾಮಗ್ರಿಗಳು (ಎಸ್.ಎಲ್.ಎಮ್)
- ವೃತ್ತಿ ಸಂಬಂಧಿತ ಸಲಹೆ ಹಾಗೂ ನೇಮಕಾತಿಯಲ್ಲಿ ನೆರವು

ಪ್ರವೇಶಾತಿ (ಎನ್‌ರೋಲ್‌ಮೆಂಟ್) ಮಾಹಿತಿ ಹಾಗೂ ವಿಧಾನ

1. ಅರ್ಹತೆಯ ಮಾನದಂಡ ಹಾಗೂ ಶುಲ್ಕದ ವಿವರಗಳನ್ನು ವಿವರಣಾ ಪುಸ್ತಕ (ಪ್ರಾಸ್ಪೆಕ್ಟಸ್) ದಲ್ಲಿ ನಮೂದಿಸಲಾಗಿದೆ. ಅಭ್ಯರ್ಥಿಗಳು ಸಂಬಂಧಿತ ಕಾರ್ಯಕ್ರಮಗಳ ಪ್ರಾಸ್ಪೆಕ್ಟಸ್‌ನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು / ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಭ್ಯರ್ಥಿಗಳು, **ಮೈಸೂರಿನಲ್ಲಿರುವ ಕರಾಮುವಿಯ ಕೇಂದ್ರ ಕಚೇರಿಯಲ್ಲಿ ನೇರವಾಗಿ / ಆನ್‌ಲೈನ್ ಮುಖಾಂತರ, ಅಥವಾ ತಮ್ಮ ಆಯ್ಕೆಯ ಸಮೀಪದ ಪ್ರಾದೇಶಿಕ ಕೇಂದ್ರಗಳಲ್ಲಿ ಮಾತ್ರವೇ ಖುದ್ದಾಗಿ ಪ್ರವೇಶಾತಿಯನ್ನು ಪಡೆಯುವುದು.** ಆನ್‌ಲೈನ್ ಪ್ರವೇಶ ಅರ್ಜಿ ಫಾರಂನ್ನು ಭರ್ತಿ ಮಾಡಲು **KSOU Online Admission Portal** ಗೆ ಭೇಟಿ ನೀಡಿ. ಪ್ರವೇಶಾತಿ ಹಾಗೂ ಇನ್ನಿತರ ಮಾಹಿತಿಗಾಗಿ ಅರ್ಜಿದಾರರು ಕರಾಮುವಿಯ ಅಧಿಕೃತ ವೆಬ್‌ಸೈಟ್: **www.ksoumysuru.ac.in** ನ್ನು ವೀಕ್ಷಿಸುವುದು. ಪ್ರವೇಶಪೂರ್ವ ಸಮಾಲೋಚನೆಗೆ ಮಾತ್ರ ಅರ್ಜಿದಾರರು ತಮ್ಮ ವ್ಯಾಪ್ತಿಯಲ್ಲಿ ಬರುವ ಕರಾಮುವಿಯ ಯಾವುದೇ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು.
   - ಪ್ರವೇಶ ಶುಲ್ಕವನ್ನು ಆನ್‌ಲೈನ್ ವಿಧಾನದ ಮೂಲಕ ಮಾತ್ರ ಪಾವತಿಸತಕ್ಕದ್ದು.
   - ಅಭ್ಯರ್ಥಿಗಳು ಗುರುತಿನ ಚೀಟಿಗಳು ಹಾಗೂ ಲಭ್ಯ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಮೈಸೂರಿನಲ್ಲಿರುವ ಕರಾಮುವಿಯ ಆಡಳಿತ ಕಛೇರಿಯಿಂದ ಅಥವಾ ತಮ್ಮ ಆಯ್ಕೆಯ ಪ್ರಾದೇಶಿಕ ಕೇಂದ್ರದಿಂದ ಪಡೆಯಬಹುದು.
2. ಪ.ಜಾ./ಪ.ಪ. ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ನಿಗಧಿತ ಶುಲ್ಕವನ್ನು ಪಾವತಿಸಿ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ಶುಲ್ಕ ವಿನಾಯಿತಿ ಯೋಜನೆಯಡಿ ಪ್ರವೇಶಾತಿ ಪಡೆಯಬಹುದಾಗಿದೆ. ಪ್ರವೇಶಾತಿಯು ವಿ.ವಿ.ಯ ಸ್ಕಾಲರ್‌ಷಿಪ್ ಘಟಕವು ವಿಧಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
3. ಓಬಿಸಿ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸಿ ಪ್ರವೇಶಾತಿ ಪಡೆದು, ನಂತರ ಸ್ಟೇಟ್ ಸ್ಕಾಲರ್‌ಷಿಪ್ ಪೋರ್ಟಲ್ (SSP) ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕವನ್ನು ಮರುಭರಿಕೆ ಮಾಡಿಕೊಳ್ಳಬಹುದು.
   - ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳು / ಮಿಲಿಟರಿ ಸೇವೆಯಲ್ಲಿರುವ / ಮಾಜಿ ಸೈನಿಕ ವಿದ್ಯಾರ್ಥಿಗಳು / ಆಟೋ / ಕ್ಯಾಬ್ ಚಾಲಕರು ಮತ್ತು ಅವರ ಪತ್ನಿ / ಮಕ್ಕಳಿಗೆ / ಕೆಎಸ್‌ಆರ್‌ಟಿಸಿ / ಬಿಎಂಟಿಸಿ / ಎನ್‌ಡಬ್ಲ್ಯೂಕೆಆರ್‌ಟಿಸಿ / ಕೆಕೆಆರ್‌ಟಿಸಿಯಲ್ಲಿನ ನೌಕರರುಗಳಿಗೆ ಯುಜಿ ಮತ್ತು ಪಿಜಿ ಪದವಿ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕದಲ್ಲಿ **ಶೇಕಡ 10%ರಷ್ಟು ರಿಯಾಯಿತಿಯನ್ನು** ಪಡೆಯಬಹುದು.
   - **ತೃತೀಯ ಲಿಂಗಕ್ಕೆ** ಸೇರಿದ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ **ವಿನಾಯಿತಿ** ಇರುತ್ತದೆ.
   - ಕೋವಿಡ್–19 ಖಾಯಿಲೆಯಿಂದ ಮೃತಪಟ್ಟ ತಂದೆ / ತಾಯಿಯ ಮಕ್ಕಳಿಗೆ ಸಂಬಂಧಪಟ್ಟ ಇಲಾಖೆಯಿಂದ ಅಗತ್ಯ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಷರತ್ತಿಗೊಳಪಟ್ಟು ಪೂರ್ಣ ಶುಲ್ಕ **ವಿನಾಯಿತಿ** ಇರುತ್ತದೆ.
   - ಸರ್ಕಾರವು ಅಗಿಂದ್ದಾಗ್ಗೆ ನಿಗದಿಪಡಿಸಿರುವ ಹಾಗೂ ಚಾಲ್ತಿಯಲ್ಲಿರುವ ಆದೇಶಗಳನ್ವಯ ದೃಷ್ಠಿ ದೋಷವುಳ್ಳ ಅಭ್ಯರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ (**ಬಿ.ಎಡ್. ಮತ್ತು ಎಂ.ಬಿ.ಎ. ಹೊರತುಪಡಿಸಿ**).
4. ಅಧಿಕೃತ ಕಲಿಕಾರ್ಥಿ ಸಹಾಯ ಕೇಂದ್ರಗಳ ವಿವರಗಳು ವಿವಿಯ ಅಂತರ್‌ಜಾಲದಲ್ಲಿ ಲಭ್ಯವಿದ್ದು ಸಮಾಲೋಚನೆಗೆ ಸಂಪರ್ಕಿಸಬಹುದಾಗಿದೆ
   - ಐಟಿಐ ವಿದ್ಯಾರ್ಹತೆ ಹೊಂದಿರುವವರಿಗೆ ಅಪ್ರೆಂಟಿಸ್‌ಶಿಪ್ ಹಾಗೂ ಸ್ಟೈಫಂಡ್ ಅವಕಾಶಗಳಿರುತ್ತವೆ.

ಕರಾಮುವಿ ಪ್ರಾದೇಶಿಕ ಕೇಂದ್ರಗಳು

1. **ಮೈಸೂರು (ಕೇಂದ್ರ ಕಚೇರಿ)** : ಪ್ರವೇಶಾತಿ ವಿಭಾಗ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–570 006, ದೂ (ಕ): 0821–2500981, ಮೊಬೈಲ್: 77950 77377 / 99012 23043 / 96114 18726 / 9964 274173 / 98440 10407.
2. **ಬೆಂಗಳೂರು–1 ಪ್ರಾದೇಶಿಕ ಕೇಂದ್ರ** : ಸ್ಯಾಟಲೈಟ್ ಬಸ್ ನಿಲ್ದಾಣ ಕಟ್ಟಡ, 1ನೇ ಮಹಡಿ, ಮೈಸೂರು ರಸ್ತೆ, **ಬಾಪೂಜಿನಗರ,** ಬೆಂಗಳೂರು–560 026. ದೂ: 080–26603664, ಮೊಬೈಲ್: 9844965515 / 9844126625.
3. **ಬೆಂಗಳೂರು–2 ಪ್ರಾದೇಶಿಕ ಕೇಂದ್ರ** : ಕರಾಮುವಿ ಮಹಿಳಾ ಪ್ರಾದೇಶಿಕ ಕೇಂದ್ರ, ಸರ್ಕಾರಿ ಬಾಲಕಿಯರ ಪಿ.ಯು. ಕಾಲೇಜ್, 4ನೇ ಮೇನ್, 13ನೇ ಕ್ರಾಸ್, ಬೆಸ್ಕಾಂ ಕಚೇರಿ ಹತ್ತಿರ, **ಮಲ್ಲೇಶ್ವರಂ,** ಬೆಂಗಳೂರು–560 003. ದೂ: 080–23448811, ಮೊಬೈಲ್ : 97411 97921 / 94835 17160.
4. **ಬೆಂಗಳೂರು–3 ಪ್ರಾದೇಶಿಕ ಕೇಂದ್ರ** : ಆಕ್ಸ್‌ಫರ್ಡ್ ಎಜುಕೇಷನಲ್ ಟ್ರಸ್ಟ್, ಶ್ರೀನಿವಾಸಪುರ, ಕೋಗಿಲು ಮುಖ್ಯ ರಸ್ತೆ, **ಯಲಹಂಕ,** ಬೆಂಗಳೂರು–560 064, ಮೊಬೈಲ್: 98805 26439 / 90195 26439.
5. **ಬೆಂಗಳೂರು–4 ಪ್ರಾದೇಶಿಕ ಕೇಂದ್ರ:** ನಂ.121, 2ನೇ ಮಹಡಿ, **ಮಡಿವಾಳ,** ಮಡಿವಾಳ ಸಂಚಾರಿ ಪೊಲೀಸ್ ಸ್ಟೇಷನ್ ಹಿಂಭಾಗ, ಹ್ಯಾಪಿಯೆಸ್ಟ್ ಮೈಂಡ್ ಹತ್ತಿರ, ಹೊಸೂರು ಮುಖ್ಯ ರಸ್ತೆ, ಬೆಂಗಳೂರು–560 068. ಮೊಬೈಲ್ : 8618821417 / 98445 56968.
6. **ಬೆಂಗಳೂರು–5 ಪ್ರಾದೇಶಿಕ ಕೇಂದ್ರ:** ಸರಕಾರಿ ಪ್ರಥಮ ದರ್ಜೆ ಕಾಲೇಜು ಆವರಣ, **ಕೆ.ಆರ್. ಪುರಂ,** ಬೆಂಗಳೂರು–560 036. ಮೊಬೈಲ್: 87227 88788.
7. **ಬೆಂಗಳೂರು–6 ಪ್ರಾದೇಶಿಕ ಕೇಂದ್ರ:** ಶ್ರೀ ಲಕ್ಷ್ಮೀ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್ ಆವರಣ, ನಂ.4 ಮತ್ತು 5, ಶ್ರೀ ಗಂಧಕಾವಲ್, ಮಾಗಡಿ ಮುಖ್ಯ ರಸ್ತೆ, **ಸುಂಕದಕಟ್ಟೆ,** ಬೆಂಗಳೂರು–560 091. ಮೊಬೈಲ್: 84534 58238.
8. **ಬೆಳಗಾಂ ಪ್ರಾದೇಶಿಕ ಕೇಂದ್ರ** : ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಶಿಕ್ಷಣ ಮಹಾವಿದ್ಯಾಲಯ ಆವರಣ, ನೆಹರು ನಗರ, ಬೆಳಗಾಂ–590 010. ಮೊಬೈಲ್: 96634 51169.
9. **ಬಳ್ಳಾರಿ ಪ್ರಾದೇಶಿಕ ಕೇಂದ್ರ** : ಪ್ರಾದೇಶಿಕ ವಿಜ್ಞಾನ ಕೇಂದ್ರದ ಹಿಂಭಾಗ, ಜಿಲ್ಲಾ ಕ್ರೀಡಾಂಗಣದ ಹತ್ತಿರ, ನಲ್ಲಚೆರವು ಪ್ರದೇಶ, ಬಳ್ಳಾರಿ–583 102. ಮೊಬೈಲ್: 9035143912 / 7892597159.
10. **ಚಾಮರಾಜನಗರ ಪ್ರಾದೇಶಿಕ ಕೇಂದ್ರ** : ಕೆ.ಹೆಚ್.ಬಿ. ಕಾಲೋನಿ, ರಾಮಸಮುದ್ರ ಲೇಔಟ್, ಇಮ್ಮಾನ್ಯುಯೆಲ್ ಕ್ರಿಶ್ಚಿಯನ್ ಪಬ್ಲಿಕ್ ಸ್ಕೂಲ್ ಹತ್ತಿರ, ಚಾಮರಾಜನಗರ–571342, ಮೊಬೈಲ್: 99803 02686.
11. **ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರ** : ಸಾಯಿಮಂದಿರ ರಸ್ತೆ, ಮಧುವನ ಬಡಾವಣೆ, ಚಿಕ್ಕಮಗಳೂರು–577 102, ಮೊಬೈಲ್: 80887 16236.
12. **ದಾವಣಗೆರೆ ಪ್ರಾದೇಶಿಕ ಕೇಂದ್ರ** : ಜೆ. ಹೆಚ್. ಪಟೇಲ್ ಬಡಾವಣೆ, ಶಾಮನೂರು–ನಾಗನೂರು ರಸ್ತೆ ಹಿಂಭಾಗ, ದಾವಣಗೆರೆ–577 004, ಮೊಬೈಲ್: 99864 58055.
13. **ಧಾರವಾಡ ಪ್ರಾದೇಶಿಕ ಕೇಂದ್ರ** : ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್ ಕ್ಯಾಂಪಸ್, ಕೆ.ಸಿ.ಡಿ. ರಸ್ತೆ, ಎಲ್.ಐ.ಸಿ. ಕಚೇರಿ ಎದುರು, ಧಾರವಾಡ–580008. ದೂ: 0836–2441199, ಮೊಬೈಲ್: 99168 94944.
14. **ಹಾಸನ ಪ್ರಾದೇಶಿಕ ಕೇಂದ್ರ** : ಎಸ್. ಎಂ. ಕೃಷ್ಣ ನಗರ, ಅರಸೀಕೆರೆ ರಸ್ತೆ, ದೊಡ್ಡಮರ ಅಂಚೆ, ಕೇಂದ್ರೀಯ ವಿದ್ಯಾಲಯದ ಹತ್ತಿರ, ಬಿ. ಟಿ. ಕೊಪ್ಪಲು, ಹಾಸನ–573 118, ಮೊಬೈಲ್: 81978 18807 / 94826 03060.
15. **ಕಲಬುರ್ಗಿ ಪ್ರಾದೇಶಿಕ ಕೇಂದ್ರ** : ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾನಿಲಯ ಆವರಣ, ಕಲ್ಬುರ್ಗಿ–585 106, ಮೊಬೈಲ್: 99167 83555.
16. **ಕಾರವಾರ ಪ್ರಾದೇಶಿಕ ಕೇಂದ್ರ** : ಯು.ಎಸ್.ಕೆ.ವಿ ಹಳೆ ಕಟ್ಟಡ, ಮೊದಲನೇ ಮಹಡಿ, ಸವಿತ ಸರ್ಕಲ್ ಮುಖ್ಯ ರಸ್ತೆ, ಕಾರವಾರ–581 301, ಮೊಬೈಲ್: 99006 67916.
17. **ಕೋಲಾರ ಪ್ರಾದೇಶಿಕ ಕೇಂದ್ರ** : ಎಸ್. ಪಿ. ಕಚೇರಿ ಹಿಂಭಾಗ, ಆರ್. ಎಲ್. ಜಾಲಪ್ಪ ಆಸ್ಪತ್ರೆ ಸಮೀಪ, ಕೋಲಾರ–563 101, ಮೊಬೈಲ್: 89702 23247.
18. **ಮಂಡ್ಯ ಪ್ರಾದೇಶಿಕ ಕೇಂದ್ರ** : # ಸಿ.ಎಸ್–11(ಎ), 'ಇ' ಬ್ಲಾಕ್, ವಿವೇಕಾನಂದ ನಗರ ಲೇಔಟ್, ಹೊಳಲು, ಮೇಲುಕೋಟೆ ರಸ್ತೆ, ಮಂಡ್ಯ–571 401. ಮೊಬೈಲ್: 97419 90284.
19. **ಮಂಗಳೂರು ಪ್ರಾದೇಶಿಕ ಕೇಂದ್ರ** : ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘ, 3ನೇ ಮಹಡಿ, ಶಿರಡಿ ಸಾಯಿಬಾಬಾ ಮಂದಿರದ ಹತ್ತಿರ, ಉಡುಪಿ ಮುಖ್ಯ ರಸ್ತೆ, ಅಶೋಕನಗರ ಅಂಚೆ, ಲೇಡಿಹಿಲ್, ಮಂಗಳೂರು–575 006, ಮೊಬೈಲ್: 99450 58950 / 99721 96692.
20. **ರಾಮನಗರ ಪ್ರಾದೇಶಿಕ ಕೇಂದ್ರ** : ನಂ. 103, 'ಇ' ಬ್ಲಾಕ್, ಶಾಂತಿನಿಕೇತನ್ ಗ್ರೂಪ್ ಆಫ್ ಇನ್ಸ್‌ಟಿಟ್ಯೂಷನ್ಸ್, ಬಿ. ಎಂ. ರಸ್ತೆ, ವಿವೇಕಾನಂದ ನಗರ, ರಾಮನಗರ–562 159, ಮೊಬೈಲ್: 94486 68880 / 88617 32487.
21. **ಶಿವಮೊಗ್ಗ ಪ್ರಾದೇಶಿಕ ಕೇಂದ್ರ** : ಅಲ್ಕೋಳ ಸರ್ಕಲ್, ಎಲ್.ಐ.ಸಿ. ಕಚೇರಿ ಹತ್ತಿರ, ಸಾಗರ ರಸ್ತೆ, ಶಿವಮೊಗ್ಗ–577 201, ದೂ: 08182–250367, ಮೊಬೈಲ್: 91644 67131.
22. **ತುಮಕೂರು ಪ್ರಾದೇಶಿಕ ಕೇಂದ್ರ** : ಸಿಎ–07, ಟೂಡಾ ಲೇಔಟ್, ರಾಜೀವ್‌ಗಾಂಧಿ ನಗರ, ಮೆಳೆಕೋಟೆ, ಗಂಗಸಂದ್ರ ಮುಖ್ಯ ರಸ್ತೆ, ತುಮಕೂರು–572 105, ದೂ: 0816–2955580, ಮೊಬೈಲ್: 98445 06629.
23. **ಉಡುಪಿ ಪ್ರಾದೇಶಿಕ ಕೇಂದ್ರ** : ಜಿಲ್ಲಾ ಪಂಚಾಯತ್ ಕಚೇರಿ ಹಳೇ ಕಟ್ಟಡ, 2ನೇ ಮಹಡಿ, ಬನ್ನಂಜೆ, ಉಡುಪಿ–576 101, ದೂ: 0820–2522247, ಮೊಬೈಲ್: 99725 26647.
24. **ಬೀದರ್ ಪ್ರಾದೇಶಿಕ ಕೇಂದ್ರ** : ಸರ್ಕಾರಿ ಪ್ರ.ದ. ಕಾಲೇಜು, ನೌಬಾದ್, ಬೀದರ್–585 402, ದೂ: 08482–232020, ಮೊಬೈಲ್: 99866 96487.
25. **ಬಾಗಲಕೋಟೆ ಪ್ರಾದೇಶಿಕ ಕೇಂದ್ರ** : ಬಸವೇಶ್ವರ ಕಲಾ ಕಾಲೇಜು, ಬಿ.ವಿ.ಎಸ್. ಕ್ಯಾಂಪಸ್, ಬಾಗಲಕೋಟೆ, ಮೊಬೈಲ್: 70222 22241 / 88610 40975.
26. **ಮಡಿಕೇರಿ ಪ್ರಾದೇಶಿಕ ಕೇಂದ್ರ:** ಜೂನಿಯರ್ ಕಾಲೇಜು ಕ್ಯಾಂಪಸ್, ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಇಂಡೋರ್ ಸ್ಟೇಡಿಯಂ, ಮಡಿಕೇರಿ–571 201, ಕೊಡಗು ಜಿಲ್ಲೆ, ಮೊಬೈಲ್: 80733 42310 / 91419 38803.
27. **ಕೊಳ್ಳೇಗಾಲ ಪ್ರಾದೇಶಿಕ ಕೇಂದ್ರ:** ಹರಿಚರಣ್ ಆರ್ಕೇಡ್, 2ನೇ ಮಹಡಿ, ಸೌತ್ ಎಕ್ಸ್‌ಟೆಕ್ಷನ್, ಮಹದೇಶ್ವರ ಕಲ್ಯಾಣ ಮಂಟಪದ ಎದುರು, ಕೊಳ್ಳೇಗಾಲ–571 440. ಮೊಬೈಲ್: 99807 40048.
28. **ಚಿತ್ರದುರ್ಗ ಪ್ರಾದೇಶಿಕ ಕೇಂದ್ರ:** ಡಾನ್ ಬಾಸ್ಕೋ ಪದವಿ ಕಾಲೇಜು ಆವರಣ, ಬಿಸಿಎಂ ಹಾಸ್ಟೆಲ್ ಹತ್ತಿರ, ಶನಿಮಹಾತ್ಮ ದೇವಸ್ಥಾನ ರಸ್ತೆ, ಚಳ್ಳಕರೆ ರಸ್ತೆ, ಚಿತ್ರದುರ್ಗ–577501. ಮೊಬೈಲ್: 74066 12788.
29. **ಹಾವೇರಿ ಪ್ರಾದೇಶಿಕ ಕೇಂದ್ರ:** ಶ್ರೀ ಶಿವಲಿಂಗೇಶ್ವರ ವಿದ್ಯಾಪೀಠ, ಹುಕ್ಕೇರಿಮಠ, ಹಾವೇರಿ–581110. ಮೊಬೈಲ್: 97432 76734.
30. **ಚಿಕ್ಕಬಳ್ಳಾಪುರ ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಥಮ ದರ್ಜೆ (ಪುರಸಭೆ) ಕಾಲೇಜು, ಎಂ. ಜಿ. ರಸ್ತೆ, ಚಿಕ್ಕಬಳ್ಳಾಪುರ–562101. ಮೊಬೈಲ್: 91643 00299.
31. **ರಾಯಚೂರು ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಿಜಲಿಂಗಪ್ಪ ಕಾಲೋನಿ, ವಾಲ್ಮೀಕಿ ಸರ್ಕಲ್ ಹತ್ತಿರ, ಲಿಂಗಸಗೂರು ರಸ್ತೆ, ರಾಯಚೂರು–584101. ಮೊಬೈಲ್: 96866 19555.
32. **ಯಾದಗಿರಿ ಪ್ರಾದೇಶಿಕ ಕೇಂದ್ರ: ಸರ್ಕಾರಿ ಪದವಿ ಕಾಲೇಜು,** ಚಿತ್ತಾಪುರ ರಸ್ತೆ, ಯಾದಗಿರಿ–585202 ಮೊಬೈಲ್: 98800 61361.
33. **ವಿಜಯಪುರ ಪ್ರಾದೇಶಿಕ ಕೇಂದ್ರ** : ವಿಎಸ್‌ಜಿ, ಕಲಾ ಮತ್ತು ವಾಣಿಜ್ಯ ಕಾಲೇಜು ಆವರಣ, ನಂ.680/ಇ, ಆಕಾಶವಾಣಿ ಕೇಂದ್ರದ ಎದುರು, ರಿಂಗ್ ರಸ್ತೆ, ವಿಜಯಪುರ–586 103. ಮೊಬೈಲ್: 94836 28267.
34. **ಕೊಪ್ಪಳ ಪ್ರಾದೇಶಿಕ ಕೇಂದ್ರ** : ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯ, ಮೊದಲನೇ ಮಹಡಿ, ಗೊವನಕೊಪ್ಪ ಆಸ್ಪತ್ರೆ ಎದುರು, ಹೊಸಪೇಟೆ ರಸ್ತೆ, ಕೊಪ್ಪಳ–583 231, ಮೊಬೈಲ್: 90085 88675.
35. **ಗದಗ ಪ್ರಾದೇಶಿಕ ಕೇಂದ್ರ** : ಕಲ್ಯಾಣ ಸೀರಿ ಕಾಲೇಜು, ಆವರಣ, ಎಲ್.ಎಲ್. ಬಿಲ್ಡಿಂಗ್, (ಹಳೆ ಡಿಸಿ ಆಫೀಸ್ ಸರ್ಕಲ್, ಜನರಲ್ ಕಾರ್ಯಪ್ಪ ಸರ್ಕಲ್, ಗದಗ–582 101. ಮೊಬೈಲ್: 86189 29376.
36. **ವಿಜಯನಗರ (ಹೊಸಪೇಟೆ) ಪ್ರಾದೇಶಿಕ ಕೇಂದ್ರ** : ಕನ್ನಡ ವಿಶ್ವವಿದ್ಯಾನಿಲಯ, ವಿದ್ಯಾರಣ್ಯ, ಹಂಪಿ, ವಿಜಯನಗರ ಜಿಲ್ಲೆ–583 276, ಮೊಬೈಲ್: 99451 71920.

ಪ್ರವೇಶಾತಿಯ ಪ್ರಾರಂಭದ ದಿನಾಂಕ: 22.07.2024

ಪ್ರವೇಶಾತಿಯ ಅಂತಿಮ ದಿನಾಂಕ: 15.11.2024

ತರಗತಿ ಹಾಗೂ ಪರೀಕ್ಷೆಗಳನ್ನು ಪ್ರಾದೇಶಿಕ ಕೇಂದ್ರ / ಕಲಿಕೆ ಸಹಾಯ ಕೇಂದ್ರಗಳಲ್ಲಿ ನಡೆಸಲಾಗುವುದು.

ಸಹಿ/–, ಕುಲಸಚಿವರು

ಶಿಗ್ಗಾವಿ ಕ್ಷೇತ್ರದ ಉಪಚುನಾವಣೆ • ಆರೋಪ–ಪ್ರತ್ಯಾರೋಪದ ಹೇಳಿಕೆ

‘ಪ್ರಚಾರದಲ್ಲಿ ಹಣ–ಹೆಂಡದ ಮಾತು’

• ಸಂತೋಷ ಜಿಗಳಿಕೊಪ್ಪ

ಯಾಸೀರ ಅಹ್ಮದ್ ಖಾನ್ ಪಠಾಣ

ಶಿಗ್ಗಾವಿ (ಹಾವೇರಿ): ‘ಶಿಗ್ಗಾವಿ ಕ್ಷೇತ್ರದ ಉಪ ಚುನಾವಣೆಯಲ್ಲಿ ಹಣ – ಹೆಂಡದ ಹೊಳೆಯೇ ಹರಿಯುತ್ತದೆ’ ಎಂದು ಕಾಂಗ್ರೆಸ್, ಬಿಜೆಪಿಯವರು ಪರಸ್ಪರ ಆರೋಪಿಸುತ್ತಿದ್ದಾರೆ. ಪ್ರತಿ ಬಾರಿಯ ಚುನಾವಣೆ ಸಂದರ್ಭದಲ್ಲಿ ಕತ್ತಲ ರಾತ್ರಿಯ (ಮತದಾನದ ಮುನ್ನಾದಿನದ ರಾತ್ರಿ) ಕರಾಮತ್ತು ಜೋರಾಗುವ ಸಂಗತಿ ಗುಟ್ಟಾಗಿ ಉಳಿದಿಲ್ಲ.

ನಾಲ್ಕು ಅವಧಿಯಲ್ಲಿ ಶಾಸಕರಾಗಿದ್ದ ಬಸವರಾಜ ಬೊಮ್ಮಾಯಿ ಅವರು ಕ್ಷೇತ್ರವನ್ನು ಬಿಜೆಪಿ ತೆಕ್ಕೆಯಲ್ಲಿ ಉಳಿಸಿಕೊಂಡಿದ್ದಾರೆ. ನಿರಂತರವಾಗಿ ಸೋಲು ಅನುಭವಿಸುತ್ತಿರುವ ಕಾಂಗ್ರೆಸ್, ಈ ಬಾರಿಯಾದರೂ ಕ್ಷೇತ್ರವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಕಸರತ್ತು ನಡೆಸುತ್ತಿದೆ. ಎರಡೂ ಪಕ್ಷಗಳ ನಡುವೆ ತೀವ್ರ ಹಣಾಹಣಿಯಿದೆ.

ಕ್ಷೇತ್ರದ ಹಿರೇಮಣಕಟ್ಟಿ ಗ್ರಾಮದಲ್ಲಿ ಇತ್ತೀಚೆಗೆ ಪ್ರಚಾರದ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಅಭ್ಯರ್ಥಿ ಯಾಸೀರ ಅಹ್ಮದ್ ಖಾನ್ ಪಠಾಣ, ‘ಕ್ಷೇತ್ರದ ಚುನಾವಣೆಯನ್ನು ಪ್ರತಿಸ್ಪರ್ಧಿಗಳು ಹಣ–ಹೆಂಡದ ಚುನಾವಣೆ ಮಾಡಿದ್ದಾರೆ. ಈ ಬಾರಿ ಅದಕ್ಕೆ ಅವಕಾಶವಿಲ್ಲ’ ಎನ್ನುತ್ತಾರೆ.

‘ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೊಬ್ಬರಂತೆ 9 ಸಚಿವರು ಕ್ಷೇತ್ರದಲ್ಲಿ ಉಳಿದುಕೊಳ್ಳಲಿದ್ದಾರೆ. ಪ್ರತಿ ಬೂತ್ ಮಟ್ಟದಲ್ಲೂ ಹದ್ದಿನ ಕಣ್ಣು ಇರಿಸಲಿದ್ದಾರೆ. ಹಣ–ಹೆಂಡ ಹಂಚುವುದು ಕಂಡುಬಂದರೆ, ಬೀದಿಗೆ ಇಳಿದು ತಡೆಯಲಿದ್ದಾರೆ’ ಎಂದು ಪಠಾಣ ತಿಳಿಸಿದರು.

ಕಾಂಗ್ರೆಸ್ ಕಾರ್ಯಕರ್ತರು ಯಾರಿಗೂ ಹೆದರುವ ಅವಶ್ಯಕತೆಯಿಲ್ಲ. 9 ಸಚಿವರು, 30 ಶಾಸಕರು ಜೊತೆಗಿರಲಿದ್ದಾರೆ. ಅಕ್ರಮಕ್ಕೂ ಆಸ್ಪದ ಇರುವುದಿಲ್ಲ
ಸತೀಶ ಜಾರಕಿಹೊಳಿ
ಸಚಿವ

ಚುನಾವಣೆ ಅಕ್ರಮಗಳು ಕಂಡುಬಂದರೆ ಸಹಾಯವಾಣಿ 1800-425-0662, ಹಾವೇರಿ ಉಪ ವಿಭಾಗ ಕಚೇರಿಗೆ (08375-232902) ಮಾಹಿತಿ ನೀಡಿ ವಿಜಯ
ಮಹಾಂತೇಶ ದಾನಮ್ಮನವರ
ಜಿಲ್ಲಾ ಚುನಾವಣಾಧಿಕಾರಿ, ಹಾವೇರಿ

ಶಿಗ್ಗಾವಿ ಕ್ಷೇತ್ರದಲ್ಲಿ ಬಸವರಾಜ ಬೊಮ್ಮಾಯಿ ಅವರು ತೋಳ್ಬಲ, ಹಣದ ಬಣ, ಸುಳ್ಳಿನ ಬಲದ ಮೇಲೆ ಮತದಾರರ ದಾರಿ ತಪ್ಪಿಸುತ್ತಿದ್ದಾರೆ
ಸೈಯದ್ ಅಜ್ಜಂಪೀರ ಖಾದ್ರಿ
ಕಾಂಗ್ರೆಸ್ ಮುಖಂಡ

ಬೊಮ್ಮಾಯಿ ತಿರುಗೇಟು



ಬಸವರಾಜ ಬೊಮ್ಮಾಯಿ

ಕಾಂಗ್ರೆಸ್ ಅಭ್ಯರ್ಥಿ ಯಾಸೀರ ಅಹ್ಮದ್ ಖಾನ್ ಪಠಾಣ ಆರೋಪಕ್ಕೆ ತಿರುಗೇಟು ನೀಡಿರುವ ಸಂಸದ ಬಸವರಾಜ ಬೊಮ್ಮಾಯಿ , ‘ಕಾಂಗ್ರೆಸ್ ಪಕ್ಷದಲ್ಲಿಯೇ ದೊಡ್ಡ ಪ್ರಮಾಣದಲ್ಲಿ ಹಣ– ಹೆಂಡ ಖರ್ಚು ಮಾಡುವವರಿದ್ದಾರೆ’ ಎಂದು ದೂರಿದರು.

‘ಹಣ–ಹೆಂಡ ಹೇಗೆ ಬರುತ್ತಿದೆ ಎಂಬುದು ನಮಗೆ ಗೊತ್ತಿದೆ. ಕಾಂಗ್ರೆಸ್‌ನ ಸಚಿವರು ಹಾಗೂ ಶಾಸಕರು, ಚುನಾವಣೆಗೆ ಕ್ಷೇತ್ರಕ್ಕೆ ಬರುತ್ತಿದ್ದಾರೆ. ಅವರು ಬರಿಗೈಯಲ್ಲಿ ಸುಮ್ಮನೇ ಬರುತ್ತಾರಾ’ ಎಂದು ಪ್ರಶ್ನಿಸಿದರು.

‘ಚುನಾವಣೆ ನೋಡುತ್ತಲೇ ನಮಗೆ ವಯಸ್ಸಾಗಿದೆ. ಪ್ರತಿ ಚುನಾವಣೆಯಲ್ಲೂ ಮುಖಂಡರು, ಅಭ್ಯರ್ಥಿಗಳಿಂದ ಹಣ ಪಡೆಯುತ್ತಾರೆ. ಅದರಲ್ಲಿ ಸ್ವಲ್ಪ ಖರ್ಚು ಮಾಡಿ, ಉಳಿದ ಹಣವನ್ನೆಲ್ಲ ತಾವೇ ತಿನ್ನುತ್ತಾರೆ. ಇಂಥ ಮುಖಂಡರನ್ನು ನೋಡಿ ನೋಡಿ ಸಾಕಾಗಿದೆ. ಹೀಗಾಗಿ, ಈ ವರ್ಷ ಚುನಾವಣೆ ತಂಟೆಗೆ ಹೋಗಿಲ್ಲ’ ಎನ್ನುತ್ತಾರೆ ಶಿಗ್ಗಾವಿ ಪಟ್ಟಣದ ಎಲೆ ವ್ಯಾಪಾರಿ ರಫೀಕ್.

ಪ್ರಚಾರ ಭರಾಟೆಗೆ ಹಬ್ಬದ ತಡೆ

ಸಂಡೂರು: ಕ್ಷೇತ್ರದಲ್ಲಿ ಕಾಣಿಸಿಕೊಳ್ಳದ ಅಭ್ಯರ್ಥಿಗಳು

• ಹರಿಶಂಕರ್ ಆರ್.

ಕಾನೂನು ಸುವ್ಯವಸ್ಥೆ, ಭದ್ರತೆ ಕುರಿತು ಮತದಾರರಲ್ಲಿ ವಿಶ್ವಾಸ ಮೂಡಿಸಲು ಜಿಲ್ಲಾ ಪೊಲೀಸ್ ಇಲಾಖೆ ಕ್ಷೇತ್ರದಾದ್ಯಂತ ಪಥಸಂಚಲನ ಕೈಗೊಂಡಿದೆ. ಗುರುವಾರ ಸಂಜೆ ಸಂಡೂರು ಪಟ್ಟಣದಲ್ಲಿ ನಡೆದ ಪಥಸಂಚಲನದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ವಿ.ಜೆ ಪಾಲ್ಗೊಂಡಿದ್ದರು.

ಸಂಡೂರು(ಬಳ್ಳಾರಿ): ಸಂಡೂರಿನಲ್ಲಿ ಬಿರುಸುಗೊಂಡಿದ್ದ ಚುನಾವಣಾ ರಾಜಕೀಯ ಚಟುವಟಿಕೆಗೆ ದೀಪಾವಳಿ ಹಬ್ಬ ಶುಕ್ರವಾರ ತಾತ್ಕಾಲಿಕ ತಡೆ ಹಾಕಿದೆ. ಎರಡೂ ಪಕ್ಷಗಳ ಅಭ್ಯರ್ಥಿಗಳು, ರಾಜಕೀಯ ನಾಯಕರು, ಮುಖಂಡರು ದೇವಾಲಯ ಭೇಟಿ, ಪೂಜೆ, ಮನೆಯಲ್ಲಿ ಹಬ್ಬದ ಆಚರಣೆಗೆ ಸೀಮಿತವಾದರು.

ಕಾಂಗ್ರೆಸ್ ಅಭ್ಯರ್ಥಿ ಅನ್ನಪೂರ್ಣ ತುಕಾರಾಂ ಅವರಾಗಲಿ, ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಅವರೂ ಪ್ರಚಾರದಲ್ಲಿ ಕಾಣಿಸಿಕೊಳ್ಳಲಿಲ್ಲ. ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ತುಮಟಿ ಲಕ್ಷ್ಮಣ ಅವರ ತಂದೆ ನಿಧನರಾದ ಕಾರಣ ಕಾಂಗ್ರೆಸ್ ಮುಖಂಡರು ಅಲ್ಲಿ ಪಾಲ್ಗೊಂಡಿದ್ದರು.

ಹನುಮಂತ ಅವರ ಬೆನ್ನಿಗೆ ನಿಂತಿದ್ದ ಶಾಸಕ ಗಾಲಿ ಜನಾರ್ದನ ರೆಡ್ಡಿ ಶುಕ್ರವಾರ ತಮ್ಮ ನಿವಾಸದಲ್ಲಿ ಲಕ್ಷ್ಮೀ ಪೂಜೆ ಮಾಡಿ ಬಳಿಕ ಗಂಗಾವತಿ ತಾಲ್ಲೂಕಿಗೆ ತೆರಳಿದರು. ಅಲ್ಲಿ ರಾಜ್ಯೋತ್ಸವ ಆಚರಣೆಯಲ್ಲಿ ತೊಡಗಿಸಿಕೊಂಡರು. ಸಚಿವ ಸಂತೋಷ್ ಲಾಡ್ ಧಾರವಾಡಕ್ಕೆ ತೆರಳಿದ್ದರು.

ಹಬ್ಬದ ಬಳಿಕ ಅಬ್ಬರ: ಬಿಜೆಪಿ ನಾಯಕರು ಸೋಮವಾರದ ಬಳಿಕ ಮತ್ತೆ ಪ್ರಚಾರ ಬಿರುಸುಗೊಳಿಸಲಿದ್ದಾರೆ. ಈಗ ಸಭೆ ಸೇರಿ ಮುಂದಿನ ಯೋಜನೆ, ರಣತಂತ್ರ ರೂಪಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

‘ಮೈತ್ರಿಯಲ್ಲಿ ಮುನಿಸಿಲ್ಲ’

ಬಿಜೆಪಿ– ಜೆಡಿಎಸ್ ಮೈತ್ರಿಯಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಶಾಸಕ ಜನಾರ್ದನಾ ರೆಡ್ಡಿ ಜೆಡಿಎಸ್ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೆ. ಮೈತ್ರಿ ಧರ್ಮ ಪಾಲನೆಯಾಗುತ್ತಿದೆ. ಚುನಾವಣಾ ಪ್ರಚಾರವೂ ಚೆನ್ನಾಗಿ ನಡೆಯುತ್ತಿದೆ. ನಮ್ಮ ಅಭ್ಯರ್ಥಿ ಗೆಲ್ಲಲಿದ್ದಾರೆ ಎಂದು ಸಂಡೂರು ತಾಲೂಕು ಜೆಡಿಎಸ್ ಅಧ್ಯಕ್ಷ ಎನ್. ಸೋಮಪ್ಪ ಪ್ರಜಾವಾಣಿಗೆ ತಿಳಿಸಿದ್ದಾರೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ ಸೋಮವಾರ ಬಳ್ಳಾರಿಗೆ ಆಗಮಿಸುತ್ತಿದ್ದು, ‘ವಕ್ಫ್’ ವಿರುದ್ಧದ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಬಳಿಕ ಸಂಡೂರಿಗೆ ತೆರಳಲಿರುವ ಅವರು, ಪ್ರಚಾರ ನಡೆಸಲಿದ್ದಾರೆ ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕರು ಸೋಮವಾರ ರಂಗಪ್ರವೇಶ ಮಾಡಲಿದ್ದಾರೆ. ಪಂಚಾಯಿತಿಗೊಬ್ಬರಂತೆ ಉಸ್ತುವಾರಿಗಳನ್ನು ಕಾಂಗ್ರೆಸ್ ನೇಮಕ ಮಾಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಮುಂದಿನ ವಾರ 2–3 ದಿನ ಕಾಲ ಸಂಡೂರಿನಲ್ಲೇ ಉಳಿಯುವ ಸಾಧ್ಯತೆಗಳಿವೆ.

ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರೂ ಒಂದು ದಿನ ಬಿಜೆಪಿ ಅಭ್ಯರ್ಥಿ ಪರ ಪ್ರಚಾರಕ್ಕೆ ಬರಲಿದ್ದಾರೆ ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ.

‘ಕೈ’ ಪ್ರಚಾರದಲ್ಲಿ ಪ್ರತಿಧ್ವನಿಸಿದ ಕಣ್ಣೀರು

ಜನರ ಕಣ್ಣೀರು ಒರೆಸುವವರು ಯಾರು: ಸಿ.ಪಿ.ಯೋಗೇಶ್ವರ್ ಪ್ರಶ್ನೆ

• ಓದೇಶ ಸಕಲೇಶಪುರ

ಚನ್ನಪಟ್ಟಣ ತಾಲ್ಲೂಕಿನ ಅಕ್ಕೂರು ಜಿ.ಪಂ. ವ್ಯಾಪ್ತಿಯ ಗ್ರಾಮಗಳಲ್ಲಿ ಶುಕ್ರವಾರ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಪ್ರಚಾರ ನಡೆಸಿದರು. ಮಾಜಿ ಸಂಸದ ಡಿ.ಕೆ.ಸುರೇಶ್ ಮತ್ತು ಮಾಜಿ ಶಾಸಕ ಎಂ.ಸಿ. ಅಶ್ವಥ್ ಸಾಥ್ ನೀಡಿದರು

ಚನ್ನಪಟ್ಟಣ (ರಾಮನಗರ): ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಮತಯಾಚನೆ ವೇಳೆ ಭಾವುಕರಾಗಿ ಕಣ್ಣೀರು ಹಾಕಿದ ವಿಷಯ ಶುಕ್ರವಾರ ಕಾಂಗ್ರೆಸ್ ಪಾಳಯದ ಪ್ರಚಾರಕ್ಕೆ ಅಸ್ತ್ರವಾಯಿತು.

ಪ್ರಚಾರ ಭಾಷಣದಲ್ಲಿ ಈ ಕುರಿತು ಪ್ರಸ್ತಾಪಿಸಿದ ‘ಕೈ’ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಮತ್ತು ಮಾಜಿ ಸಂಸದ ಡಿ.ಕೆ.ಸುರೇಶ್, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕುಟುಂಬದ ವಿರುದ್ಧ ವಾಗ್ದಾಳಿ ನಡೆಸಿದರು.

ವಾರದ ಹಿಂದೆಯಷ್ಟೇ, ‘ಕಡೆಗಳಿಗೆಯಲ್ಲಿ ಗಾಲಿಕುರ್ಚಿ ಅಥವಾ ಆಂಬುಲೆನ್ಸ್‌ನಲ್ಲಿ ಬರುವವರಿಗೆ ಮತ್ತು ಕಣ್ಣೀರಿನ ನಾಟಕವಾಡುವವರಿಗೆ ಮರುಳಾಗಬೇಡಿ’ ಎಂದು ಜೆಡಿಎಸ್ ನಾಯಕರ ವಿರುದ್ಧ ವ್ಯಂಗ್ಯವಾಡಿದ್ದ ‘ಕೈ’ ಮುಖಂಡರು, ಇಂದು ನಿಖಿಲ್ ಕಣ್ಣೀರಿಗೆ ಕುಟುಂಬದವರೇ ಹೊಣೆ ಎಂದು ಟೀಕಿಸಿದರು.

ಕಣ್ಣೀರು ಒರೆಸೋರು ಯಾರು?: ತಾಲ್ಲೂಕಿನ ಸುಳ್ಳೇರಿಯಲ್ಲಿ ಪ್ರಚಾರ ನಡೆಸಿದ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್, ‘ನಿಖಿಲ್ ಕಣ್ಣೀರು ಹಾಕಿದ ಎಂದು ಎಲ್ಲ ಕಡೆ ಚರ್ಚೆ ನಡೆಯುತ್ತಿದೆ. ತಂದೆ ಮಾಡಿದ ಅವ್ಯವಸ್ಥೆಗೆ ಜನ ಕಣ್ಣೀರು ಹಾಕುತ್ತಿದ್ದು, ಅವರ ಕಣ್ಣೀರು ಒರೆಸೋರು ಯಾರು’ ಎಂದರು.

ಕುಂದದ ಉತ್ಸಾಹ: ಹಬ್ಬದ ಪ್ರಯುಕ್ತ ಜೆಡಿಎಸ್‌ನವರು ಪ್ರಚಾರಕ್ಕೆ ಕೊಂಚ ವಿರಾಮ ಕೊಟ್ಟಿದ್ದರು. ‘ಕೈ’ ಪಾಳಯದಲ್ಲಿ ಪ್ರಚಾರದ ಉತ್ಸಾಹ ಇತ್ತು. ಯೋಗೇಶ್ವರ್ ಅವರೊಂದಿಗೆ ಶಾಸಕರಾದ ಶ್ರೀನಿವಾಸ್, ಶರತ್ ಬಚ್ಚೇಗೌಡ, ಮೇಲ್ಮನೆ ಸದಸ್ಯ ಪುಟ್ಟಣ್ಣ, ಎಸ್. ರವಿ ಅವರು ಗ್ರಾಮೀಣ ಭಾಗದಲ್ಲಿ ಮತಯಾಚಿಸಿದರು.

‘ಮನುಷ್ಯತ್ವ ಇರೋರಿಗೆ ಕಣ್ಣೀರು ಬರುತ್ತೆ’

‘ಚುನಾವಣೆ ವೇಳೆ ಇವರ್‍ಯಾರೂ ಕಣ್ಣೀರು ಹಾಕಿಲ್ಲವೇ? ಮನುಷ್ಯತ್ವ ಇರುವವರಿಗೆ ಕಣ್ಣೀರು ಬರುತ್ತದೆ. ಈ ವಿಷಯ ದೊಡ್ಡದು ಮಾಡುವ ಅವಶ್ಯ ಇಲ್ಲ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಸುರೇಶ್ ಹೇಳಿಕೆಗೆ ತಿರುಗೇಟು ನೀಡಿದರು.

‘ನಿಖಿಲ್ ಕಣ್ಣೀರಿಗೆ ಎಚ್‌ಡಿಕೆ–ಅನಿತಾ ಕಾರಣ’

‘ನಿಖಿಲ್ ಕಣ್ಣೀರಿಗೆ ಅವರ ತಂದೆ ಕುಮಾರಸ್ವಾಮಿ ಮತ್ತು ತಾಯಿ ಅನಿತಾ ಕುಮಾರಸ್ವಾಮಿ ಅವರೇ ಕಾರಣ. ಮಂಡ್ಯದಲ್ಲಿ ನಿಖಿಲ್ ಸೋಲಿನ ಅನುಕಂಪದಿಂದ ಎಚ್‌ಡಿಕೆ ಗೆದ್ದರು. ರಾಮನಗರದಲ್ಲಿ ಅನಿತಾ ಕೆಲಸ ಮಾಡದಿದ್ದರಿಂದ ನಿಖಿಲ್ ಸೋತರು. ಅವರಿಬ್ಬರ ಪಾಪದ ಕೊಡ ತುಂಬಿ ಮಗ ಸೋತಿರುವಾಗ ನಮ್ಮನ್ನು ದೂಷಿಸುವ ಅಗತ್ಯವೇನಿದೆ’ ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ಪ್ರಶ್ನಿಸಿದರು.

‘ಷಡ್ಯಂತ್ರ ಮಾಡಿತ್ತೇ?’

ಮಂಡ್ಯ: ‘ನಿಖಿಲ್ ಕುಮಾರಸ್ವಾಮಿಯವರ ತಂದೆಯನ್ನು ಸಿ.ಎಂ ಮಾಡಿದ್ದು ಹಾಗೂ ತಾತನನ್ನು ಪ್ರಧಾನಿ ಮಾಡಿದ್ದು ಷಡ್ಯಂತ್ರವೇ’ ಎಂದು ಸಚಿವ ಎನ್.ಚಲುವರಾಯಸ್ವಾಮಿ ಪ್ರಶ್ನಿಸಿದರು.

ನಿಖಿಲ್ ಹೇಳಿಕೆಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, ಸೋಲು ಯಾರನ್ನೂ ಬಿಟ್ಟಿದ್ದಲ್ಲ’ ಎಂದರು.

ಇ.ಸಿ ಭಾಷೆ,ಉತ್ತರದ ಧಾಟಿಗೆ ‘ಕೈ’ ಕಿಡಿ

ಒಂದನೇ ಪುಟದಿಂದ...

‘ಚುನಾವಣೆಯ ಸೂಕ್ಷ್ಮ ಹಂತಗಳಲ್ಲಿ ಹೊಣೆಗಾರಿಕೆಯಿಂದ ವರ್ತಿಸಿ ಸಾರ್ವಜನಿಕ ಅಶಾಂತಿ ಮತ್ತು ಗೊಂದಲ ಸೃಷ್ಟಿಯಾಗುವ ಸಾಧ್ಯತೆಯನ್ನು ತಡೆಯಬೇಕು’ ಎಂದು ಪತ್ರದಲ್ಲಿ ಹೇಳಲಾಗಿತ್ತು.

ಕಾಂಗ್ರೆಸ್‌ನ ಕೆ.ಸಿ.ವೇಣುಗೋಪಾಲ್, ಜೈರಾಮ್ ರಮೇಶ್ ಸೇರಿ ಪಕ್ಷದ ಒಂಬತ್ತು ನಾಯಕರು ಪತ್ರಕ್ಕೆ ಪ್ರತಿಕ್ರಿಯೆ ನೀಡಿದ್ದಾರೆ.

ಮೂರು ಪುಟಗಳ ಈ ಪತ್ರದಲ್ಲಿ, ‘ಸಾಮಾನ್ಯವಾಗಿ ನಾವು ಪ್ರತಿಕ್ರಿಯಿಸದೇ ಸುಮ್ಮನಾಗುತ್ತಿದ್ದೆವು. ಆದರೆ, ಆಯೋಗ ತನ್ನ ಪತ್ರದಲ್ಲಿ ಬಳಸಿರುವ ಪದಗಳು ಹಾಗೂ ಭಾಷೆ, ಉತ್ತರಿಸಿರುವ ಧಾಟಿ ಮತ್ತು ಪಕ್ಷದ ವಿರುದ್ಧ ಮಾಡಿರುವ ಟೀಕೆಗಳಿಂದಾಗಿ ಈಗ ಪ್ರತಿಕ್ರಿಯೆ ನೀಡಲೇಬೇಕಾಗಿದೆ’ ಎಂದಿದ್ದಾರೆ.

‘ಆಯೋಗವು ಈ ಧಾಟಿಯಲ್ಲಿ ಉತ್ತರಿಸಿದರೆ ಇನ್ನುಮುಂದೆ ಹಗುರವಾಗಿ ಪರಿಗಣಿಸಲಾಗದು. ಆಯೋಗದ ಇತ್ತೀಚಿನ ಪ್ರತಿ ಉತ್ತರದಲ್ಲಿಯೂ ವ್ಯಕ್ತಿಗತವಾಗಿ ಪಕ್ಷದ ನಾಯಕರನ್ನು ಅಥವಾ ಇಡಿಯಾಗಿ ಪಕ್ಷವನ್ನೇ ಗುರಿಯಾಗಿಸಿ ಟೀಕಿಸಲಾಗಿದೆ’ ಎಂದು ಪತ್ರದಲ್ಲಿ ಕಾಂಗ್ರೆಸ್ ಆಕ್ಷೇಪಿಸಿದೆ.

ಕಾಂಗ್ರೆಸ್ ಪಕ್ಷ ಇತ್ತೀಚೆಗೆ ನೀಡಿದ್ದ ದೂರಿನಲ್ಲಿ ನೋವು ತೋಡಿಕೊಂಡಿರಲಿಲ್ಲ. ದೂರಿಗೆ ಪೂರಕವಾಗಿ ಕಾನೂನು ಪ್ರಕ್ರಿಯೆ ನಡೆಸುವುದಕ್ಕೆ ಅಗತ್ಯವಾದ ಹಾಗೂ ವಾದವನ್ನು ಸಮರ್ಥಿಸುವ ದಾಖಲೆಗಳನ್ನು ನೀಡಿತ್ತು. ಇಲ್ಲದಿದ್ದರೆ, ಆಯೋಗವು ಈ ಹಿಂದೆ ಮಾಡಿದ್ದಂತೆ ಈ ಬಾರಿಯೂ ಹೆಸರು ಉಲ್ಲೇಖಿಸಿಯೇ ಟೀಕೆ ಮಾಡುತ್ತಿತ್ತು ಎಂದೂ ಹೇಳಿದೆ.

‘ಪ್ರಧಾನಿ ಮತ್ತು ಗೃಹ ಸಚಿವರ ವಿರುದ್ಧ ಪಕ್ಷ ನೂರು ದೂರುಗಳನ್ನು ಕೊಟ್ಟಿರಬಹುದು. ಆದರೆ, ಆಯೋಗ ಒಂದು ದೂರಿನ ಬಗ್ಗೆಯೂ ಸರಿಯಾದ ಕ್ರಮ ವಹಿಸಿಲ್ಲ. ಬದಲಾಗಿ, ಪಕ್ಷದ ಅಧ್ಯಕ್ಷರಾದ ಖರ್ಗೆ ಮತ್ತು ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಅವರಿಗೆ ಕ್ರಿಯೆ ಮತ್ತು ಮಾತುಗಳ ಬಗ್ಗೆ ಎಚ್ಚರವಿರಲಿ ಎಂದು ಎಚ್ಚರಿಕೆ ನೀಡಿದೆ’ ಎಂದು ಈ ನಾಯಕರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಚುನಾವಣಾ ಆಯೋಗ ಎಂದಿಗೂ ಸ್ಪಷ್ಟವಾಗಿ ವಿರೋಧವನ್ನು ದಾಖಲಿಸಿಲ್ಲ. ಬದಲಾಗಿ ದೂರುಗಳನ್ನೇ ಹತ್ತಿಕ್ಕಿದೆ. ಚುನಾವಣಾ ಪ್ರಕ್ರಿಯೆಯಲ್ಲೂ ಪಾರದರ್ಶಕತೆಗೆ ಎಂದಿಗೂ ಒತ್ತು ನೀಡಿಲ್ಲ ಅಥವಾ ವಿ.ವಿ ಪ್ಯಾಟ್ ಪರಿಶೀಲನೆಯನ್ನು ಕ್ರಮಬದ್ಧಗೊಳಿಸಲು ಕೂಡ ಮುಂದಾಗಿಲ್ಲ. ಅದಕ್ಕೂ ಸುಪ್ರೀಂ ಕೋರ್ಟ್ ಆದೇಶಿಸಬೇಕಾಯಿತು’ ಎಂದಿದೆ.

ದೂರಿನಲ್ಲಿ ವಾಸ್ತವಕ್ಕಷ್ಟೆ ಪಕ್ಷ ಒತ್ತು ನೀಡಿದೆ. ಆಯೋಗದ ಉತ್ತರ ಅದನ್ನು ಹತ್ತಿಕ್ಕುವಂತಿದೆ. ಒಂದು ವೇಳೆ ‘ತಟಸ್ಥ ನಿಲುವಿನ ಕುರುಹನ್ನು ಕೂಡ ಅಳಿಸಿಹಾಕುವುದೇ ಆಯೋಗದ ಉದ್ದೇಶವಾಗಿದ್ದಲ್ಲಿ, ಆಯೋಗವು ಅತ್ಯುತ್ತಮವಾಗಿ ಕೆಲಸ ಮಾಡುತ್ತಿದೆ ಎನ್ನಬೇಕಷ್ಟೆ’ ಎಂದು ವಾಗ್ದಾಳಿ ನಡೆಸಿದೆ.

ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 48 ಸ್ಥಾನ ಗೆಲ್ಲುವ ಮೂಲಕ ಅಧಿಕಾರಕ್ಕೇರಿತ್ತು. ಕಾಂಗ್ರೆಸ್ 37, ಐಎನ್‌ಎಲ್‌ಡಿ ಎರಡು ಮತ್ತು ಮೂರು ಕ್ಷೇತ್ರಗಳಲ್ಲಿ ಪಕ್ಷೇತರರು ಜಯಗಳಿಸಿದ್ದರು.

ನ.1: ‘ಹುತಾತ್ಮರ ದಿನ’– ಸಿ.ಎಂ ಸ್ಟಾಲಿನ್ ಹೇಳಿಕೆ

ಚೆನ್ನೈ(ಪಿಟಿಐ): ತಮಿಳು ಭಾಷಿಕರಿದ್ದ ಪ್ರದೇಶಗಳನ್ನು ಒಟ್ಟುಗೂಡಿಸಲು ಹೋರಾಟ ನಡೆಸಿ, ಮಡಿದವರನ್ನು ಸ್ಮರಿಸುವುದಕ್ಕಾಗಿ ಶುಕ್ರವಾರ ನಡೆದ ‘ಗಡಿ ಹುತಾತ್ಮರ ದಿನ’ ಆಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಹುತಾತ್ಮರಿಗೆ ಗೌರವ ಸಲ್ಲಿಸಿದರು.

ಆದರೆ, ಈ ದಿನವನ್ನು ‘ತಮಿಳುನಾಡು ದಿನ’ವನ್ನಾಗಿ ಆಚರಿಸಬೇಕು ಎಂದು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಹಾಗೂ ಟಿವಿಕೆ ಪಕ್ಷದ ಸಂಸ್ಥಾಪಕರೂ ನಟ ವಿಜಯ್ ಪ್ರತಿಪಾದಿಸಿದ್ದಾರೆ.

‘ಭಾಷೆಗಳ ಆಧಾರದಲ್ಲಿ ರಾಜ್ಯಗಳ ಪುನರ್ವಿಂಗಡಣೆ ಮಾಡಿದ ಸಂದರ್ಭದಲ್ಲಿ, ತಮಿಳುನಾಡಿನ ಸದ್ಯದ ಭೌಗೋಳಿಕ ಗಡಿಗಳನ್ನು ನವೆಂಬರ್ 1ರಂದು ಗುರುತಿಸಲಾಗಿತ್ತು. ಹೀಗಾಗಿ ಈ ದಿನವನ್ನು ತಮಿಳುನಾಡು ದಿನವನ್ನಾಗಿ ಆಚರಿಸಬೇಕು’ ಎಂಬುದು ಅಣ್ಣಾಮಲೈ ಹಾಗೂ ವಿಜಯ್ ಅವರ ಸಮರ್ಥನೆಯಾಗಿದೆ.

ಜುಲೈ 18ರಂದು ತಮಿಳುನಾಡು ದಿನ ಆಚರಿಸುವ ಕುರಿತು ಸ್ಟಾಲಿನ್ ನೇತೃತ್ವದ ಸರ್ಕಾರ ಕಳೆದ ವರ್ಷ ಘೋಷಿಸಿತ್ತು.

ಮದ್ರಾಸ್ ಪ್ರೆಸಿಡೆನ್ಸಿಯನ್ನು ತಮಿಳುನಾಡು ಎಂಬುದಾಗಿ ಮರುನಾಮಕರಣ ಮಾಡುವ ಕುರಿತು ಆಗಿನ ಮುಖ್ಯಮಂತ್ರಿ ಸಿ.ಎನ್. ಅಣ್ಣಾದೊರೈ ಅವರು 1967ರ ಜುಲೈ 18ರಂದು ವಿಧಾನಸಭೆಯಲ್ಲಿ ಗೊತ್ತುವಳಿ ಮಂಡಿಸಿದ್ದರು.

‘ತಮಿಳುನಾಡಿನ ಉತ್ತರ ಮತ್ತು ದಕ್ಷಿಣ ಗಡಿಗಳ ರಕ್ಷಣೆಗಾಗಿ ಪ್ರಾಣತ್ಯಾಗ ಮಾಡಿದವರನ್ನು ಸ್ಮರಿಸುವ ದಿನ ನವೆಂಬರ್ 1’ ಎಂದು ಮುಖ್ಯಮಂತ್ರಿ ಸ್ಟಾಲಿನ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ತಮಿಳುನಾಡು ದಿನ ಆಚರಣೆ ಅಂಗವಾಗಿ ನಾನು ಶುಭಾಶಯಗಳನ್ನು ಕೋರುತ್ತೇನೆ’ ಎಂದು ಹೇಳಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅಣ್ಣಾಮಲೈ, ‘ತಮಿಳು ರಾಜ್ಯದ ಭಾಷೆಯಾಗಿ, ತಮಿಳುನಾಡು ಅಸ್ತಿತ್ವಕ್ಕೆ ಬಂದ ದಿನವಿದು’ ಎಂದು ಹೇಳಿದ್ದಾರೆ.

‘ಡಿಎಂಕೆ ನೇತೃತ್ವದ ಸರ್ಕಾರದ ಅಸಮರ್ಪಕ ನಿರ್ವಹಣೆಯಿಂದಾಗಿ ತಮಿಳುನಾಡು ತನ್ನ ವೈಭವವನ್ನು ಕಳೆದುಕೊಂಡಿದೆ’ ಎಂದೂ ಕುಟುಕಿದ್ದಾರೆ.

‘ಭಾಷೆಗಳ ಆಧಾರದಲ್ಲಿ 1956ರ ನವೆಂಬರ್ 1ರಂದು ರಾಜ್ಯಗಳ ಮರುವಿಂಗಡಣೆಯಾಯಿತು.

ಈ ಸಂದರ್ಭದಲ್ಲಿ ತಮಿಳುನಾಡು ಪ್ರತ್ಯೇಕ ರಾಜ್ಯವಾಗಿ ಹೊರಹೊಮ್ಮಿತು’ ಎಂದು ನಟ–ರಾಜಕಾರಣಿ ವಿಜಯ್ ಹೇಳಿದ್ದಾರೆ.

ಶಿಂದೆ ಬಣದ ಶಾಯಿನಾ ಕುರಿತು ಸಂಸದ ಸಾವಂತ್ ಹೇಳಿಕೆ: ಎಫ್‌ಐಆರ್

ವಿವಾದ ಸೃಷ್ಟಿಸಿದ ‘ಮಾಲು’ ಹೇಳಿಕೆ

ಪ್ರಜಾವಾಣಿ ವಾರ್ತೆ

ಶಾಯಿನಾ ಎನ್‌ಸಿ

ಅರವಿಂದ ಸಾವಂತ್

ಮುಂಬೈ: ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಬಣದ ಸಂಸದ ಅರವಿಂದ ಸಾವಂತ್ ಅವರು ಶಿವಸೇನಾದ (ಏಕನಾಥ ಶಿಂದೆ ಬಣ) ಅಭ್ಯರ್ಥಿ, ವಸ್ತ್ರ ವಿನ್ಯಾಸಕಿ ಶಾಯಿನಾ ಎನ್‌ಸಿ ಅವರನ್ನು ‘ಹೊರಗಿನ ಮಾಲು’ ಎಂದು ಕರೆದಿರುವುದು ಮಹಾರಾಷ್ಟ್ರದ ರಾಜಕೀಯದಲ್ಲಿ ವಿವಾದ ಹುಟ್ಟುಹಾಕಿದೆ.

ಈ ಹೇಳಿಕೆಯಿಂದ ಉದ್ಧವ್ ಠಾಕ್ರೆಯವರ ಶಿವಸೇನಾ ಬಣ ತೀವ್ರ ಮುಜುಗರಕ್ಕೀಡಾಗಿದೆ.

ಸಾವಂತ್ ಹೇಳಿಕೆಗೆ ಪ್ರತಿಕ್ರಿಯಿಸಿರುವ ಶಾಯಿನಾ, ‘ನಾನು ಮಾಲು ಅಲ್ಲ, ಮಹಿಳೆ’ ಎಂದು ತಿರುಗೇಟು ನೀಡಿದ್ದಾರೆ.

ಸಾವಂತ್ ಹೇಳಿಕೆ ಖಂಡಿಸಿ ಶಿಂದೆ ಬಣದ ಶಿವಸೇನಾದ ಮಹಿಳಾ ಘಟಕವು ನಾಗಪಾಡಾ ಪೊಲೀಸ್ ಠಾಣೆ ಮುಂದೆ ಶುಕ್ರವಾರ ಪ್ರತಿಭಟನೆ ನಡೆಸಿದ್ದು, ಪೊಲೀಸರಿಗೆ ದೂರನ್ನೂ ನೀಡಿದೆ. ಇದರ ಆಧಾರದಲ್ಲಿ ಭಾರತ ನ್ಯಾಯ ಸಂಹಿತೆಯ ಸೆಕ್ಷನ್ 79 ಮತ್ತು 356 (2)ರ ಅಡಿಯಲ್ಲಿ ಪೊಲೀಸರು ಸಾವಂತ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಶಾಯಿನಾ ಯಾರು?: ಶಾಯಿನಾ ಎನ್‌ಸಿ ಅವರು ಜೈಂಟ್ಸ್ ಇಂಟರ್‌ನ್ಯಾಷನಲ್ ಸ್ಕೂಲ್ ಸಂಸ್ಥಾಪಕ ಮತ್ತು ಮುಂಬೈನ ಮಾಜಿ ‘ಶೆರಿಫ್’ (ಶೆರಿಫ್– ಮುಂಬೈ ನಗರದ ಗಣ್ಯ ನಾಗರಿಕನಾಗಿದ್ದು, ಒಂದು ವರ್ಷದ ಅವಧಿಗೆ ರಾಜಕೀಯೇತರ ಅಧಿಕಾರವನ್ನು ಹೊಂದಿರುತ್ತಾರೆ) ನಾನಾ ಚುಡಾಸಮಾ ಅವರ ಮಗಳು. ಮುಂಬೈ ನಗರದ ಮಾಜಿ ಪೊಲೀಸ್ ಕಮಿಷನರ್ ಮನಸಿಂಹ ಚುಡಾಸಮಾ ಅವರ ಮೊಮ್ಮಗಳು. ಶಾಯಿನಾ ಅವರು ಉದ್ಯಮಿ ಮನೀಷ್ ಮುನೋತ್ ಅವರನ್ನು ವಿವಾಹವಾಗಿದ್ದಾರೆ.

ಮುಂಬೈ ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಮೂರು ಬಾರಿ ಆಯ್ಕೆಯಾಗಿರುವ ಮತ್ತು ಶಿವಸೇನಾ (ಉದ್ಧವ್ ಠಾಕ್ರೆ ಬಣ) ವಕ್ತಾರರೂ ಆಗಿರುವ ಸಾವಂತ್ ನೀಡಿರುವ ಈ ‘ಸೆಕ್ಸಿಸ್ಟ್’ ಹೇಳಿಕೆಯು ರಾಜ್ಯ ರಾಜಕೀಯದಲ್ಲಿ ಪ್ರಮುಖ ವಿಚಾರವಾಗಿ ಮಾರ್ಪಟ್ಟಿದೆ.

ಬಿಜೆಪಿಯಲ್ಲಿದ್ದ ಶಾಯಿನಾ ಅವರು ವರ್ಲಿ ಕ್ಷೇತ್ರದಲ್ಲಿ ಹಾಲಿ ಶಾಸಕ ಆದಿತ್ಯ ಠಾಕ್ರೆ ವಿರುದ್ಧ ಸ್ಪರ್ಧಿಸಲು ಬಯಸಿದ್ದರು. ಆದರೆ, ನಂತರ ಏಕನಾಥ ಶಿಂದೆ ನೇತೃತ್ವದ ಶಿವಸೇನಾವನ್ನು ಸೇರಿದ್ದರು. ಪಕ್ಷವು ಅವರನ್ನು ಮುಂಬಾ ದೇವಿ ಕ್ಷೇತ್ರದಿಂದ ಕಣಕ್ಕಿಳಿಸಿದೆ. ವರ್ಲಿ ಮತ್ತು ಮುಂಬಾ ದೇವಿ ಎರಡೂ ಕ್ಷೇತ್ರಗಳು ಮುಂಬೈ ದಕ್ಷಿಣ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಬರುತ್ತವೆ.

ಮುಂಬಾ ದೇವಿ ಕ್ಷೇತ್ರದಲ್ಲಿ ಶಾಯಿನಾ ಅವರು ಮೂರು ಬಾರಿಯ ಕಾಂಗ್ರೆಸ್ ಶಾಸಕ ಅಮಿನ್ ಪಟೇಲ್ ಅವರನ್ನು ಎದುರಿಸುತ್ತಿದ್ದಾರೆ. ಚುನಾವಣಾ ಆಯೋಗವು ಸಾವಂತ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ವಿಧಾನ ಪರಿಷತ್ತಿನ ಉಪ ಸಭಾಪತಿ ಡಾ.ನೀಲಂ ಗೋರೆ ಒತ್ತಾಯಿಸಿದ್ದಾರೆ. ಮಹಾಯುತಿ ಮೈತ್ರಿಕೂಟ ಕೂಡ ಸಾವಂತ್ ವಿರುದ್ಧ ವಾಗ್ದಾಳಿ ನಡೆಸಿದೆ.

ಸಾವಂತ್ ಹೇಳಿದ್ದೇನು?

‘ಆಕೆಯ ಸ್ಥಿತಿಯನ್ನು ನೋಡಿ. ಆಕೆ ತನ್ನ ಜೀವನ ಪೂರ್ತಿ ಬಿಜೆಪಿಯಲ್ಲಿದ್ದರು. ಈಗ ಇನ್ನೊಂದು ಪಕ್ಷಕ್ಕೆ ಹೋಗಿದ್ದಾರೆ. ಹೊರಗಿನಿಂದ ಬಂದ ‘ಮಾಲು’ ಇಲ್ಲಿ ಕೆಲಸ ಮಾಡದು. ಮೂಲ ‘ಮಾಲು’ ಮಾತ್ರ ಕೆಲಸ ಮಾಡುತ್ತದೆ... ನಮ್ಮಲ್ಲಿ ಅಂತಹ ಮಾಲು ಇದೆ’ ಎಂದು ಸಾವಂತ್ ಹೇಳಿದ್ದರು. ಈ ಸಂದರ್ಭದಲ್ಲಿ ಜೊತೆಗಿದ್ದ ಅಭ್ಯರ್ಥಿ ಪಟೇಲ್ ನಗುತ್ತಿದ್ದರು.

ಸಾವಂತ್ ಹೇಳಿಕೆಗೆ ತಿರುಗೇಟು ನೀಡಿರುವ ಶಾಯಿನಾ, ‘2014 ಮತ್ತು 2019ರಲ್ಲಿ ನಾವು ಇದೇ ಅರವಿಂದ ಸಾವಂತ್ ಪರವಾಗಿ ಪ್ರಚಾರ ಮಾಡಿದ್ದೆವು. ಒಬ್ಬ ಮಹಿಳೆಯನ್ನು ‘ಮಾಲು’ ಎಂದು ಕರೆಯುವ ಅವರ ಯೋಚನಾ ಮಟ್ಟ ಯಾವ ರೀತಿ ಇದೆ ಎಂಬುದನ್ನು ನೋಡಿ. ಈ ಚುನಾವಣೆಯಲ್ಲಿ ಇಲ್ಲಿನ ಅದೇ ಮತದಾರರು ಅವರನ್ನು ಶೋಚನೀಯವಾಗಿ ಸೋಲಿಸಲಿದ್ದಾರೆ’ ಎಂದು ಹೇಳಿದ್ದಾರೆ.

ಹೇಳಿಕೆ ವಿವಾದ ಸ್ವರೂಪ ಪಡೆಯುತ್ತಿದ್ದಂತೆಯೇ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಸಾವಂತ್, ‘ಶಾಯಿನಾ ಅವರು ಈ ವಿಚಾರವನ್ನು ಇಟ್ಟುಕೊಂಡು ಕಥೆ ಕಟ್ಟಲು ಬಯಸುತ್ತಿದ್ದಾರೆ. ನಾನು ಏನು ಹೇಳಿದ್ದೇನೋ, ಅದನ್ನು ಪೂರ್ಣವಾಗಿ ತೋರಿಸಿ. ಅವರು ಆ ವಿಧಾನಸಭಾ ಕ್ಷೇತ್ರದಲ್ಲಿ ನೆಲಸಿಲ್ಲ. ನನ್ನ 55 ವರ್ಷಗಳ ರಾಜಕೀಯ ಜೀವನದಲ್ಲಿ ನಾನು ಮಹಿಳೆಯ ಘನತೆಗೆ ಯಾವತ್ತೂ ಕುಂದು ತಂದಿಲ್ಲ. ಯಾವಾಗಲೂ ಅವರನ್ನು ಗೌರವಿಸಿದ್ದೇನೆ’ ಎಂದು ಹೇಳಿದ್ದಾರೆ.

ಡೆಮ್‌ಚೋಕ್ ಗಡಿಯಲ್ಲಿ ಗಸ್ತು ಶುರು

ದೀಪಾವಳಿ ಅಂಗವಾಗಿ ಕೇಂದ್ರ ಸಚಿವ ಕಿರಣ್ ರಿಜಿಜು ಅವರು ಅರುಣಾಚಲ ಪ್ರದೇಶದ ತವಾಂಗ್‌ಗೆ ಹೊಂದಿಕೊಂಡಿರುವ ಗಡಿಯಲ್ಲಿ ಚೀನಾ ಯೋಧರೊಂದಿಗೆ ಗುರುವಾರ ಮಾತುಕತೆ ನಡೆಸಿದರು ಪಿಟಿಐ ಚಿತ್ರ

ಒಂದನೇ ಪುಟದಿಂದ...

ಉಭಯ ದೇಶಗಳ ಸೇನೆಗಳ ಸಮನ್ವಯದೊಂದಿಗೆ ಗಸ್ತು ನಡೆಯಲಿದೆ. ಅಂದರೆ, ತನ್ನ ಯೋಧರು ಎಲ್ಲೆಲ್ಲಿ ಗಸ್ತು ತಿರುಗುತ್ತಿದ್ದಾರೆ ಎಂಬ ಬಗ್ಗೆ ಭಾರತೀಯ ಸೇನೆ ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿಯ (ಪಿಎಲ್‌ಎ) ಕಮಾಂಡರ್‌ಗೆ ಮಾಹಿತಿ ಒದಗಿಸಬೇಕು. ಅದೇ ರೀತಿ, ತನ್ನ ಸೈನಿಕ ಚಲನವಲನ ಕುರಿತು ಪಿಎಲ್‌ಎ, ಭಾರತೀಯ ಸೇನೆಗೆ ತಿಳಿಸಬೇಕು.

ಮೊದಲ ಹಂತದಲ್ಲಿ ಕಡಿಮೆ ಅಂತರದ ಗಡಿ ಠಾಣೆಗಳಲ್ಲಿ ಗಸ್ತು ಆರಂಭಿಸಬೇಕು. ನಂತರ, 2020ರಲ್ಲಿ ಸಂಘರ್ಷ ಆರಂಭಕ್ಕೂ ಮುನ್ನ ಯೋಧರು ನಿಯೋಜನೆಗೊಂಡಿದ್ದ ಸ್ಥಳಗಳಲ್ಲಿ ಪೂರ್ಣ ಪ್ರಮಾಣದ ಗಸ್ತು ಕೈಗೊಳ್ಳುವುದು ಸೇನೆಯ ಯೋಜನೆಯಾಗಿತ್ತು. ಆದರೆ, ಡೆಮ್‌ಚೋಕ್‌ನಲ್ಲಿ ಗಸ್ತು ಆರಂಭಗೊಂಡಿದ್ದರೂ ಈ ಕುರಿತು ಸೇನೆಯ ಅಧಿಕಾರಿಗಳು ಹೆಚ್ಚಿನ ವಿವರಗಳನ್ನು ನೀಡಿಲ್ಲ.

ಉಭಯ ದೇಶಗಳ ನಡುವೆ ಸಂಘರ್ಷ ಆರಂಭವಾದ ನಂತರ, ಡೆಮ್‌ಚೋಕ್ ವಲಯದಲ್ಲಿ ಎರಡು ಗಸ್ತು ಸ್ಥಳಗಳಿಗೆ ಸಂಪರ್ಕವನ್ನು ಪಿಎಲ್‌ಎ ಸ್ಥಗಿತಗೊಳಿಸಿತ್ತು. ಇನ್ನೊಂದೆಡೆ, ಡೆಪ್ಸಾಂಗ್ ಬಳಿ ಪಿಪಿ10, 11, 11ಎ, 12 ಹಾಗೂ 13ನೇ ಗಸ್ತು ಸ್ಥಳಗಳಿಗೆ ಭಾರತೀಯ ಯೋಧರು ಹೋಗಿರಲಿಲ್ಲ. ಈ ಗಸ್ತು ಸ್ಥಳಗಳು ವಾಸ್ತವ ನಿಯಂತ್ರಣ ರೇಖೆಗೆ (ಎಲ್‌ಎಸಿ) ಸಮೀಪದಲ್ಲಿವೆ.

ವಿಶೇಷ ಪಡೆಗಳ ರವಾನೆ: ಲಡಾಖ್ ಗಡಿಯಿಂದ ಸೇನೆಯನ್ನು ವಾಪಸ್ ಕರೆಸಿಕೊಳ್ಳುವ ಪ್ರಕ್ರಿಯೆ ಮಹತ್ವದ ಘಟ್ಟ ತಲುಪಿಸುವ ಹೊತ್ತಿನಲ್ಲಿಯೇ, ಯುದ್ಧ ಸಾಮರ್ಥ್ಯ ವೃದ್ಧಿಗಾಗಿ ಭಾರತ ತನ್ನ ವಿಶೇಷ ಪಡೆಗಳನ್ನು ಅಮೆರಿಕ ಹಾಗೂ ಇಂಡೊನೇಷ್ಯಾಕ್ಕೆ ಕಳುಹಿಸಿದೆ.

ಇಂಡೊನೇಷ್ಯಾ ರಾಜಧಾನಿ ಜಕಾರ್ತ ಬಳಿಯ ಸಿಜಾಂಟುಂಗ್‌ಗೆ ಒಂದು ಅರೆ ಸೇನಾ ಪಡೆ ತುಕಡಿಯನ್ನು ಕಳುಹಿಸಲಾಗಿದೆ. ಈ ತುಕಡಿಯು, ‘ಗರುಡ ಶಕ್ತಿ ತಾಲೀಮು’ ಅಡಿ ಇಂಡೊನೇಷ್ಯಾ ಸೇನೆಯೊಂದಿಗೆ ನ. 1ರಿಂದ 12ರ ವರೆಗೆ ಸಮರಾಭ್ಯಾಸ ನಡೆಸಲಿದೆ.

ಅಮೆರಿಕಕ್ಕೆ ಕಳುಹಿಸಲಾದ ಮತ್ತೊಂದು ತುಕಡಿಯು, ‘ವಜ್ರ ಪ್ರಹಾರ ತಾಲೀಮು’ ಅಡಿ, ಐಡಹೊನಲ್ಲಿರುವ ಆರ್ಚರ್ಡ್ ಯುದ್ಧ ತರಬೇತಿ ಕೇಂದ್ರದಲ್ಲಿ ನ. 2ರಿಂದ 22ರವರೆಗೆ ತಾಲೀಮು ನಡೆಸಲಿದೆ.

‘ಚೀನಾ ಯೋಧರೊಂದಿಗೆ ಮಾತುಕತೆ’

ಒಂದನೇ ಪುಟದಿಂದ...

‘15 ಸಾವಿರ ಅಡಿಗಳಷ್ಟು ಎತ್ತರದ ಪ್ರದೇಶದಲ್ಲಿ ನಿಯೋಜನೆಗೊಂಡಿರುವ ನೀವು, ಹೇಗೆ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದೀರಿ’ ಎಂಬುದಾಗಿ ರಿಜಿಜು ಅವರು ಚೀನಾ ಯೋಧರನ್ನು ಪ್ರಶ್ನಿಸುತ್ತಿರುವುದು ಹಾಗೂ ದುಭಾಷಿಯೊಬ್ಬರ ನೆರವಿನಿಂದ ಅವರ ಉತ್ತರ ಆಲಿಸುತ್ತಿರುವುದು ವಿಡಿಯೊದಲ್ಲಿದೆ.

‘ಇಂತಹ ಎತ್ತರದ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಣೆ ನಮಗೆ ಸಮಸ್ಯೆಯೇ ನಲ್ಲ’ ಎಂಬುದಾಗಿ ಚೀನಾ ಸೈನಿಕರು ಉತ್ತರಿಸಿದ್ದಾರೆ.

ಗಡಿಯಲ್ಲಿ ಕೇಂದ್ರ ಸರ್ಕಾರ ಕೈಗೊಂಡಿರುವ ಮೂಲಸೌಕರ್ಯಗಳ ಅಭಿವೃದ್ಧಿ ಬಗ್ಗೆಯೂ ರಿಜಿಜು ಪ್ರಸ್ತಾಪಿಸಿದ್ದು, ಚೀನಾ ಸೈನಿಕರೊಂದಿಗೆ ಮಾತುಕತೆ ನಡೆಸಿದ ಬಳಿಕ ಹಾಗೂ ಗಡಿಯಲ್ಲಿನ ಮೂಲಸೌಕರ್ಯಗಳನ್ನು ವೀಕ್ಷಿಸಿದಾಗ ಗಡಿಗಳ ಅಭಿವೃದ್ಧಿ ವಿಷಯದಲ್ಲಿ ಭಾರತ ಕೈಗೊಂಡ ಕ್ರಮಗಳ ಬಗ್ಗೆ ಪ್ರತಿಯೊಬ್ಬರಿಗೂ ಹೆಮ್ಮೆ ಮೂಡುತ್ತದೆ’ ಎಂದು ಹೇಳಿದ್ದಾರೆ.

700 ಕೇಬಲ್‌ಗಳ ಯಶಸ್ವಿ ಬದಲಾವಣೆ: ಮಾರ್ಚ್ ಅಂತ್ಯಕ್ಕೆ 1,400 ಕೇಬಲ್ ಅಳವಡಿಕೆ ಪೂರ್ಣ

ಮೇಲ್ಸೇತುವೆ ಮತ್ತಷ್ಟು ‘ಸುಭದ್ರ’ಗೊಳಿಸಲು ಪ್ರಯತ್ನ

• ಆದಿತ್ಯ ಕೆ.ಎ.

ಪೀಣ್ಯ ಮೇಲ್ಸೇತುವೆಯಲ್ಲಿ ಕೇಬಲ್ ಅಳವಡಿಕೆ ಕಾಮಗಾರಿ

ಬೆಂಗಳೂರು: ತುಮಕೂರು ರಸ್ತೆಯ ಪೀಣ್ಯ ಮೇಲ್ಸೇತುವೆಯನ್ನು ಮತ್ತಷ್ಟು ಸುಭದ್ರಗೊಳಿಸುವ ಕಾಮಗಾರಿ ಬಿರುಸಿನಿಂದ ಸಾಗುತ್ತಿದ್ದು, 1,400 ಕೇಬಲ್‌ಗಳ ಪೈಕಿ 700 ಕೇಬಲ್‌ಗಳನ್ನು ಯಶಸ್ವಿಯಾಗಿ ಬದಲಾಯಿಸಲಾಗಿದೆ. ಸದ್ಯ ದಾಸರಹಳ್ಳಿಯ ಮೆಟ್ರೊ ನಿಲ್ದಾಣದ ಬಳಿ ಕಾಮಗಾರಿ ಪ್ರಗತಿಯಲ್ಲಿದೆ.

ಮೇಲ್ಸೇತುವೆಯ 8ನೇ ಮೈಲಿನ ಜಂಕ್ಷನ್ ಸಮೀಪದ 102 ಹಾಗೂ 103ನೇ ಪಿಲ್ಲರ್‌ನಲ್ಲಿ ಕೇಬಲ್‌ಗಳು ಬಾಗಿದ್ದರಿಂದ 2021ರ ಡಿಸೆಂಬರ್‌ನಿಂದ ವಾಹನ ಸಂಚಾರಕ್ಕೆ ನಿರ್ಬಂಧ ಹೇರಲಾಗಿತ್ತು. ಅದಾದ ಮೇಲೆ ತಜ್ಞರು ಪರಿಶೀಲಿಸಿ, ಲಘು ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಿ, ಸರಕು ಸಾಗಣೆ ಹಾಗೂ ಬಸ್‌ಗಳ ಸಂಚಾರಕ್ಕೆ ನಿರ್ಬಂಧ ಹೇರಿದ್ದರು.

‘ಆ ಬಳಿಕ 120 ಪಿಲ್ಲರ್‌ಗಳಲ್ಲಿ 240 ಕೇಬಲ್ ಬದಲಾವಣೆ ಮಾಡಿ ಕಳೆದ ಜುಲೈ 29ರಿಂದ ಎಲ್ಲ ಮಾದರಿಯ ವಾಹನ ಸಂಚಾರಕ್ಕೆ ಮೇಲ್ಸೇತುವೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಇದೀಗ ತುಕ್ಕು ಹಿಡಿದಿರುವ 1,400 ಕೇಬಲ್‌ಗಳನ್ನೂ ಬದಲಾವಣೆ ಮಾಡುವ ಕಾಮಗಾರಿ ನಡೆಯುತ್ತಿದ್ದು, 2025ರ ಮಾರ್ಚ್ ಅಂತ್ಯಕ್ಕೆ ದುರಸ್ತಿ ಕೆಲಸ ಪೂರ್ಣಗೊಳ್ಳಲಿದೆ’ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಬೆಂಗಳೂರು ಯೋಜನಾ ಅನುಷ್ಠಾನ ಘಟಕದ ಯೋಜನಾ ನಿರ್ದೇಶಕ ಕೆ.ಬಿ. ಜಯಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ನಾಲ್ಕು ತಂಡಗಳಿಂದ ಕೆಲಸ: ಕಾಮಗಾರಿಯನ್ನು ಬೇಗ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ. ನಾಲ್ಕು ಪ್ರತ್ಯೇಕ ತಂಡಗಳು ಕೆಲಸ ಮಾಡುತ್ತಿವೆ ಎಂದೂ ಮಾಹಿತಿ ನೀಡಿದರು.

ಪೀಣ್ಯ–ಕೆನ್ನಮೆಟಲ್ (ವಿಡಿಯಾ) ನಡುವೆ ಈ ಮೇಲ್ಸೇತುವೆ ಹಾದು ಹೋಗಿದ್ದು, ಒಟ್ಟು 120 ಪಿಲ್ಲರ್‌ಗಳಿವೆ. ಏಷ್ಯಾದಲ್ಲೇ ಅತಿ ದೊಡ್ಡದಾದ ಪೀಣ್ಯ ಕೈಗಾರಿಕಾ ಪ್ರದೇಶ ಮೇಲ್ಸೇತುವೆ ಪಕ್ಕದಲ್ಲೇ ಇದೆ. ಕೈಗಾರಿಕಾ ಪ್ರದೇಶಕ್ಕೆ ಹೊರ ಜಿಲ್ಲೆಗಳಿಂದ ಪ್ರತಿನಿತ್ಯ ಸಾವಿರಾರು ಟ್ರಕ್‌ಗಳು ಬರುತ್ತವೆ. ರಾಜ್ಯದ 21 ಜಿಲ್ಲೆಗಳು ಹಾಗೂ ಹೊರ ರಾಜ್ಯಗಳಿಗೂ ಇದೇ ಮಾರ್ಗ ಸಂಪರ್ಕ ಕೊಂಡಿ. ಹೀಗಾಗಿ ಮೇಲ್ಸೇತುವೆ ಭದ್ರಪಡಿಸುವ ಕೆಲಸ ಭರದಿಂದ ಸಾಗುತ್ತಿದೆ.

‘ಹಿಂದೆ ಅಳವಡಿಸಿದ್ದ ಕೇಬಲ್‌ಗಳಿಗಿಂತಲೂ ದೀರ್ಘಕಾಲ ಬಾಳಿಕೆ ಬರುವ ಹಾಗೂ ಗುಣಮಟ್ಟದ ಕೇಬಲ್‌ಗಳನ್ನು ಅಳವಡಿಸಲಾಗುತ್ತಿದೆ. ಈಗ ಅಳವಡಿಸುತ್ತಿರುವ ಕೇಬಲ್‌ಗಳಿಗೆ ಮೂರು ಪದರಗಳಿವೆ. ಈ ರೀತಿಯ ಕೇಬಲ್‌ಗಳನ್ನೂ ದೇಶದ ಬೇರೆ ಯಾವುದೇ ಮೇಲ್ಸೇತುವೆಯಲ್ಲೂ ಅಳವಡಿಸಿಲ್ಲ’ ಎಂದು ಎಂಜಿನಿಯರ್ ಒಬ್ಬರು ತಿಳಿಸಿದರು.

ಬೆಳಕಿನ ವ್ಯವಸ್ಥೆ: ಮೇಲ್ಸೇತುವೆಯ ಸಿಮೆಂಟ್ ಬ್ಲಾಕ್‌ಗಳ ಮಧ್ಯೆ ಖಾಲಿ ಜಾಗವಿದೆ. ಹಿಂದೆ ಬೆಳಕಿನ ವ್ಯವಸ್ಥೆ ಇರಲಿಲ್ಲ. ಕಾರ್ಮಿಕರು ಟಾರ್ಚ್ ಹಿಡಿದು ದುರಸ್ತಿ ಕೆಲಸ ಮಾಡಬೇಕಿತ್ತು. ಈಗ ವಿದ್ಯುತ್ ಸಂಪರ್ಕದ ವ್ಯವಸ್ಥೆ ಸಹ ಮಾಡಲಾಗುತ್ತಿದೆ. ಬೇಗ ಕಾಮಗಾರಿ ಪೂರ್ಣಗೊಳಿಸಲು ಅನುಕೂಲ ಆಗಲಿದೆ ಎಂದು ಎಂಜಿನಿಯರ್‌ಗಳು ಹೇಳುತ್ತಾರೆ.

ಹೊಸದಾಗಿ ಅಳವಡಿಕೆ ಮಾಡಿರುವ ಕೇಬಲ್‌ಗಳಿಗೆ ಸಿಮೆಂಟ್ ತುಂಬುವ ಕೆಲಸ ಪ್ರತಿ ಶುಕ್ರವಾರ ನಡೆಯಲಿದೆ. ಪ್ರತಿ ಶುಕ್ರವಾರ ಬೆಳಿಗ್ಗೆ 6ರಿಂದ ಶನಿವಾರ ಬೆಳಿಗ್ಗೆ 6ರ ತನಕ ಮೇಲ್ಸೇತುವೆಯಲ್ಲಿ ಭಾರಿ ವಾಹನ ಸಂಚಾರಕ್ಕೆ ನಿರ್ಬಂಧ ಈಗಲೂ ಮುಂದುವರೆಯಲಿದೆ. ಕಾಮಗಾರಿಯನ್ನು ಇನ್ನಷ್ಟು ತ್ವರಿತಗೊಳಿಸಲು ಉದ್ದೇಶಿಸಲಾಗಿದೆ ಎಂದೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಹೊರಭಾಗದಿಂದ ಪೈಪ್ ಅಳವಡಿಕೆ

ಮಳೆಯ ಸಂದರ್ಭದಲ್ಲಿ ಜಾಲಹಳ್ಳಿ, ಎಂಟನೇ ಮೈಲು ಹಾಗೂ ನಾಗಸಂದ್ರದಲ್ಲಿ ಮೇಲ್ಸೇತುವೆಯಿಂದ ನೀರು ಜಲಪಾತದಂತೆ ಧುಮ್ಮಿಕ್ಕುತ್ತಿತ್ತು. ಕೆಳ ಭಾಗದಲ್ಲಿ ಸಂಚರಿಸುತ್ತಿದ್ದ ವಾಹನ ಸವಾರರಿಗೆ ತೊಂದರೆ ಉಂಟಾಗುತ್ತಿತ್ತು. ಈ ತೊಂದರೆ ನಿವಾರಿಸಲು ಒಳ ಭಾಗದಲ್ಲಿದ್ದ ಪೈಪ್‌ಗಳನ್ನು ತೆರವುಗೊಳಿಸಿ, ಹೊರಭಾಗದಿಂದ ಅಳವಡಿಸಲಾಗುತ್ತಿದೆ. ಮೇಲೆ ಬಿದ್ದ ನೀರು ಸರಾಗವಾಗಿ ಹರಿದು ಹೋಗುವ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಎನ್‌ಎಚ್‌ಎಐ ಯೋಜನಾ ನಿರ್ದೇಶಕ ಕೆ.ಬಿ. ಜಯಕುಮಾರ್ ತಿಳಿಸಿದರು.

ತುಸು ತಗ್ಗಿದ ದಟ್ಟಣೆ

ಸದ್ಯ ಎಲ್ಲ ಮಾದರಿಯ ವಾಹನಗಳು ಮೇಲ್ಸೇತುವೆಯಲ್ಲಿ ಸಂಚರಿಸುತ್ತಿವೆ. ನಾಗಸಂದ್ರ, ಎಂಟನೇ ಮೈಲಿ, ದಾಸರಹಳ್ಳಿ, ಜಾಲಹಳ್ಳಿ, ಪೀಣ್ಯ ಜಂಕ್ಷನ್‌ಗಳಲ್ಲಿ ವಾಹನ ದಟ್ಟಣೆ ತುಸು ತಗ್ಗಿದೆ. ಆದರೆ, ಟೋಲ್ ಬಳಿ ಸರಕು ಸಾಗಣೆ ವಾಹನಗಳನ್ನು ರಸ್ತೆ ಬದಿಯಲ್ಲೇ ಹಗಲು ವೇಳೆ ನಿಲುಗಡೆ ಮಾಡುತ್ತಿರುವ ಪರಿಣಾಮ ಸುತ್ತಮುತ್ತ ಸಮಸ್ಯೆ ಆಗುತ್ತಿದೆ ಎಂದು ಚಾಲಕರು ಹೇಳುತ್ತಾರೆ.

ಹುಬ್ಬಳ್ಳಿ–ಯಶವಂತಪುರ ನಡುವೆ ವಿಶೇಷ ರೈಲು

ಬೆಂಗಳೂರು: ದೀಪಾವಳಿಯ ನಂತರದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ಕಡಿಮೆಗೊಳಿಸಲು ಹುಬ್ಬಳ್ಳಿ–ಯಶವಂತಪುರ ನಡುವೆ ಎರಡೂ ಕಡೆಯಿಂದ ತಲಾ ಒಂದು ಟ್ರಿಪ್ ವಿಶೇಷ ರೈಲು ಓಡಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ವಿಶೇಷ ಎಕ್ಸ್‌ ಪ್ರೆಸ್ ರೈಲು ನ. 3ರಂದು ಎಸ್‌ಎಸ್‌ಎಸ್ ಹುಬ್ಬಳ್ಳಿ ಯಿಂದ ರಾತ್ರಿ 8ಕ್ಕೆ ಹೊರಡಲಿದೆ. ಮರುದಿನ ಮುಂಜಾನೆ 3.30ಕ್ಕೆ ಯಶವಂತಪುರ ತಲುಪಲಿದೆ.

ನ.4ರಂದು ಯಶವಂತಪುರದಿಂದ ಬೆಳಿಗ್ಗೆ 4.45 ಗಂಟೆಗೆ ಹೊರಟು, ಅದೇ ದಿನ ಮಧ್ಯಾಹ್ನ 12.50ಕ್ಕೆ ಎಸ್‌ಎಸ್‌ಎಸ್ ಹುಬ್ಬಳ್ಳಿ ತಲುಪಲಿದೆ. 21 ಬೋಗಿಗಳಿರುವ ಈ ರೈಲು ಎರಡೂ ಕಡೆಗಳಿಂದ ಚಲಿಸುವಾಗ ಹಾವೇರಿ, ರಾಣೆಬೆನ್ನೂರು, ಹರಿಹರ, ದಾವಣಗೆರೆ, ಚಿಕ್ಕ ಜಾಜೂರು, ಕಡೂರು, ಅರಸೀಕೆರೆ, ತಿಪಟೂರು ಮತ್ತು ತುಮಕೂರು ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಶುಕ್ರವಾರ ವಿಧಾನಸೌಧದ ಮುಂಭಾಗ ಆಯೋಜಿಸಿದ್ದ ಸಮಾರಂಭದಲ್ಲಿ ರಾಜ್ಯೋತ್ಸವ ಹಾಗೂ ಸುವರ್ಣ ಮಹೋತ್ಸವ ಪ್ರಶಸ್ತಿ ಪುರಸ್ಕೃತರೊಂದಿಗೆ ಸಚಿವ ಶಿವರಾಜ ಎಸ್‌ ತಂಗಡಗಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಜಿ. ಪರಮೇಶ್ವರ ಮತ್ತು ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ ಹಾಗೂ ಇತರರು ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಮೈಸೂರಿನಲ್ಲಿ ಕನ್ನಡ ಸಂಗ್ರಹಾಲಯ: ಮುಖ್ಯಮಂತ್ರಿ ಸಿದ್ದರಾಮಯ್ಯ

‘ಪೊಟ್ಟಣಗಳ ಮೇಲೆ ಕನ್ನಡ ಕಡ್ಡಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಉದ್ಯಮಗಳು ತಯಾರಿಸುವ ಉತ್ಪನ್ನಗಳ ಮೇಲೆ ಇಂಗ್ಲಿಷ್‌ನಲ್ಲಿ ಮಾತ್ರ ಹೆಸರು ಮುದ್ರಿತವಾಗಿರುತ್ತದೆ. ಇನ್ನು ಮುಂದೆ ಕನ್ನಡದಲ್ಲೂ ಹೆಸರು ಮುದ್ರಿಸುವುದನ್ನು ಕಡ್ಡಾಯಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಮೇಲೆ ಶುಕ್ರವಾರ ನಡೆದ ಅದ್ದೂರಿ ಸಮಾರಂಭದಲ್ಲಿ ರಾಜ್ಯೋತ್ಸವ ಹಾಗೂ ಸುವರ್ಣ ಮಹೋತ್ಸವ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಮೈಸೂರು ಜಿಲ್ಲಾಧಿಕಾರಿ ಕಚೇರಿಯಿದ್ದ ಕಟ್ಟಡವನ್ನು ನಾವು ಅಠಾರ ಎಂದು ಕರೆಯುತ್ತೇವೆ. ಅ ಕಟ್ಟಡದಲ್ಲಿ ‘ಕನ್ನಡ ಸಂಗ್ರಹಾಲಯ’ವನ್ನು ಸರ್ಕಾರ ಸ್ಥಾಪಿಸಲಿದೆ’ ಎಂದು ಅವರು ಹೇಳಿದರು.

‘ರಾಜ್ಯದಲ್ಲಿ ಕನ್ನಡದ ವಾತಾವರಣ ನಿರ್ಮಾಣವಾಗಬೇಕು. ಬೇರೆ ಯಾವ ರಾಜ್ಯದಿಂದ ಜನರ ಬಂದರೂ ಅವರಿಗೆ ಕನ್ನಡ ಕಲಿಸಬೇಕು. ಅವರು ಕನ್ನಡದಲ್ಲೇ ಮಾತನಾಡಿ ವ್ಯವಹಾರ ಮಾಡುವಂತೆ ಮಾಡಬೇಕು. ಸರ್ಕಾರ ಇಂತಹ ಕೆಲಸ ಮಾಡಲಿದ್ದು, ನಾಗರಿಕರೂ ಎಲ್ಲರಿಗೂ ಕನ್ನಡ ಕಲಿಸುತ್ತೇವೆ ಎಂದು ಪ್ರಮಾಣ ಮಾಡಬೇಕು’ ಎಂದು ಹೇಳಿದರು.

‘ಕರ್ನಾಟಕ ಎಂದು ಮರುನಾಮಕರಣವಾಗಿ 51 ವರ್ಷ ತುಂಬಿದೆ. 50 ವರ್ಷ ಆದಾಗಲೇ ಸಮಾರಂಭ ಮಾಡಬೇಕಿತ್ತು. ಬಿಜೆಪಿ ಸರ್ಕಾರ ಮಾಡಲಿಲ್ಲ. ಆದ್ದರಿಂದ, ನಾವು ಬಜೆಟ್‌ನಲ್ಲಿ ಘೋಷಿಸಿ ವರ್ಷ ಪೂರ್ತಿ ಸುವರ್ಣ ಮಹೋತ್ಸವ ಆಚರಿಸಿದ್ದೇವೆ’ ಎಂದರು.

‘ರಾಜ್ಯೋತ್ಸವ, ಸುವರ್ಣ ಪ್ರಶಸ್ತಿ ಸಂದಿರುವುದು ನಿಮ್ಮ ಸಾಧನೆಗಳಿಂದ. ನಾಡು, ಜಲ, ನೆಲ, ಸಂಸ್ಕೃತಿ ನಾಡಿಗೆ ನೀವು ನೀಡಿರುವ ಕೊಡುಗೆಗಳನ್ನು ಗುರುತಿಸಿ ನೀಡಲಾಗಿದೆ. ನಿಮಗೆ ಪ್ರಶಸ್ತಿ ಪ್ರದಾನ ಮಾಡುವುದರೊಂದಿಗೆ ಸರ್ಕಾರ ತನ್ನನ್ನು ತಾನೂ ಗೌರವಿಸಿಕೊಂಡಿದೆ’ ಎಂದು ಕರೆ ನೀಡಿದರು.

ಶಾಲೆಗಳಲ್ಲಿ ಧ್ವಜಾರೋಹಣ: ‘ಮುಂದಿನ ವರ್ಷದಿಂದ ಬೆಂಗಳೂರು ನಗರದಲ್ಲಿರುವ ಎಲ್ಲ ಶಾಲೆ–ಕಾಲೇಜುಗಳಲ್ಲಿ ಕನ್ನಡ ಧ್ವಜ ಹಾರಿಸಿ ರಾಜ್ಯೋತ್ಸವ ಆಚರಿಸುವುದನ್ನು ಕಡ್ಡಾಯಗೊಳಿಸಲಾಗುತ್ತದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ‘ಈ ವರ್ಷವೇ ಶಾಲೆಗಳಿಗೆ ಸೂಚನೆ ನೀಡಲಾಯಿತು. ಹಲವರು ಆಚರಿಸಿದ್ದಾರೆ. ಮುಂದಿನ ವರ್ಷ ಎಲ್ಲರಿಗೂ ಕಡ್ಡಾಯವಾಗಲಿದೆ’ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರು ಮಾತನಾಡಿ, ‘ಭುವನೇಶ್ವರಿ ಪ್ರತಿಮೆಯನ್ನು ನವೆಂಬರ್ ಅಂತ್ಯದೊಳಗೆ ಅನಾವರಣಗೊಳಿಸಲಾಗುತ್ತದೆ. ರಾಜ್ಯೋತ್ಸವದ ದಿನವಾದ ಇಂದೇ ಪ್ರತಿಮೆ ಉದ್ಘಾಟನೆ ಆಗಬೇಕಿತ್ತು. ಆದರೆ ಪ್ರತಿಮೆ ಸಂಪೂರ್ಣ ಸಿದ್ಧವಾಗಿಲ್ಲ. ಆದ್ದರಿಂದ, ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಂಡು ಕಾರ್ಯಕ್ರಮವನ್ನು ಮುಂದೂಡಿದ್ದೇವೆ’ ಎಂದರು.

69 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ಹಾಗೂ 50 ಮಹಿಳೆಯರು, 50 ಪುರುಷರಿಗೆ ಸುವರ್ಣ ಮಹೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಯಿತು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಪರ ಮಾತನಾಡಿದ ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ, ‘ಇಂತಹ ಅಭೂತಪೂರ್ವ ಸಮಾರಂಭ ರಾಜ್ಯದ ಇತಿಹಾಸದಲ್ಲೇ ನಡೆದಿಲ್ಲ. ಇದಕ್ಕೆ ಕಾರಣರಾದ ಎಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇನೆ’ ಎಂದರು.

ಮಳೆಯ ಸಿಂಚನ

ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆರಂಭದಲ್ಲಿ ಸುಮಾರು 30 ನಿಮಿಷ ತುಂತುರು ಮಳೆಯಾಯಿತು. ಮುಖ್ಯಮಂತ್ರಿ, ಸಚಿವರೆಲ್ಲರೂ ವೇದಿಕೆಯಲ್ಲಿಯೇ ಕುಳಿತಿದ್ದರು. ಅವರಿಗೆ ಕೊಡೆಗಳ ವ್ಯವಸ್ಥೆ ಮಾಡಲಾಗಿತ್ತು. ಪ್ರಶಸ್ತಿಗೆ ಪುರಸ್ಕೃತರು ಮಳೆಯಲ್ಲೇ ಕುಳಿತಿದ್ದರು. ಪೊಲೀಸ್ ಬ್ಯಾಂಡ್ ತಂಡ ಮಳೆಯಲ್ಲಿಯೇ ಪ್ರದರ್ಶನ ನೀಡಿತು. ನೃತ್ಯ ಹಾಗೂ ಹಲವು ರೀತಿಯ ಕಲಾ ತಂಡಗಳ ಸದಸ್ಯರು ಮಳೆಯಿಂದ ರಕ್ಷಣೆ ಪಡೆಯಲು ಪರದಾಡಿದರು. ಪ್ರೇಕ್ಷಕರು ಮಳೆಯಿಂದ ರಕ್ಷಣೆ ಪಡೆಯಲು ಕುರ್ಚಿಗಳ ಆಶ್ರಯ ಪಡೆದರು.

ಕಿಲಾರ, ಪಿಲಾರ ಮೂಡಿಸಿದ ಗೊಂದಲ!

ಸುವರ್ಣ ಮಹೋತ್ಸವ ಪ್ರಶಸ್ತಿ ಪಟ್ಟಿಯಲ್ಲಿ ಬಾಬು ಕಿಲಾರ ಅವರ ಹೆಸರಿತ್ತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ದಕ್ಷಿಣ ಕನ್ನಡ ಜಿಲ್ಲೆಯ ಅಧಿಕಾರಿಯೊಬ್ಬರು ಕಿಲಾರ ಎಂಬುದನ್ನು ಪಿಲಾರ ಎಂದು ಭಾವಿಸಿಕೊಂಡು, ಅಲ್ಲಿನ ಬಾಬು ಪಿಲಾರ ಅವರಿಗೆ ಪ್ರಶಸ್ತಿ ಬಂದಿದೆ ಎಂದು ಬೆಂಗಳೂರಿಗೆ ಕಳುಹಿಸಿದ್ದರು. ಆದರೆ, ಮಂಡ್ಯದವರಾದ, ಅಮೆರಿಕದಲ್ಲಿರುವ ವಾಸ್ತುಶಿಲ್ಪಿ ಬಾಬು ಕಿಲಾರ ಅವರನ್ನು ಸಂಕೀರ್ಣ ವಿಭಾಗದಲ್ಲಿ ಪ್ರಶಸ್ತಿಗೆ ಪರಿಗಣಿಸಿ, ಆಯ್ಕೆ ಸಮಿತಿ ಶಿಫಾರಸು ಮಾಡಿತ್ತು. ಇದು ಸ್ಪಷ್ಟವಾದ ಬಳಿಕ, ಕುಮಾರಕೃಪದಲ್ಲಿ ಕೊಠಡಿಯಲ್ಲಿದ್ದ ಬಾಬು ಪಿಲಾರ ಅವರು ಪ್ರಶಸ್ತಿ ಸಮಾರಂಭಕ್ಕೆ ತೆರಳುವ ಸಮಯದಲ್ಲಿ ಅವರಿಗೆ ಪ್ರಶಸ್ತಿ ಬಂದಿಲ್ಲ ಎಂದು ತಿಳಿಸಲಾಯಿತು. ಅಧಿಕಾರಿ ಸೃಷ್ಟಿಸಿದ್ದ ಅವಾಂತರದಿಂದ ಕೊನೆಕ್ಷಣದಲ್ಲಿ ಗೊಂದಲ ಮೂಡಿತ್ತು.

ಕೇಂದ್ರದ ವಿರುದ್ಧ ಮತ್ತೆ ಗುಡುಗಿದ ಸಿ.ಎಂ

ಕೇಂದ್ರದಿಂದ ನ್ಯಾಯಯುತ ತೆರಿಗೆ ಪಾಲಿಗೆ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತೆರಿಗೆ ಪಾಲಿನಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ, 15ನೇ ಹಣಕಾಸು ಆಯೋಗ ರಾಜ್ಯಕ್ಕೆ ಅನ್ಯಾಯ ಮಾಡಿದೆ. ಅದನ್ನು ಸರಿಪಡಿಸಿ ಎಂದು ಕೇಂದ್ರ ಸರ್ಕಾರವನ್ನು ಹಲವು ಬಾರಿ ಕೇಳಿಕೊಂಡರೂ, ಈವರೆಗೂ ನ್ಯಾಯ ಒದಗಿಸುವ ಕೆಲಸ ಮಾಡಲಿಲ್ಲ. ಇದರ ವಿರುದ್ಧ ಹೋರಾಡದೇ ಬೇರೆ ದಾರಿಯಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶಾಲಾ ಶಿಕ್ಷಣ ಇಲಾಖೆ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವದಲ್ಲಿ ಧ್ವಜಾರೋಹಣ ನಡೆಸಿ ಅವರು ಮಾತನಾಡಿದರು.

‘ಹಸು ಹಾಲು ಕೊಡುತ್ತದೆ ಎಂದು ಪೂರಾ ಕರೆದುಕೊಂಡುಬಿಟ್ಟರೆ, ಕರುವಿಗೆ ಹಾಲು ಬೇಡವೇ? ಕರುವಿಗೆ ಹಾಲು ಬಿಡದೇ ಇದ್ದರೆ ಅದು ಬಡಕಲಾಗುತ್ತದೆ. ಕೇಂದ್ರವು ರಾಜ್ಯಕ್ಕೆ ಮಾಡುತ್ತಿರುವುದು ಇಂಥದ್ದೇ ಅನ್ಯಾಯ. ರಾಜ್ಯದಿಂದ ಕೇಂದ್ರಕ್ಕೆ ಪ್ರತಿ ವರ್ಷ ₹4 ಲಕ್ಷ ಕೋಟಿಗೂ ಹೆಚ್ಚು ತೆರಿಗೆ ಹೋಗುತ್ತದೆ. ಆದರೆ ನಮಗೆ ವಾಪಸ್ ಬರುತ್ತಿರುವುದು 50 ಸಾವಿರದಿಂದ 60 ಸಾವಿರ ರೂಪಾಯಿ ಮಾತ್ರ. ಈ ಅನ್ಯಾಯವನ್ನು ಪ್ರಶ್ನಿಸಬಾರದೇ?’ ಎಂದರು.

‘ನಾವು ಒಕ್ಕೂಟ ವ್ಯವಸ್ಥೆ ಮತ್ತು ಸಂವಿಧಾನವನ್ನು ಒಪ್ಪಿಕೊಂಡಿದ್ದೇವೆ. ಹಾಗೆಂದು ನಮಗೆ ಅನ್ಯಾಯವಾದಾಗ ಅದನ್ನು ಪ್ರಶ್ನಿಸಬಾರದು ಎಂದೇನಿಲ್ಲ. ಪ್ರಶ್ನಿಸದೇ ಇರಲೂ ಆಗದು. ಈ ಅನ್ಯಾಯವನ್ನು ಪ್ರಶ್ನಿಸಿದರೆ ಮತ್ತು ನಮ್ಮ ನ್ಯಾಯಯುತವಾದ ಪಾಲು ಕೇಳಿದರೆ ಅದನ್ನು ಕೆಲವರು ರಾಜಕೀಯಗೊಳಿಸುತ್ತಿದ್ದಾರೆ’ ಎಂದು ಆರೋಪಿಸಿದರು.

‘ಇವೆಲ್ಲವನ್ನೂ ಎದುರಿಸುವ ಶಕ್ತಿಯನ್ನು ನಾವು ರೂಢಿಸಿಕೊಳ್ಳಬೇಕಿದೆ. ರಾಜ್ಯದಿಂದ ಲೋಕಸಭೆ ಮತ್ತು ರಾಜ್ಯಸಭೆಗೆ ಚುನಾಯಿತರಾಗಿರುವವರು, ಈ ಅನ್ಯಾಯದ ವಿರುದ್ಧ ಸಂಸತ್ತಿನಲ್ಲಿ ಒಕ್ಕೊರಲಿನಿಂದ ದನಿ ಎತ್ತಬೇಕು. ಆಗ ಮಾತ್ರ ನ್ಯಾಯ ದೊರೆಯುತ್ತದೆ’ ಎಂದರು.

‘ಪ್ರಸ್ತುತತೆ ಕಳೆದುಕೊಳ್ಳುತ್ತೇವೆ’



ರಿಜ್ವಾನ್ ಅರ್ಷದ್

‘ತೆರಿಗೆ ಪಾಲಿನಲ್ಲಿ ರಾಜ್ಯಕ್ಕೆ ಈಗಾಗಲೇ ಅನ್ಯಾಯವಾಗಿದೆ. ಹಿಂದಿ ಹೇರಿಕೆಯಿಂದ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ. ಜನಸಂಖ್ಯೆ ಆಧಾರದಲ್ಲಿ ಲೋಕಸಭಾ ಕ್ಷೇತ್ರ ಮರುವಿಂಗಡಣೆಯಾಗಿ ಕರ್ನಾಟಕವೂ ಸೇರಿ ದಕ್ಷಿಣ ಭಾರತದ ಎಲ್ಲ ರಾಜ್ಯಗಳಿಗೆ ಮತ್ತಷ್ಟು ವಂಚನೆಯಾಗಲಿದೆ’ ಎಂದು ಶಾಸಕ ರಿಜ್ವಾನ್ ಅರ್ಷದ್ ಕಳವಳ ವ್ಯಕ್ತಪಡಿಸಿದರು.

‘ಈಗ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯಾದರೆ ಉತ್ತರ ಭಾರತದ ರಾಜ್ಯಗಳ ಪ್ರಾತಿನಿಧ್ಯ ಹಲವು ಪಟ್ಟು ಹೆಚ್ಚಲಿದೆ. ದಕ್ಷಿಣ ಭಾರತದ ರಾಜ್ಯಗಳ ಪ್ರಾತಿನಿಧ್ಯ ಕಡಿಮೆಯಾಗಲಿದೆ. ಸಂಸತ್ತು ಮತ್ತು ಕೇಂದ್ರ ಸರ್ಕಾರದಲ್ಲಿ ನಾವು ಪ್ರಸ್ತುತತೆ ಕಳೆದುಕೊಳ್ಳುತ್ತೇವೆ. ನಮಗಾಗುತ್ತಿರುವ ಅನ್ಯಾಯವನ್ನು ಕೇಳಿಸಿಕೊಳ್ಳುವವರೂ ಇಲ್ಲವಾಗುತ್ತಾರೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಕನ್ನಡ ಮತ್ತು ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ, ರಾಜ್ಯಕ್ಕೆ ಎದುರಾಗಿರುವ ಈ ಆತಂಕಗಳನ್ನು ಎದುರಿಸುವ ಬಗೆಗಳನ್ನು ಪರಿಶೀಲಿಸಬೇಕು’ ಎಂದರು.

ಬಿಎಸ್‌ವೈ, ಎಚ್‌ಡಿಕೆ, ಶೆಟ್ಟರ್, ಬೊಮ್ಮಾಯಿ ಅವಧಿಯ ದಾಖಲೆ ಬಿಡುಗಡೆ

‘ವಕ್ಫ್ ಉಲ್ಲೇಖ: ಬಿಜೆಪಿಯವರೇ ಮಾಡಿದ್ದು’

ಪ್ರಜಾವಾಣಿ ವಾರ್ತೆ

ವಿಜಯಪುರ: ವಕ್ಫ್ ಆಸ್ತಿ ವಿಚಾರದಲ್ಲಿ ಬಿಜೆಪಿ ಹೀನ ರಾಜಕಾರಣ ಮಾಡುತ್ತಿದ್ದು, ಕೋಮು ಸಂಘರ್ಷ ಸೃಷ್ಟಿಸಲು ಹವಣಿಸುತ್ತಿದೆ. ಬಿಜೆಪಿ, ಜೆಡಿಎಸ್ ಅವಧಿಯಲ್ಲಿಯೇ ರೈತರ ಪಹಣಿಗಳಲ್ಲಿ ವಕ್ಫ್ ಎಂದು ನಮೂದು ಮಾಡಿಸಿದ್ದಾರೆ ಎಂದು ಸಚಿವ ಎಂ.ಬಿ.ಪಾಟೀಲ ಇಲ್ಲಿ ಆರೋಪಿಸಿದರು.

ಎಚ್.ಡಿ.ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಡಿ.ವಿ.ಸದಾನಂದಗೌಡ, ಬಸವರಾಜ ಬೊಮ್ಮಾಯಿ ಅವರು ಸಿ.ಎಂ ಆಗಿದ್ದಾಗಲೇ ನೂರಾರು ರೈತರ ಆಸ್ತಿಗಳನ್ನು ವಕ್ಫ್ ಬೋರ್ಡ್‌ಗೆ ಖಾತೆ ಬದಲಾಯಿಸಿದ್ದಾರೆ ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ದಾಖಲೆ ಬಿಡುಗಡೆ ಮಾಡಿದರು.

‘2006ರಲ್ಲಿ ಬಿಜೆಪಿ–ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಯಾಗಿದ್ದಾಗ ಚಿಕ್ಕಮಗಳೂರಿನ ಗಾವನಹಳ್ಳಿ, ಕಡೂರಳ್ಳಿಯ 4 ಪ್ರಕರಣಗಳಲ್ಲಿ ರೈತರ ಭೂಮಿಯನ್ನು ವಕ್ಫ್‌ಗೆ ಖಾತೆ ಮಾಡಿಸಿಕೊಟ್ಟಿದ್ದಾರೆ’ ಎಂದು ಆರೋಪಿಸಿದರು.

‘2008ರಿಂದ 2013ರ ವರೆಗೆ ಮುಖ್ಯಮಂತ್ರಿ ಆಗಿದ್ದ ಯಡಿಯೂರಪ್ಪ, ಸದಾನಂದಗೌಡ ಮತ್ತು ಜಗದೀಶ ಶೆಟ್ಟರ್ ಅವರ ಅವಧಿಯಲ್ಲಿ ಚಿಕ್ಕಮಗಳೂರಿನಲ್ಲಿ 7 ಆಸ್ತಿಗಳಿಗೆ ಸಂಬಂಧಿಸಿದಂತೆ ಪಹಣಿ ಕಾಲಂ ನಂಬರ್ 9ರಲ್ಲಿ ವಕ್ಫ್ ಎಂದು ನಮೂದು ಮಾಡಿದ್ದಾರೆ. ಆಗ ಸಿ.ಟಿ.ರವಿ ಶಾಸಕ, ಸಚಿವರಾಗಿದ್ದರು’ ಎಂದರು.

2019–2023ರ ಅವಧಿಯಲ್ಲಿ ಚಿಕ್ಕಮಗಳೂರಿನಲ್ಲಿ 7ಕ್ಕೂ ಹೆಚ್ಚು ಪ್ರಕರಣಗಳಲ್ಲಿ 11 ಎಕರೆ ಭೂಮಿಯನ್ನು ಪಹಣಿ ಕಾಲಂ 9ರಲ್ಲಿ ವಕ್ಫ್ ಎಂದು ನಮೂದು ಮಾಡಿದ್ದಾರೆ. ಇನ್ನೂ ವಿಶೇಷ ಎಂದರೆ ರೈತರಿಗೆ ಯಾವುದೇ ನೋಟಿಸ್ ನೀಡದೇ ಈ ನಮೂದು ಮಾಡಲಾಗಿದೆ ಎಂದು ವಿವರಿಸಿದರು.

2019ರ ಜುಲೈನಿಂದ 2023ರ ಏಪ್ರಿಲ್ ವರೆಗೆ ಅಧಿಕಾರ ನಡೆಸಿದ್ದ ಬಿಜೆಪಿಯವರು ವಕ್ಫ್ ಆಸ್ತಿಗಳಿಗೆ ಸಂಬಂಧಿಸಿ 216 ಪ್ರಕರಣಗಳಲ್ಲಿ ರೈತರಿಗೆ ನೋಟಿಸ್ ನೀಡಿದ್ದಾರೆ ಎಂದು ಆರೋಪಿಸಿದರು.

ಆರ್.ಅಶೋಕ್ ಅವರು ಕಂದಾಯ ಸಚಿವರಾಗಿದ್ದಾಗ ಬೆಂಗಳೂರು ನಗರ ಜಿಲ್ಲೆಯಲ್ಲಿ 7 ಪ್ರಕರಣಗಳಲ್ಲಿ ಪಹಣಿಯ ಕಾಲಂ 11ರಲ್ಲಿ ವಕ್ಫ್ ಎಂದು ನಮೂದಿಸಿದ್ದಾರೆ. ಗೋವಿಂದ ಕಾರಜೋಳ ಅವರು ಸಚಿವರಾಗಿದ್ದಾಗ ಬಾಗಲಕೋಟೆ ಜಿಲ್ಲೆಯಲ್ಲಿ 11 ಪ್ರಕರಣಗಳಲ್ಲಿ ವಕ್ಫ್ ಎಂದು ನಮೂದಿಸಿದ್ದಾರೆ ಎಂದರು.

ಹಿಂದೂ–ಮುಸ್ಲಿಂ ಎಂದು ಸಮಾಜ ವಿಭಜಿಸುವ ಕೃತ್ಯದಲ್ಲಿ ತೊಡಗಿರುವ ಬಸನಗೌಡ ಪಾಟೀಲ ಯತ್ನಾಳ ಅವರು ಪ್ರತಿನಿಧಿಸುವ ವಿಜಯಪುರದಲ್ಲಿ ನೋಟಿಸ್ ನೀಡದೇ ಬಿಜೆಪಿ ಅವಧಿಯಲ್ಲೇ 109 ಪ್ರಕರಣಗಳಲ್ಲಿ ಪಹಣಿಯ ಕಾಲಂ 9ರಲ್ಲಿ ವಕ್ಫ್ ಎಂದು ನಮೂದು ಮಾಡಿದ್ದಾರೆ ಎಂದು ದಾಖಲೆ ತೋರಿಸಿದರು.

‘ಬಿಜೆಪಿ, ಜೆಡಿಎಸ್ ಅವಧಿಯಲ್ಲಿ ನಡೆದಿರುವ ಉದಾಹರಣೆಗಳಿವು. ಮುಂದಿನ ದಿನಗಳಲ್ಲಿ ಈ ಕುರಿತು ಸಮಗ್ರ ದಾಖಲೆಯನ್ನು ಬಿಡುಗಡೆ ಮಾಡಲಾಗುವುದು’ ಎಂದು ಬಿಜೆಪಿ ಮುಖಂಡರಿಗೆ ಎಚ್ಚರಿಕೆ ನೀಡಿದರು.

‘ನೈತಿಕತೆ ಇದ್ದರೆ ಮೊದಲು ರಾಜೀನಾಮೆ ನೀಡಲಿ’

ವಿಜಯಪುರ: ‘ತಮ್ಮ ಅವಧಿಯಲ್ಲಿ ರೈತರಿಗೆ ನೋಟಿಸ್ ನೀಡದೇ ವಕ್ಫ್ ಬೋರ್ಡ್‌ಗೆ ಖಾತೆ ಮಾಡಿಕೊಟ್ಟಿರುವ ಬಿಜೆಪಿ, ಜೆಡಿಎಸ್ ನಾಯಕರು ನೈತಿಕತೆ ಇದ್ದರೆ ಮೊದಲು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಬಳಿಕ ಸಚಿವ ಜಮೀರ್ ಅಹಮದ್ ರಾಜೀನಾಮೆ ಕೇಳಬೇಕು’ ಎಂದು ಸಚಿವ ಎಂ.ಬಿ.ಪಾಟೀಲ ಅವರು ಆಗ್ರಹಿಸಿದರು.

‘ಕೇಂದ್ರ ಸರ್ಕಾರ ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿದೆ. ಈ ಕಾಯ್ದೆಗೆ ದೇಶದಾದ್ಯಂತ ವಿರೋಧ ವ್ಯಕ್ತವಾಗಿದೆ. ಹೀಗಾಗಿ, ವಕ್ಫ್ ತಿದ್ದುಪಡಿ ಸಮರ್ಥಿಸಿಕೊಳ್ಳಲು ಈ ವಿವಾದ ಕೈಗೆತ್ತಿಕೊಂಡಿದ್ದಾರೆ. ವಿವಿಧ ರಾಜ್ಯಗಳ ಚುನಾವಣೆಯಲ್ಲಿ ಈ ಮೂಲಕ ಲಾಭ ಪಡೆಯಲು ಬಿಜೆಪಿ ಹವಣಿಸುತ್ತಿದೆ’ ಎಂದು ದೂರಿದರು. ‘ಹಿಂದೂ ಹುಲಿ’ ಎಂದು ಮುಸ್ಲಿಮರ ವಿರುದ್ಧ ಅಬ್ಬರಿಸುವ ಬಸನಗೌಡ ಪಾಟೀಲ ಯತ್ನಾಳರು, ಹಿಂದೆ ಮುಸ್ಲಿಮರ ಟೊಪ್ಪಿ ಹಾಕಿಕೊಂಡು, ಖಡ್ಗ ಹಿಡಿದು ‘ಟಿಪ್ಪು ಹುಲಿ’ ಆಗಿದ್ದನ್ನು ನೋಡಿದ್ದೇವೆ. ನೋಡಿದ್ದೇವೆ ಎಂದು ಅವರು ಟೀಕಿಸಿದರು.

‘ನೋಟಿಸ್ ಕೊಟ್ಟಿದ್ದರೆ ಹಿಂದಕ್ಕೆ’

ಹೊಸಪೇಟೆ (ವಿಜಯನಗರ): ‘ವಕ್ಫ್ ಮಂಡಳಿಯಿಂದ ರೈತರಿಗೆ ನೋಟಿಸ್ ನೀಡಿದ್ದರೆ ಅದನ್ನು ತಕ್ಷಣ ಹಿಂದಕ್ಕೆ ಪಡೆಯಲಾಗುವುದು, ರೈತರ ಜಮೀನನ್ನು ವಶಕ್ಕೆ ಪಡೆಯುವ ಪ್ರಶ್ನೆಯೇ ಇಲ್ಲ’ ಎಂದು ವಕ್ಫ್ ಮತ್ತು ವಸತಿ ಸಚಿವ ಜಮೀರ್ ಅಹಮದ್ ಖಾನ್ ಶುಕ್ರವಾರ ಇಲ್ಲಿ ಸ್ಪಷ್ಟಪಡಿಸಿದರು.

‘ವಿಜಯಪುರ ದಲ್ಲಿ 1,200 ಎಕರೆ ಜಮೀನು ವಕ್ಫ್ ಪಾಲಾಗುತ್ತದೆ ಎಂದು ಗುಲ್ಲೆಬ್ಬಿಸಿದರು, ಅಲ್ಲಿ ವಕ್ಫ್‌ಗೆ ಸೇರಿದ 11 ಎಕರೆ ಜಮೀನಷ್ಟೇ ಇದೆ’ ಎಂದರು.

ರೈತರು ಮತ್ತು ಸರ್ಕಾರದ ಒಂದೇ ಒಂದು ಇಂಚು ಆಸ್ತಿಯನ್ನು ವಕ್ಫ್‌ಗೆ ಹೋಗಲು ಬಿಡುವುದಿಲ್ಲ. ಹಾಗೇ, ವಕ್ಫ್ ಆಸ್ತಿಯನ್ನು ಬೇರೆಯವರಿಗೆ ಕೊಡುವ ಉದ್ದೇಶವೂ ಸರ್ಕಾರಕ್ಕೆ ಇಲ್ಲ

ಎಂ.ಬಿ.ಪಾಟೀಲ, ಸಚಿವ

ಪಹಣಿಯಲ್ಲಿ ವಕ್ಫ್ ಎಂದು ನಮೂದಾಗಿದ್ದರೆ ವಕ್ಫ್ ಮಂಡಳಿಗೆ ಹೋಗಬೇಕಿಲ್ಲ. ನನ್ನ ಬಳಿಗೆ ಬಂದರೂ ಸರಿಪಡಿಸಿಕೊಡುವೆ. ರೈತರು ಹೆಚ್ಚು ತಲೆಕೆಡಿಸಿಕೊಳ್ಳಬೇಕಿಲ್ಲ

ಮಂಕಾಳ ವೈದ್ಯ, ಮೀನುಗಾರಿಕೆ ಸಚಿವ

ಸಿ.ಎಂ ಸಿದ್ದರಾಮಯ್ಯ, ಸಚಿವರಾದ ಕೃಷ್ಣಬೈರೇಗೌಡ ಹಾಗೂ ಜಮೀರ್ ನೇರ ಸೂಚನೆಯ ಮೇರೆಗೆ ಖಾಸಗಿ, ಧಾರ್ಮಿಕ ಕೇಂದ್ರಗಳ ಜಮೀನುಗಳನ್ನು ವಕ್ಫ್ ಮಂಡಳಿ ಹೆಸರಿಗೆ ಮಾಡಲಾಗುತ್ತಿದೆ

ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದ

ಗ್ರಾ.ಪಂ.: ತೆರಿಗೆ ಸೋರಿಕೆ ಅವ್ಯಾಹತ

ಒಂದನೇ ಪುಟದಿಂದ...

ಸಮೀಕ್ಷೆ ಕಡತಕ್ಕೆ ಸೀಮಿತ: ಎಲ್ಲ ಆಸ್ತಿಗಳನ್ನೂ ತೆರಿಗೆ ವ್ಯಾಪ್ತಿಗೆ ತರಲು ಕ್ರಮ ಕೈಗೊಳ್ಳುವಂತೆ ಗ್ರಾಮ ಪಂಚಾಯಿತಿಗಳಿಗೆ ನಿರ್ದೇಶನ ನೀಡಿ 2019ರಲ್ಲಿ ಆದೇಶ ಹೊರಡಿಸಲಾಗಿತ್ತು. ಆದರೆ, ಯಾವುದೇ ಪ್ರಗತಿ ಆಗಿರಲಿಲ್ಲ. 2022ರ ಆಗಸ್ಟ್‌ನಲ್ಲಿ ಆದೇಶವೊಂದನ್ನು ಹೊರಡಿಸಿದ್ದ ಪಂಚಾಯತ್ ರಾಜ್ ಇಲಾಖೆ ಆಯುಕ್ತರು, ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಎಲ್ಲ ಕೃಷಿಯೇತರ ಆಸ್ತಿಗಳ ಸಮೀಕ್ಷೆ ನಡೆಸುವಂತೆ ಸೂಚಿಸಿದ್ದರು.

ಎಲ್ಲ ಜಿಲ್ಲೆಗಳಲ್ಲೂ ಆಸ್ತಿಗಳ ಮ್ಯಾನ್ಯುಯಲ್ ಸಮೀಕ್ಷೆ ಪೂರ್ಣಗೊಳಿಸಲಾಗಿದೆ ಎಂಬ ವರದಿಯನ್ನು ಇಲಾಖೆಯ ಕೇಂದ್ರ ಕಚೇರಿಗೆ ಸಲ್ಲಿಸಲಾಗಿದೆ. ಆದರೆ, ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆ ಪಟ್ಟಿಗೆ ಸೇರಿದ ಆಸ್ತಿಗಳ ಸಂಖ್ಯೆಯಲ್ಲಿ ದೊಡ್ಡ ಬದಲಾವಣೆಯೇನೂ ಆಗಿಲ್ಲ. 2023ರಲ್ಲಿ ರಾಜ್ಯದ 2,950 ಗ್ರಾಮ ಪಂಚಾಯಿತಿಗಳಲ್ಲಿ 1.32 ಕೋಟಿ ಆಸ್ತಿಗಳು ತೆರಿಗೆ ವ್ಯಾಪ್ತಿಯಲ್ಲಿದ್ದವು. ಈಗ ಆ ಸಂಖ್ಯೆ 1.41 ಕೋಟಿಗೆ ಏರಿಕೆಯಾಗಿದೆ.

‘ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ 2.5 ಕೋಟಿಗೂ ಹೆಚ್ಚು ಕೃಷಿಯೇತರ ಆಸ್ತಿಗಳಿವೆ. ಅವುಗಳೆಲ್ಲವನ್ನೂ ಗ್ರಾಮ ಪಂಚಾಯಿತಿಗಳ ತೆರಿಗೆ ವ್ಯಾಪ್ತಿಗೆ ತರುವ ಉದ್ದೇಶದಿಂದ ಪಂಚತಂತ್ರ 2.0 ತಂತ್ರಾಂಶ ಅಳವಡಿಸಲಾಗಿತ್ತು. ಆಸ್ತಿಗಳ ಸಮೀಕ್ಷೆಯನ್ನೂ ಮಾಡಲಾಗಿತ್ತು. ಆದರೆ, ಇನ್ನೂ ಒಂದು ಕೋಟಿಗೂ ಹೆಚ್ಚಿನ ಆಸ್ತಿಗಳು ತೆರಿಗೆ ವ್ಯಾಪ್ತಿಗೆ ಬಂದಿಲ್ಲ. ಇದರಿಂದ ಗ್ರಾಮ ಪಂಚಾಯಿತಿಗಳಿಗೆ ಸಾವಿರಾರು ಕೋಟಿ ರೂಪಾಯಿ ತೆರಿಗೆ ವರಮಾನ ಕೈತಪ್ಪುತ್ತಿದೆ’ ಎನ್ನುತ್ತವೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮೂಲಗಳು.

ಕಡತ ನಿರ್ವಹಣೆಗೂ ನಿರಾಸಕ್ತಿ: ಗ್ರಾಮ ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿನ ಆಸ್ತಿಗಳು ಮತ್ತು ತೆರಿಗೆ ಸಂಗ್ರಹಕ್ಕೆ ಸಂಬಂಧಿಸಿದಂತೆ ನಾಲ್ಕು ಪುಸ್ತಕಗಳನ್ನು (ರಿಜಿಸ್ಟರ್) ನಿರ್ವಹಣೆ ಮಾಡಬೇಕು. ಪ್ರತಿ ವರ್ಷವೂ ಹೊಸ ರಿಜಿಸ್ಟರ್ ಬರೆದು ತೆರಿಗೆ ಬೇಡಿಕೆ, ಬಾಕಿ ಮತ್ತು ಸಂಗ್ರಹವನ್ನು ಪರಿಶೀಲಿಸಬೇಕು. ಹೆಚ್ಚಿನ ಗ್ರಾಮ ಪಂಚಾಯಿತಿಗಳಲ್ಲಿ ಈ ರಿಜಿಸ್ಟರ್‌ಗಳ ನಿರ್ವಹಣೆಯೇ ಸಮರ್ಪವಾಗಿ ನಡೆಯುತ್ತಿಲ್ಲ.

‘ನಮೂನೆ 9ಎ (ಆಸ್ತಿ ವಿವರಗಳ ರಿಜಿಸ್ಟರ್), ನಮೂನೆ 9 (ತೆರಿಗೆ ನಿರ್ಧರಣಾ ಪಟ್ಟಿಯ ರಿಜಿಸ್ಟರ್), ನಮೂನೆ 11ಎ (ತೆರಿಗೆ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಿವರಗಳ ರಿಜಿಸ್ಟರ್) ಹಾಗೂ ನಮೂನೆ 11 ಬಿ (ಕ್ರಮಬದ್ಧವಲ್ಲದ ಆಸ್ತಿಗಳ ತೆರಿಗೆ ನಿರ್ಧರಣಾ ಪಟ್ಟಿಯ ರಿಜಿಸ್ಟರ್) ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿಲ್ಲ. ಲೆಕ್ಕಪರಿಶೋಧನೆಯಲ್ಲಿ ನಿರಂತರವಾಗಿ ಆಕ್ಷೇಪಗಳು ವ್ಯಕ್ತವಾಗುತ್ತಿವೆ. ಈ ಕಡತಗಳ ನಿರ್ವಹಣೆಯಲ್ಲಿನ ಲೋಪವೂ ಆಸ್ತಿಗಳು ತೆರಿಗೆ ಪಟ್ಟಿಯಿಂದ ಹೊರಗುಳಿಯಲು ಪ್ರಮುಖ ಕಾರಣ’ ಎನ್ನುತ್ತಾರೆ ಅಧಿಕಾರಿಗಳು.

ತೆರಿಗೆ ಸಂಗ್ರಹವೂ ಕುಂಠಿತ

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಏಳು ತಿಂಗಳು ಕಳೆದಿದ್ದು, ಗ್ರಾಮ ಪಂಚಾಯಿತಿಗಳ ಆಸ್ತಿ ತೆರಿಗೆ ಸಂಗ್ರಹದಲ್ಲಿ ತೀವ್ರ ಕುಂಠಿತವಾಗಿದೆ. ಪ್ರಸಕ್ತ ವರ್ಷದ ಬೇಡಿಕೆಗೆ ಹೋಲಿಸಿದರೆ ಶೇಕಡ 35ರಷ್ಟು ತೆರಿಗೆ ಸಂಗ್ರಹವಾಗಿದೆ. ಹಿಂಬಾಕಿಯೂ ಸೇರಿದ ಒಟ್ಟು ಬೇಡಿಕೆಗೆ ಹೋಲಿಸಿದರೆ ತೆರಿಗೆ ಸಂಗ್ರಹದ ಪ್ರಮಾಣ ಶೇ 14ರಷ್ಟು ಮಾತ್ರ ಇದೆ.

2024–25ನೇ ಆರ್ಥಿಕ ವರ್ಷದಲ್ಲಿ 5,950 ಗ್ರಾಮ ಪಂಚಾಯಿತಿಗಳ ಒಟ್ಟು ಆಸ್ತಿ ತೆರಿಗೆ ಬೇಡಿಕೆ ₹1,657.95 ಕೋಟಿ ಇದೆ. ಹಿಂದಿನ ವರ್ಷಗಳ ಬಾಕಿ ₹2,412.50 ಕೋಟಿ ಇದೆ. ಒಟ್ಟು ಬೇಡಿಕೆ ₹4,070.45 ಕೋಟಿ ಇದ್ದು, ಅಕ್ಟೋಬರ್ 25ರವರೆಗೆ ₹579.26 ಕೋಟಿ ತೆರಿಗೆ ಮಾತ್ರ ಸಂಗ್ರಹವಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ತೋರಣದ ತಳಿರಲ್ಲಿ, ಹೊಸಿಲ ಹಣತೆಗಳಲ್ಲಿ, ಬಾಣಬಿರುಸುಗಳಲ್ಲಿ ನಲಿವು ಮೂಡಿ, ಕತ್ತಲೆಯ ಪುಟಗಳಲಿ, ಬೆಳಕಿನಕ್ಷರಗಳಲಿ ದೀಪಗಳ ಸಂದೇಶ ಥಳಥಳಿಸಲಿ.

-ಕೆ.ಎಸ್.ನರಸಿಂಹಸ್ವಾಮಿ

‘ಭಾಗ್ಯಲಕ್ಷ್ಮಿ’ಗೆ ಸಲ್ಲದ ಅಡ್ಡಿ ಕೊಟ್ಟ ಭರವಸೆಯನ್ನು ಈಡೇರಿಸಿ

ಬಡತನದ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳಲ್ಲಿ ಹೆಣ್ಣು ಶಿಶು ಜನನವನ್ನು ಉತ್ತೇಜಿಸುವ, ಕುಟುಂಬ ಮತ್ತು ಸಮಾಜದಲ್ಲಿ ಹೆಣ್ಣು ಮಗುವಿನ ಸ್ಥಿತಿಯನ್ನು ಸುಧಾರಿಸುವ ಉದ್ದೇಶದಿಂದ ‘ಭಾಗ್ಯಲಕ್ಷ್ಮಿ ಯೋಜನೆ’ಯನ್ನು ರಾಜ್ಯ ಸರ್ಕಾರವು 2006ರಲ್ಲಿ ಆರಂಭಿಸಿತು. 2011ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಪುರುಷ ಹಾಗೂ ಮಹಿಳೆಯರ ಸಂಖ್ಯೆಯಲ್ಲಿನ ಅನುಪಾತದಲ್ಲಿ ಬಹಳ ವ್ಯತ್ಯಾಸ ಕಂಡುಬಂದಿದೆ. ಅಂದರೆ, ಪ್ರತಿ 1,000 ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆ 964 ಮಾತ್ರ. ರಾಷ್ಟ್ರ ಮಟ್ಟದಲ್ಲಿನ ಪುರುಷ–ಮಹಿಳೆ ಅನುಪಾತಕ್ಕೆ ಹೋಲಿಸಿದರೆ ರಾಜ್ಯದಲ್ಲಿನ ಅನುಪಾತ ಉತ್ತಮವಾಗಿದೆಯಾದರೂ, ಸಮಾಜವು ಗಂಡು ಶಿಶುವನ್ನೇ ಹೆಚ್ಚು ಬಯಸುತ್ತಿದೆ ಎಂಬುದನ್ನು ಇದು ಹೇಳುತ್ತಿದೆ. ಸಮಾಜದ ಈ ಧೋರಣೆಯು ಹೆಣ್ಣುಮಕ್ಕಳ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತಿದೆ. ಅಂದರೆ, ಪೌಷ್ಟಿಕ ಆಹಾರ ಲಭ್ಯತೆ, ಶಿಕ್ಷಣ, ಆರೋಗ್ಯಸೇವೆ ಮತ್ತು ಹೆಣ್ಣುಮಗುವಿನ ಒಟ್ಟಾರೆ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಈ ಸಮಸ್ಯೆಗಳಿಗೆ ಉತ್ತರವಾಗಿ, ಹೆಣ್ಣು ಶಿಶುವಿನ ಜನನವನ್ನು ಕಡ್ಡಾಯವಾಗಿ ನೋಂದಣಿ ಮಾಡಿಸಲು, ಕುಟುಂಬದಲ್ಲಿ ಆಕೆಯ ಸ್ಥಾನವನ್ನು ಉತ್ತಮಪಡಿಸಲು, ಆಕೆಯ ಶಿಕ್ಷಣಕ್ಕೆ ಉತ್ತೇಜನ ನೀಡಲು, ಬಾಲ್ಯವಿವಾಹ ಹಾಗೂ ಬಾಲಕಾರ್ಮಿಕ ಪದ್ಧತಿಯಂತಹ ಪಿಡುಗುಗಳನ್ನು ನಿವಾರಿಸಲು ರಾಜ್ಯ ಸರ್ಕಾರವು ಭಾಗ್ಯಲಕ್ಷ್ಮಿ ಯೋಜನೆಗೆ ಚಾಲನೆ ನೀಡಿತು.

ದಾಖಲೆಗಳ ಅಗತ್ಯ ಕಡಿಮೆ ಮಾಡಿ, ಯೋಜನೆಯ ಫಲ ಪಡೆಯುವ ಪ್ರಕ್ರಿಯೆಯನ್ನು ಸರಳಗೊಳಿಸುವ ಕೆಲಸ ತಕ್ಷಣ ಆಗಬೇಕು

ಆದರೆ, ಈ ಯೋಜನೆಯ ಪ್ರಮುಖ ಭಾಗವಾಗಿರುವ ಹಣಕಾಸಿನ ನೆರವು ಅಧಿಕಾರಿಶಾಹಿ ವ್ಯವಸ್ಥೆಯ ನಿಧಾನಗತಿಗೆ ಸಿಲುಕಿ, ಹಲವು ಅರ್ಹ ಫಲಾನುಭವಿಗಳ ಪಾಲಿಗೆ ಗಗನಕುಸುಮವಾಗಿ ಉಳಿದಿದೆ. ಈ ಯೋಜನೆಯ ಭಾಗವಾಗಿ, ದಂಪತಿಗೆ ಮೊದಲ ಹೆಣ್ಣುಮಗು ಜನಿಸಿದಾಗ ಆಕೆಯ ಹೆಸರಿನಲ್ಲಿ ₹10 ಸಾವಿರವನ್ನು ಠೇವಣಿಯಾಗಿ ಇರಿಸಲಾಗುತ್ತದೆ. ಆ ಹೆಣ್ಣುಮಗುವಿಗೆ 18 ವರ್ಷ ತುಂಬಿದಾಗ ಈ ಮೊತ್ತವು ₹34,571ಕ್ಕೆ ಏರಿಕೆ ಆಗಿರುತ್ತದೆ, ಈ ಮೊತ್ತವನ್ನು ಆಗ ಆಕೆಗೆ ನೀಡಲಾಗುತ್ತದೆ. ದಂಪತಿಯ ಎರಡನೆಯ ಹೆಣ್ಣುಮಗುವಿಗೆ ಸಿಗುವ ಮೊತ್ತ ₹40,619. ಇದನ್ನು 2008ರ ನಂತರದಲ್ಲಿ ₹1 ಲಕ್ಷಕ್ಕಿಂತ ಹೆಚ್ಚು ಮಾಡಲಾಗಿದೆ. ಈ ಮೊತ್ತವನ್ನು ಪಡೆದುಕೊಳ್ಳಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಒಂಬತ್ತು ದಾಖಲೆ ಸಲ್ಲಿಸುವುದನ್ನು ಕಡ್ಡಾಯ ಮಾಡಿದೆ. ಇವುಗಳಲ್ಲಿ ಲಸಿಕೆ ನೀಡಿರುವ ಪ್ರಮಾಣಪತ್ರ ಕೂಡ ಒಂದು. ಆದರೆ, ಬಿಪಿಎಲ್ ವರ್ಗಕ್ಕೆ ಸೇರಿದ ಹಲವು ಕುಟುಂಬಗಳಿಗೆ ಅನಕ್ಷರತೆ ಮತ್ತು ಯೋಜನೆಯ ಕುರಿತ ಅಗತ್ಯ ಮಾಹಿತಿ ಇಲ್ಲದಿರುವುದು ದೊಡ್ಡ ಅಡ್ಡಿಯಾಗಿ ನಿಂತಿವೆ. ಹಲವಾರು ತಂದೆ–ತಾಯಿಗಳು ಬಹಳ ಸವಾಲಿನ ಬದುಕು ಸಾಗಿಸುತ್ತಿರುತ್ತಾರೆ. ಅಗತ್ಯ ದಾಖಲೆಗಳನ್ನು ಜೋಪಾನವಾಗಿ ಇರಿಸಿಕೊಳ್ಳಲಾಗದಂತಹ ಸ್ಥಿತಿಯಲ್ಲಿ ಅವರ ಜೀವನ ಇರುತ್ತದೆ. ಅಷ್ಟೇ ಏಕೆ, ಅವರು ಅಗತ್ಯ ದಾಖಲೆಗಳನ್ನು ಸರಿಯಾಗಿ ಪಡೆದುಕೊಳ್ಳದೆಯೂ ಇರಬಹುದು. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಬಹಳ ಕಷ್ಟದಲ್ಲಿ ಇರುವ ಕುಟುಂಬಗಳಿಗೆ, ಅರ್ಹ ಫಲವನ್ನು ಪಡೆದುಕೊಳ್ಳಲು ಬಹಳ ಕಠಿಣವಾದ ಷರತ್ತುಗಳನ್ನು ನಿಗದಿ ಮಾಡುವುದು ಅನ್ಯಾಯದ ನಡೆಯಾಗುತ್ತದೆ. ಅಧಿಕಾರಿಶಾಹಿ ಸೃಷ್ಟಿಸುವ ಇಂತಹ ಅಡ್ಡಿಗಳನ್ನು ನಿವಾರಿಸಲು ಒಗ್ಗಟ್ಟಿನ ಪ್ರಯತ್ನವೊಂದು ಆಗದೇ ಇದ್ದರೆ, ಈ ಯೋಜನೆಯ ಪ್ರಯೋಜನಗಳು ಅರ್ಹರಿಗೆ ಸಿಗುವುದೇ ಇಲ್ಲ.

ರಾಷ್ಟ್ರೀಯ ಮಾಹಿತಿ ಕೇಂದ್ರದ (ಎನ್ಐಸಿ) ಸಹಭಾಗಿತ್ವದಲ್ಲಿ ಸರ್ಕಾರವು ಮಗುವಿನ ಮೇಲೆ ನಿಗಾ ಇರಿಸುವ ವ್ಯವಸ್ಥೆಯೊಂದನ್ನು ರೂಪಿಸಿದೆ. ಈ ವ್ಯವಸ್ಥೆಯನ್ನು ಮಗುವಿನ ಆರೋಗ್ಯ, ಶಿಕ್ಷಣ ಮತ್ತು ಒಟ್ಟಾರೆ ಕ್ಷೇಮದ ಮೇಲೆ ಕಣ್ಣಿಡುವ ‘ಹೆಜ್ಜೆ ಗುರುತು’ ಯೋಜನೆಯೊಂದಿಗೆ ಜೋಡಿಸಲಾಗಿದೆ. ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಂಡರೆ, ಅರ್ಹ ಫಲಾನುಭವಿಗಳನ್ನು ಗುರುತಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತದೆ. ಯೋಜನೆಯ ಅರ್ಹ ಫಲಾನುಭವಿಗಳು ತಾವು ಎಂಬುದನ್ನು ಸಾಬೀತು ಮಾಡಬೇಕಾದ ಹೊಣೆಯು ಆಗ ಬಡ ಕುಟುಂಬಗಳ ಮೇಲೆ ಇರುವುದಿಲ್ಲ. ದಾಖಲೆಗಳ ಅಗತ್ಯವನ್ನು ಕಡಿಮೆ ಮಾಡಿ, ಯೋಜನೆಯ ಫಲವನ್ನು ಪಡೆಯುವ ಪ್ರಕ್ರಿಯೆಯನ್ನು ಸರಳಗೊಳಿಸುವ ಕೆಲಸವನ್ನು ಸರ್ಕಾರವು ತಕ್ಷಣ ಮಾಡಬೇಕು. ಈಗಿರುವ ಅಡ್ಡಿಗಳು ಈ ಯೋಜನೆಯ ಮೂಲ ಉದ್ದೇಶವನ್ನೇ ಹಾಳುಮಾಡುವಂತೆ ಇವೆ. ಕುಟುಂಬಗಳಿಗೆ ನೆರವಾಗುವ ಬದಲು, ಈ ಅಡ್ಡಿಗಳು ಆ ಕುಟುಂಬಗಳ ಸಮಸ್ಯೆಯನ್ನು ಇನ್ನಷ್ಟು ಜಟಿಲವಾಗಿಸುವಂತೆ, ಕುಟುಂಬಗಳನ್ನು ಇನ್ನಷ್ಟು ಹತಾಶೆಗೆ ನೂಕುವಂತೆ ಇವೆ. ಯೋಜನೆಯು ಯಾವ ಭರವಸೆಯನ್ನು ಈ ಕುಟುಂಬಗಳಿಗೆ ನೀಡಿದೆಯೋ, ಅದನ್ನು ಈಡೇರಿಸಬೇಕಿರುವುದು ಸರ್ಕಾರದ ಕರ್ತವ್ಯ. ಆಗ ಹೆಣ್ಣುಮಗುವಿಗೆ ಹಾಗೂ ಆಕೆಯ ಕುಟುಂಬಕ್ಕೆ ನೆರವನ್ನು ನಿಜ ಅರ್ಥದಲ್ಲಿ ನೀಡಿದಂತೆ ಆಗುತ್ತದೆ. ಕುಟುಂಬ ಮತ್ತು ಸಮಾಜದಲ್ಲಿ ಹೆಣ್ಣು ಮಗುವಿಗೆ ಗೌರವ ಹೆಚ್ಚಿಸುವ ಉದ್ದೇಶವೂ ಸಾಕಾರಗೊಳ್ಳುತ್ತದೆ.

ದಿನದ ಟ್ವೀಟ್

ತ್ವರಿತ ವಿಚಾರಣೆ ಸಾಧ್ಯವಾಗಲಿ

40 ವರ್ಷಗಳ ಹಿಂದಿನ ಈ ದಿನ, ದೆಹಲಿಯಲ್ಲಿ ಸಿಖ್ಖರನ್ನು ಗುರಿಯಾಗಿ ಇಟ್ಟುಕೊಂಡು ನಡೆಸಿದ ಒಪ್ಪಲಾಗದ ಮತ್ತು ಅಕ್ಷಮ್ಯವಾದ ದಾಳಿಯು 2,700ಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿತು. 12 ಹತ್ಯೆ ಪ್ರಕರಣಗಳಲ್ಲಷ್ಟೇ ಶಿಕ್ಷೆಯಾಗಿದೆ. ಸಾಮೂಹಿಕ ಅಪರಾಧಗಳ ವಿಚಾರಣೆ ನಡೆಸುವ ವಿಷಯದಲ್ಲಿ ನಮ್ಮ ದೇಶದ ದಾಖಲೆ ಗಾಬರಿ ಮೂಡಿಸುವಂತಿದೆ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಕೇಂದ್ರ ಸರ್ಕಾರವು ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿದೆ. ತಿದ್ದುಪಡಿ ಮಸೂದೆಗೆ ದೇಶದಾದ್ಯಂತ ವಿರೋಧ ವ್ಯಕ್ತವಾಗಿದೆ. ಈ ಹೊತ್ತಿನೊಳಗೆ ವಕ್ಫ್ ತಿದ್ದುಪಡಿಯನ್ನು ಸಮರ್ಥಿಸಿಕೊಳ್ಳಲು ಬಿಜೆಪಿಯವರು ವಕ್ಫ್ ವಿವಾದವನ್ನು ಸೃಷ್ಟಿಸಿದ್ದಾರೆ. ದೇಶದ ವಿವಿಧ ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ನಡೆಯುತ್ತಿರುವುದರಿಂದ ಲಾಭ ಪಡೆಯಲು ಬಿಜೆಪಿ ಹವಣಿಸುತ್ತಿದೆ.

ಎಂ.ಬಿ.ಪಾಟೀಲ, ಬೃಹತ್ ಕೈಗಾರಿಕಾ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 2-11-1999

• ಮಾಹಿತಿ ತಂತ್ರಜ್ಞಾನ: ಹೆಬ್ಬಾಗಿಲು ತೆರೆದ ಕರ್ನಾಟಕ

ಬೆಂಗಳೂರು, ನ. 1– ರಾಷ್ಟ್ರದಲ್ಲೇ ಮುಂಚೂಣಿಯಲ್ಲಿರುವ ತಂತ್ರಜ್ಞಾನ ಕ್ಷೇತ್ರಕ್ಕೆ ಮತ್ತಷ್ಟು ಪ್ರೋತ್ಸಾಹ ಕ್ರಮಗಳ ಹೆಬ್ಬಾಗಿಲನ್ನು ರಾಜ್ಯ ಸರ್ಕಾರ ತೆರೆಯಿತು.

ರಾಜಧಾನಿಯಲ್ಲಿ ಮಾಹಿತಿ ತಂತ್ರಜ್ಞಾನ (ಐಟಿ) ಕಾರಿಡಾರ್ ಸ್ಥಾಪನೆ, ಕನ್ನಡ ಸಾಫ್ಟ್‌ವೇರ್ ಬೆಳವಣಿಗೆಗೆ ಉತ್ತೇಜನ, ಎಲೆಕ್ಟ್ರಾನಿಕ್ಸ್ ನಗರದಲ್ಲಿ ಪ್ರಾರಂಭಿಸಲಾಗುವ ಎಲ್ಲ ತಂತ್ರಜ್ಞಾನ ಘಟಕಗಳಿಗೂ ಸ್ಟ್ಯಾಂಪ್ ಶುಲ್ಕದಲ್ಲಿ ವಿನಾಯಿತಿ– ಇವು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಘೋಷಿಸಿದ ಹೊಸ ಮಾಹಿತಿ ತಂತ್ರಜ್ಞಾನ ನೀತಿಯಲ್ಲಿಯ ಪ್ರಮುಖ ಅಂಶಗಳು.

ರಾಜ್ಯೋತ್ಸವದ ದಿನವಾದ ಇಂದು ಎಲೆಕ್ಟ್ರಾನಿಕ್ಸ್ ನಗರದಲ್ಲಿ ಪ್ರಾರಂಭವಾಗಿರುವ ಮಾಹಿತಿ ತಂತ್ರಜ್ಞಾನದ ಎರಡನೇ ಬೃಹತ್ ಪ್ರದರ್ಶನ ‘ಬೆಂಗಳೂರು ಐಟಿ ಡಾಟ್ ಕಾಂ–99’ ಉದ್ಘಾಟಿಸಿದ ಕೃಷ್ಣ, ಮಾಹಿತಿ ತಂತ್ರಜ್ಞಾನದ ಬೆಳವಣಿಗೆಗೆ ಅಗತ್ಯವಾದ ಹೊಸ ಕಾರ್ಯಕ್ರಮಗಳನ್ನು ಘೋಷಿಸಿದಾಗ ಜನಸ್ತೋಮದಿಂದ ಕರತಾಡನ ಕೇಳಿಬಂತು.

• ವೀರಪ್ಪನ್ ಸಹಚರ ಸೆರೆ

ಕೊಯಮತ್ತೂರು, ನ. 1 (ಯುಎನ್ಐ)– ಕಾಡುಗಳ್ಳ ವೀರಪ್ಪನ್ ಸಹಚರ ಎಂದು ಶಂಕಿಸಲಾದ ಬಾಲು ವೀರಪ್ಪನ್‌ನನ್ನು (35) ಎಸ್‌ಟಿಎಫ್ ಇಂದು ತಮಿಳುನಾಡಿನ ಮಕ್ಕಂಪಳಯಂ ಅರಣ್ಯ ಪ್ರದೇಶದಲ್ಲಿ ಬಂಧಿಸಿದೆ.

50 ವರ್ಷಗಳ ಹಿಂದೆ

ಶನಿವಾರ, 2-11-1974

• ರಾಜ್ಯಕ್ಕೆ ‘ಕರ್ನಾಟಕ’ ನಾಮಕರಣದ ಬಗ್ಗೆ ಅರಸು ನಿಲುವು

ಬೆಂಗಳೂರು, ನ. 1– ರಾಜ್ಯದ ಹೆಸರು ಬದಲಾವಣೆ ಆಗಬೇಕೆಂದು ಹಿಂದೆ ಪ್ರತಿಪಾದಿಸುತ್ತಿದ್ದವರ ಮುಖಂಡತ್ವ ಸದುದ್ದೇಶವನ್ನು ಹೊಂದಿರಲಿಲ್ಲ ಎಂಬ ಕಾರಣದ ಮೇಲೆ ಆ ಕಾಲದಲ್ಲಿ ಹಾಲಿ ಮುಖ್ಯಮಂತ್ರಿ ದೇವರಾಜ ಅರಸು ಅವರು ಹೆಸರು ಬದಲಾವಣೆಯನ್ನು ವಿರೋಧಿಸಿದ್ದರು.

ರಾಜಾಜಿನಗರದಲ್ಲಿ ‘ಅನುಭವ ಪ್ರಿಂಟರ್ಸ್’ ಅನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಅರಸು ಅವರು, ಒಂದೊಮ್ಮೆ ವಿರೋಧಿಸಿ ನಂತರ ಬೆಂಬಲ ಸೂಚಿಸಿ ಕರ್ನಾಟಕ ಎಂಬ ನಾಮಕರಣಕ್ಕೆ ಮುಂದಾದ ತಮ್ಮ ನಿಲುವನ್ನು ವಿವರಿಸಿದರು.

‘1972ರ ನಂತರ ನಾಮಕರಣದ ಪ್ರಶ್ನೆ ಬಂದಾಗ ನಾನೇ ಅದನ್ನು (ಕರ್ನಾಟಕ ಎಂದು ಹೆಸರಿಡುವ ಬಗ್ಗೆ ನಿರ್ಣಯ) ಶಾಸನಸಭೆಯಲ್ಲಿ ಮಂಡನೆ ಮಾಡಿದೆ. ಇಡೀ ಶಾಸನಸಭೆ ಒಮ್ಮತದಿಂದ ನಿರ್ಣಯಕ್ಕೆ ಒಪ್ಪಿಗೆ ನೀಡಿತು. ಹೂವನ್ನು ಎತ್ತಿದಷ್ಟು ಹಗುರವಾಯಿತು’ ಎಂದರು.

‘ಕರ್ನಾಟಕ ಎಂದು ಹೆಸರಿಡಲು ಮುಂದಾಗಿರುವುದು ನನ್ನ ವೈಯಕ್ತಿಕ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಅಲ್ಲ’ ಎಂದು ಪ್ರತಿಪಾದಿಸಿದ ಅವರು, ‘ನನ್ನ ಉದ್ದೇಶ ಒಳ್ಳೆಯದೋ ಕೆಟ್ಟದ್ದೋ ಎಂದು ಸಾರ್ವಜನಿಕರೇ ವಿಮರ್ಶಿಸಲಿ. ಉದ್ದೇಶದಲ್ಲಿ ಸ್ವಾರ್ಥ ಇರುತ್ತಿದ್ದರೆ ಕೆಲಸ ಇಷ್ಟು ಯಶಸ್ವಿ ಆಗುತ್ತಿರಲಿಲ್ಲ’ ಎಂದು ಹೇಳಿದರು.

ಪ್ರಕೃತಿಯ ಪುನಶ್ಚೇತನಕ್ಕೆ ಬಿಗಿಯಾದ ಕಾಯ್ದೆ ಮತ್ತು ಕಾಲಮಿತಿ ಯೋಜನೆ ಅಗತ್ಯ

ಸಹ್ಯಾದ್ರಿ ಶ್ರೇಣಿ: ಬಹುಮುಖಿ ಅಪಾಯ

ವಿಶ್ಲೇಷಣೆ

ಅ.ನ.ಯಲ್ಲಪ್ಪ ರೆಡ್ಡಿ

ದೇಶದ ಪಶ್ಚಿಮ ಕರಾವಳಿಯುದ್ದಕ್ಕೂ ಅಂದರೆ ಗುಜರಾತಿನಿಂದ ಕನ್ಯಾಕುಮಾರಿಯವರೆಗೂ ಹರಡಿರುವ ಪಶ್ಚಿಮಘಟ್ಟದ ಸಾಲು ‘ಸಹ್ಯಾದ್ರಿ ಪರ್ವತಶ್ರೇಣಿ’. ಇಲ್ಲಿರುವ ವಿಶೇಷವಾದ ಸಸ್ಯ–ಪ್ರಾಣಿ ಸಂಕುಲ ವಿಶ್ವದ ಬೇರೆಲ್ಲಿಯೂ ಕಾಣಸಿಗದು. ಈ ಪರ್ವತಸಾಲು 8–9 ಶ್ರೇಣಿಗಳಲ್ಲಿ ಹರಡಿಕೊಂಡಿದ್ದು, ಅವುಗಳ ಪೈಕಿ 3ರಿಂದ 5 ಪರ್ವತ ಶ್ರೇಣಿಗಳಲ್ಲಿ ಸೂಕ್ತ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕಿದೆ. ಏಕೆಂದರೆ, ಇವು ಮಾನವನಿರ್ಮಿತ ವಿಕೃತಿಗಳಿಂದ ಅಪಾಯಕ್ಕೆ ಸಿಲುಕಿವೆ. ಭೂದೇವಿಯ ಮಹತ್ವದ ಮಂಡಲಗಳಲ್ಲಿ ಒಂದೆಂದು ಪರಿಗಣಿತವಾಗಿರುವ ಈ ಸಹ್ಯಾದ್ರಿ ಬೆಟ್ಟಸಾಲುಗಳ ಉಳಿವು ನಮ್ಮೆಲ್ಲರ ಹೊಣೆ.

ಸಹ್ಯಾದ್ರಿ ಎಂದರೆ ದಟ್ಟಕಾಡಿನ ಬೆಟ್ಟಸಾಲುಗಳು ಮಾತ್ರವಲ್ಲ, ನಡುನಡುವೆ ಹುಲ್ಲುಗಾವಲುಗಳೂ ಇವೆ, ಶೋಲಾ ಅರಣ್ಯವಿದೆ, ಕೃಷಿಭೂಮಿ, ತರಿ ಜಮೀನುಗಳಿವೆ, ಜಲಮೂಲಗಳು, ನದಿ, ಕೆರೆ ಕೊಳ್ಳಗಳ ಉಗಮಸ್ಥಾನಗಳೂ ಇವೆ. ಸಹ್ಯಾದ್ರಿಯ ಗರ್ಭದಿಂದ ಆವಿರ್ಭವಿಸಿ ಅವೆಷ್ಟೋ ನದಿಗಳು ಹುಟ್ಟುಪಡೆಯುತ್ತವೆ. ಇವುಗಳಲ್ಲಿ ಒಂದೆರಡು ನದಿಗಳು ಅರಬ್ಬಿ ಸಮುದ್ರವನ್ನು ಸೇರಿದರೆ, ಮಿಕ್ಕುಳಿದವು ಕಿಲೊಮೀಟರುಗಟ್ಟಲೆ ಯಾನ ಮಾಡಿ ತಮ್ಮ ಸುತ್ತಲಿನ ಜನರ ಬದುಕನ್ನು ಹಸನು ಮಾಡಿ ಬಂಗಾಳಕೊಲ್ಲಿಯನ್ನು ಸೇರುತ್ತವೆ.

ಸಹ್ಯಾದ್ರಿಯ ಪರ್ವತಶ್ರೇಣಿ ಪ್ರದೇಶದ ನಿತ್ಯ ಹರಿದ್ವರ್ಣದ ಹಸಿರು ಅದೆಷ್ಟು ಮನಮೋಹಕವೆಂದರೆ, ಅದನ್ನು ಬೇರೆಲ್ಲೂ ಕಾಣುವುದು ಸಾಧ್ಯವಿಲ್ಲ. ಅಪರೂಪದ ಅಸಂಖ್ಯ ಪ್ರಾಣಿಪಕ್ಷಿಗಳಿಗೆ ಸಹ್ಯಾದ್ರಿ ತವರುಮನೆ. ವಿಶ್ವದಲ್ಲಿ ಬೇರೆಲ್ಲೂ ಕಾಣಸಿಗದ ಸುಮಾರು 300 ಸಸ್ಯ–ವೃಕ್ಷ ಪ್ರಭೇದಗಳು ಸಹ್ಯಾದ್ರಿಯ ಮಡಿಲಲ್ಲಿವೆ. ಅವುಗಳಲ್ಲಿ ನಾಗಪುಷ್ಪ, ಸಾಲುಧೂಪ, ಸೀತಾ ಅಶೋಕ, ಗೌರಿಪುಷ್ಪದಂತಹ ಅನೇಕ ವೃಕ್ಷತಳಿಗಳು ಸೇರಿವೆ. ಇಲ್ಲಿರುವ ಸಸ್ಯ–ವೃಕ್ಷಗಳು ಮಾತ್ರವಲ್ಲ ಅನೇಕಾನೇಕ ಬಳ್ಳಿಗಳಲ್ಲಿ ಇರುವ ಔಷಧೀಯ ಮೌಲ್ಯ ಅಪಾರವಾದದ್ದು. ಇಲ್ಲಿ ಏನೇನಿದೆ ಎಂಬುದರ ಬಗ್ಗೆ ಸಂಶೋಧನೆ ಮಾಡಲು ದಶಕಗಳು ಸಾಲವು.

ವಿಷಾದವೆಂದರೆ, ಇಂತಹ ಯಾವ ಸಂಗತಿಗಳನ್ನೂ ಗಮನಕ್ಕೆ ತೆಗೆದುಕೊಳ್ಳದೆ, ಪ್ರಕೃತಿಮಾತೆ ನಮಗೆ ಕೊಟ್ಟಿರುವ ಈ ಕೊಡುಗೆಯ ಮಹತ್ವವನ್ನು ಅರಿತುಕೊಳ್ಳದೆ, ಅಭಿವೃದ್ಧಿಯ ಹೆಸರಿನಲ್ಲಿ ಮರಗಳನ್ನು ಕಡಿದುರುಳಿಸಿ, ಬೆಟ್ಟಗಳನ್ನು ಪುಡಿಗಟ್ಟಿ ವಿಕೃತಿಯನ್ನು ಮೆರೆಯಲಾಗುತ್ತಿದೆ. ಈ ಮೂಲಕ ನಮ್ಮ ಸರ್ಕಾರಗಳು ಮತ್ತು ಅವರಿಂದ ಗುತ್ತಿಗೆ ಪಡೆದ ಕೆಲವು ಖಾಸಗಿ ಕಂಪನಿಗಳು ಮಾಡುತ್ತಿರುವ ಕೆಲಸ ಅಕ್ಷಮ್ಯ ಅಪರಾಧ.

ವೃಕ್ಷಗಳೆಂದರೆ ಕಣ್ಣಿಗೆ ಕಾಣುವ ದೇವರು ಎಂಬ ಪೂಜನೀಯ ಭಾವ ನಮ್ಮ ಎಲ್ಲ ಮತಪಂಥಗಳಲ್ಲೂ ಇದೆ. ಹಿಂದೂ ಧರ್ಮದಲ್ಲಿ ವೃಕ್ಷವೆಂದರೆ ದೇವರು, ಮಾತೆ. ಇಸ್ಲಾಂ ಧರ್ಮದಲ್ಲೂ ವೃಕ್ಷಕ್ಕೆ, ಪ್ರಕೃತಿಗೆ ಪವಿತ್ರ ಸ್ಥಾನವಿದೆ. ವೃಕ್ಷಗಳು ದಯಾಮಯನು ನಮಗೆ ಕೊಟ್ಟಿರುವ ಪವಿತ್ರ ಉಡುಗೊರೆಗಳು ಎಂದು ಕುರಾನ್‌ನಲ್ಲಿ ಉಲ್ಲೇಖವಿದೆ. ಜಪಾನೀಯರು ಕೂಡ ಮರಗಳನ್ನು, ಪರ್ವತಗಳನ್ನು ದೇವತೆಗಳೆಂದು ಪೂಜಿಸುತ್ತಾ ಬಂದಿದ್ದಾರೆ. ಎಂತಹ ವಿಪರ್ಯಾಸವೆಂದರೆ, ನಮ್ಮ ಸಹ್ಯಾದ್ರಿಯ ಭಾಗವಾಗಿರುವ ಕುದುರೆಮುಖ ಪರ್ವತಶ್ರೇಣಿಯನ್ನು ಕಬ್ಬಿಣದ ಅದಿರಿಗಾಗಿ ಪುಡಿ ಮಾಡಿ ಬೆತ್ತಲೆ ಮಾಡಿದ್ದೇವೆ. ಅಲ್ಲಿನ ಹಸಿರು ಬಹುತೇಕ ಮಾಯವಾಗಿದೆ, ಜಲಮೂಲಗಳಿಗೆ ಅಡಚಣೆಯಾಗಿದೆ, ನೀರು, ಗಾಳಿ ಕಲುಷಿತವಾಗಿವೆ.

ಎರಡು ದಶಕಗಳಿಂದ ಸಹ್ಯಾದ್ರಿಯುದ್ದಕ್ಕೂ ಮರಗಳ ಮಾರಣಹೋಮ ನಿರಂತರವಾಗಿ ನಡೆಯುತ್ತಿದೆ. ರಾಷ್ಟ್ರೀಯ ಹೆದ್ದಾರಿಗಳಿಗೆ, ರೈಲು ಮಾರ್ಗಗಳಿಗೆ, ಉಷ್ಣವಿದ್ಯುತ್ ಸ್ಥಾವರಗಳಿಗೆ... ಹೀಗೆ ನಾನಾ ಉದ್ದೇಶಗಳಿಗಾಗಿ ಆಗಿರುವ ಹಾನಿಯು ಲೆಕ್ಕಕ್ಕೆ ಸಿಗುವುದಿಲ್ಲ. ಸಹ್ಯಾದ್ರಿಯೆಡೆಗೆ ನಾವು ತೋರಿರುವ ಉಗ್ರ ಕ್ರೌರ್ಯದ ಕಾರಣದಿಂದ ಇಂದು ಮುಂಗಾರು ಮಳೆಯೂ ಹಿಂದಿನಂತೆ ಆಗುತ್ತಿಲ್ಲ. ಮೇಘಸ್ಫೋಟ ಆಗುತ್ತಿದೆ. ನಿಯಮಿತವಾಗಿ ಮಳೆಗಾಲಕ್ಕೆ ಸೀಮಿತವಾಗಿದ್ದ ಮಳೆ ವರ್ಷಪೂರ್ತಿ ಸುರಿಯುತ್ತಿದೆ. ಹವಾಮಾನ ಬದಲಾಗಿದೆ, ಭೂಕುಸಿತಕ್ಕೂ ಕಾರಣವಾಗಿದೆ, ಕೃಷಿಕರ ಬದುಕು ತತ್ತರಿಸಿದೆ. ಪ್ರಕೃತಿಯ ಮೂಲಸ್ವರೂಪಕ್ಕೆ ಧಕ್ಕೆ ಮಾಡಿ ಅವೈಜ್ಞಾನಿಕವಾಗಿ ಏನನ್ನೇ ಮಾಡಿದರೂ ಅದರ ಘೋರ ಪರಿಣಾಮವನ್ನು ಅನುಭವಿಸಬೇಕಾದವರು ನಾವೇ ಎಂಬ ಕಿಂಚಿತ್ ಅರಿವೂ ನಮಗೆ ಮತ್ತು ನಮ್ಮನ್ನಾಳುವ ಅಧಿಕಾರಸ್ಥರಿಗೆ ಬರಲಿಲ್ಲವಲ್ಲ ಎಂಬುದು ವಿಪರ್ಯಾಸ.

ಪ್ರಾಕೃತಿಕ ಹಾನಿ ಮತ್ತು ಅದರಿಂದ ಆಗಿರುವ, ಆಗಬಹುದಾದ ಪ್ರತಿಕೂಲ ಪರಿಣಾಮಗಳ ಮೌಲ್ಯಮಾಪನ ಮಾಡುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೋತಿವೆ. ಅನೇಕ ಕಾಮಗಾರಿಗಳು ಪರಿಸರ ನಾಶಕ್ಕೆ ಕಾರಣವಾಗುತ್ತಿವೆ. ಅಭಿವೃದ್ಧಿಯ ಹೆಸರಿನಲ್ಲಿ ಸ್ವಂತಕ್ಕೆ ಏನೇನು ಮಾಡಿಕೊಳ್ಳಬಹುದು ಎಂಬ ಚಿಂತನೆಯಲ್ಲೇ ಮುಳುಗಿರುವ ರಾಜಕಾರಣಿಗಳು, ಭ್ರಷ್ಟತೆಯನ್ನೇ ಮೈತುಂಬಾ ಹೊದ್ದಿರುವ ಅಧಿಕಾರಿ ವರ್ಗದವರು ಪರಿಸರವನ್ನು ಹಾಳುಮಾಡುವಲ್ಲಿ ಮುಂಚೂಣಿಯಲ್ಲಿದ್ದಾರೆ. ಸಹ್ಯಾದ್ರಿಯ ದೇಹದ ಭಾಗವನ್ನು ಕೊಚ್ಚಿ, ರಕ್ತಸಿಕ್ತಗೊಳಿಸಿ ಮಾಡಿರುವ ಲೂಟಿ, ಮೂಲಸೌಕರ್ಯದ ಹೆಸರಿನಲ್ಲಿ ನಡೆಸಿರುವ ವಿಕೃತಿಗಳು ಒಂದೆರಡಲ್ಲ. ಸಹ್ಯಾದ್ರಿ ತಾಯಿಗೆ ಆಗಿರುವ ಗಾಸಿಯನ್ನು ನೋಡಿ ನಾವೆಲ್ಲ ಏನೂ ಮಾಡಲಾಗದೆ ಕೈಕಟ್ಟಿ ಕುಳಿತಿದ್ದೇವೆ, ಮೂಕರಾಗಿದ್ದೇವೆ. ಆಹಾರ, ಜಲ ಮತ್ತು ಉತ್ತಮ ಆರೋಗ್ಯವನ್ನು ಹೊಂದುವ ದಿಸೆಯಲ್ಲಿ ನಮ್ಮ ದೇಶಕ್ಕೆ ಪ್ರಕೃತಿ ಪುನಶ್ಚೇತನ ಕಾಯ್ದೆಯ ಅಗತ್ಯವಿದೆ ಮತ್ತು ಅದನ್ನು ಬಹಳ ಕಟ್ಟುನಿಟ್ಟಿನಿಂದ ಜಾರಿಗೆ ತರಬೇಕಿದೆ.



ಭೂಮಿತಾಯಿಯ ಅವನತಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಕೊಳ್ಳೆ ಹೊಡೆಯುವಿಕೆ ಭಾರತಕ್ಕೆ ಮಾತ್ರ ಸೀಮಿತವಾದ ಸಂಗತಿಯಲ್ಲ. ಅದು ವಿಶ್ವದಾದ್ಯಂತ ನಡೆಯುತ್ತಿದೆ. ನಮ್ಮ ದೇಶದ ಹಿಮಾಲಯ, ವಿಂಧ್ಯಾ, ಅರಾವಳಿ, ಪಶ್ಚಿಮ-ಪೂರ್ವಘಟ್ಟ ಪ್ರದೇಶಗಳ ಮಹತ್ವವೆಂದರೆ, ಅವು ಸಾಗರಪ್ರವಾಹವನ್ನು ನಿಯಂತ್ರಿಸುತ್ತವೆ. ಈ ಪರ್ವತಸಾಲುಗಳಿಗೆ ಸಂಬಂಧಿಸಿದಂತೆ ಸಣ್ಣ ವಿಕೃತಿ ನಡೆದರೂ ಅದರ ಪರಿಣಾಮಗಳು ಭೀಕರವಾಗಿರುತ್ತವೆ. ಇಂತಹ ಸಂಗತಿಗಳನ್ನು ಅರಿತುಕೊಂಡು ಐರೋಪ್ಯ ಒಕ್ಕೂಟವು ಈ ವರ್ಷ ಜಾರಿಗೆ ತಂದಿರುವ ಹೊಸ ಕಾನೂನು ಒಂದು ಮಾದರಿಯಾಗಿದೆ. ಮಾನವನಿರ್ಮಿತ ವಿಪತ್ತುಗಳನ್ನು ನಿಗ್ರಹಿಸಿ ಪ್ರಕೃತಿಯನ್ನು ಯಥಾಸ್ಥಿತಿಯಲ್ಲಿ ಉಳಿಸುವಲ್ಲಿ ಯುರೋಪಿಯನ್ನರು ಅನುಷ್ಠಾನಕ್ಕೆ ತಂದಿರುವ ಈ ಕಾನೂನು ಒಂದು ಉತ್ತಮ ಉಪಕ್ರಮ. ನಮ್ಮಲ್ಲೂ ಇಂತಹದ್ದೊಂದು ಕಾನೂನಿನ ಅಗತ್ಯವಿದೆ. ಪ್ರಕೃತಿಯ ಪುನಶ್ಚೇತನ ಎಂದರೆ, ಈಗ ಆಗಿರುವ ವಿಕೃತಿಗಳನ್ನು ಸರಿಪಡಿಸುವುದರ ಜೊತೆಗೆ ಇನ್ನು ಮುಂದೆ ಯಾವುದೇ ಪರಿಸರಹಾನಿ ಆಗದಂತೆ ಕ್ರಮ ವಹಿಸುವುದು.

ಈಗ ಆಗಿರುವ ಪ್ರಕೃತಿ ಹಾನಿಯ ಶೇ 20ರಷ್ಟನ್ನು 2030ರ ವೇಳೆಗೆ ಸರಿಪಡಿಸುವುದು ಮತ್ತು 2050ರ ವೇಳೆಗೆ ಶೇ 50ರಷ್ಟನ್ನು ಸರಿಪಡಿಸಿ ಪುನಶ್ಚೇತನಗೊಳಿಸುವುದು. ಇದು ಒಕ್ಕೂಟ ಹಾಕಿಕೊಂಡಿರುವ ಗುರಿ. ನಮ್ಮ ದೇಶದಲ್ಲೂ ಇಂತಹದ್ದೊಂದು ಗುರಿ ಹಾಕಿಕೊಂಡು ಸಾಗುವ ಮೂಲಕ, ಈಗಾಗಲೇ ಸಕಲ ಚರಾಚರ ಜೀವಜೀವಿಗಳಿಗೆ ಆಗಿರುವ ಹಾನಿಯನ್ನು ಸರಿಪಡಿಸುವುದು ಸರ್ಕಾರ ಮತ್ತು ನಮ್ಮೆಲ್ಲರ ಜವಾಬ್ದಾರಿ.

ಇತ್ತೀಚಿನ ದಶಕಗಳಲ್ಲಿ ಆಗಿರುವ ಪರಿಸರ ಹಾನಿಯ ಪ್ರಮಾಣ ಗಂಭೀರ ಸ್ವರೂಪದ್ದಾಗಿದ್ದು, ಇದು ಹೀಗೆಯೇ ಮುಂದುವರಿದಲ್ಲಿ, ಮುಂಬರುವ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಲಿದೆ.

ನಮ್ಮ ದೇಶದಲ್ಲಿ ‘ಗ್ರೀನ್ ಇಂಡಿಯಾ’ ಎಂಬ ಘೋಷವಾಕ್ಯ ತುಂಬಾ ಜನಪ್ರಿಯ. ಪ್ರಧಾನಮಂತ್ರಿ ಕೃಷಿ ಯೋಜನೆ, ಸಮಗ್ರ ಪಶ್ಚಿಮಘಟ್ಟ ಪುನಶ್ಚೇತನ ಯೋಜನೆ ಎಲ್ಲವೂ ಬರೀ ಕಾಗದ, ಕಡತಗಳಿಗೆ ಸೀಮಿತವಾಗಿರುವುದನ್ನು ನಾವೆಲ್ಲ ಕಾಣುತ್ತಿದ್ದೇವೆ. ನಮ್ಮಲ್ಲಿ ಆಗಿರುವ ಪ್ರಕೃತಿಹಾನಿಯನ್ನು ತಡೆಗಟ್ಟಲು ಬಲವಾದ ಕಾಯ್ದೆ ಬೇಕು, ಅದರ ಮೂಲಕ ವಾರ್ಷಿಕ ಗುರಿಗಳನ್ನು ನಿಗದಿಪಡಿಸಿ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕಿದೆ. ನದಿಗಳು, ಪರ್ವತಗಳು, ನೈಸರ್ಗಿಕ ಅರಣ್ಯಗಳನ್ನು ಕಾಪಾಡುವ, ಅವುಗಳನ್ನು ಪುನಶ್ಚೇತನಗೊಳಿಸುವ ಕೆಲಸ ಆದ್ಯತೆಯ ಮೇಲೆ ನಡೆಯಬೇಕಿದೆ.

ಇಂತಹದ್ದೊಂದು ಕ್ರಮ ಕಟ್ಟುನಿಟ್ಟಾಗಿ ಜಾರಿಗೆ ಬರದೇ ಇದ್ದಲ್ಲಿ, ನಮ್ಮ ಪ್ರಾಕೃತಿಕ ಸಂಪತ್ತನ್ನು ಉಳಿಸಿಕೊಳ್ಳುವುದು, ಮುಂದಿನ ಪೀಳಿಗೆಯ ಬದುಕು ಹಸನಾಗುವಂತೆ ನೋಡಿಕೊಳ್ಳುವುದು ಸಾಧ್ಯವಿಲ್ಲ. ವಿಶ್ವದ ಅತ್ಯಂತ ವಿಶಿಷ್ಟ ಜೈವಿಕ ವೈವಿಧ್ಯ ಪ್ರದೇಶವಾದ ಸಹ್ಯಾದ್ರಿ ಉಳಿಯಬೇಕು. ಆ ದಿಸೆಯಲ್ಲಿ ಕಾರ್ಯಪ್ರವೃತ್ತರಾಗುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಚುರುಮುರಿ

ನೋಟಿಸ್ ನೋಟಿಸ್!

• ಆನಂದ

ಅಕ್ರಮ ಕಟ್ಟಡಗಳ ವಿರುದ್ಧ ಕ್ರಮ ತಿಳಿಯಲು ಬಿಬಿಎಂಪಿ ಕಚೇರಿಗೆ ಹೋದೆ. ಸಂಬಂಧಪಟ್ಟ ಅಧಿಕಾರಿಗಳು ಅದೃಷ್ಟವಶಾತ್ ಕಚೇರಿಯಲ್ಲೇ ಇದ್ದರು. ಯಾರೂ ಮಾಮೂಲಿ ವಸೂಲಿಗೆಂದು ರೌಂಡ್ಸ್ ಹೋಗಿರಲಿಲ್ಲ.

‘ಅಕ್ರಮ ಕಟ್ಟಡ ಮೇಲೆ ಬರುತ್ತಿದ್ದಂತೆ ಎಚ್ಚರಗೊಂಡು ಮಾಲೀಕನಿಗೆ ನೋಟಿಸ್ ಕೊಡುತ್ತೇವೆ’ ಎಂದರು ಹಿರಿಯ ಅಧಿಕಾರಿಯೊಬ್ಬರು.

‘ಪಾಯ ಹಾಕುವುದನ್ನೇ ತಡೆಯಬಹುದಲ್ಲವೇ?’

‘ಕಟ್ಟಡ ಎಷ್ಟು ದೊಡ್ಡದಿರುತ್ತದೆ ಎಂದು ತಿಳಿಯಬೇಕಾದರೆ ಅದು ಮೇಲೇಳಲು ಸಮಯ ಕೊಡಬೇಕು. ವಾಚ್ ಮಾಡ್ತಾ ಇರ್ತೇವೆ’.

‘ಮತ್ತೆ ನಿಮ್ಮ ನೋಟಿಸ್?’

‘ಅದು ಮಾಮೂಲಿ. ಅದಕ್ಕೆ ಅವನು ಹೆದರಲ್ಲ. ಗೋಡೆಗಳು ಮೇಲೇಳುತ್ತಿದ್ದಂತೆ ಇನ್ನೊಂದು ನೋಟಿಸ್ ಕೊಡ್ತೇವೆ. ಮೊದಲನೇ ನೋಟಿಸ್‌ಗೇ ಮಾಮೂಲು ಕೊಟ್ಟಿದ್ದೆ, ಈಗ ಇನ್ನೊಂದು ನೋಟಿಸೇಕೆ ಎಂದು ಕೇಳ್ತಾನೆ’.

‘ಕರೆಕ್ಟ್ ಅವನು ಕೇಳಿದ್ದು’.

‘ಅದಕ್ಕೆ ನಾವು, ನೀನು ಕಟ್ತಾ ಇರು, ನೋಟಿಸ್ ಕೊಡ್ತಾ ಇರ್ತೇವೆ. ಇದೆಲ್ಲಾ ಮಾಮೂಲು ಅಂತ ಹೇಳ್ತೀವಿ. ಮೂರು ಅಂತಸ್ತು ಮೇಲೆ ಬಂದ ಮೇಲೆ, ಇನ್ನೂ ಎಷ್ಟು ಅಂತಸ್ತು ಕಟ್ತೀಯ ಅಂತ ಕೇಳ್ತೀವಿ. ಪ್ಲಾನ್ ಪ್ರಕಾರ ಎರಡು, ಈಗ ಮೂರಾಗಿದೆ. ಇನ್ನೆರಡಕ್ಕೆ ಪ್ಲಾನ್ ಆಗಿದೆ. ದೇವರು ಮನಸ್ಸು ಮಾಡಿದರೆ ಆರನೇ ಅಂತಸ್ತು ಮೇಲೇಳುತ್ತೆ ಅಂತಾನೆ. ಆದರೆ ನಾವು ಅವನ ಮಾತಿಗೆ ಕೇರ್ ಮಾಡದೆ ಇನ್ನೊಂದು ನೋಟಿಸ್ ಇಶ್ಯೂ ಮಾಡ್ತೀವಿ’.

‘ಕೆಲಸ ನಿಲ್ಲುತ್ತಾ?’

‘ಇಲ್ಲ, ಅಷ್ಟೊತ್ತಿಗೆ ಬಿಲ್ಡಿಂಗ್ ವಾಲುತ್ತೆ. ಎಲ್ಲರೂ ಹೋ! ಅಂತಾರೆ. ಆಗ ನಾವು ಇನ್ನಷ್ಟು ಎಚ್ಚರಗೊಂಡು ಅವನ ಖರ್ಚಿನಲ್ಲೇ ಕಟ್ಟಡ ನೆಲಸಮ ಮಾಡೋದಿಕ್ಕೆ ಹೇಳ್ತೇವೆ’.

‘ಅಕ್ರಮ ಕಟ್ಟಡಗಳ ವಿರುದ್ಧ ಹೊಸ ಕಠಿಣ ಕಾನೂನು ತರ್ತೀವಿ ಅಂತ ಸಿಎಂ ಹೇಳಿದಾರಲ್ಲ?’

‘ರಂಗೋಲಿ ಕೆಳಗೆ ನುಸಿಯೋರು ಯಾವಾಗ್ಲೂ ಇದ್ದೇ ಇರ್ತಾರೆ, ಅಧಿಕಾರಸ್ಥರು ಬದಲಾಗಬಹುದು ಅಷ್ಟೆ’.

ಸಂಗತ

ಗಣಿತ ಲೋಕದ ಕನ್ನಡ ಜಾಣರು

ಕನ್ನಡನಾಡು ಕಂಡ ಅಚ್ಚುಮೆಚ್ಚಿನ ಗಣಿತ ಅಧ್ಯಾಪಕರು, ಕ್ಲಿಷ್ಟಕರವೆನ್ನಿಸಿದ್ದ ಗಣಿತವನ್ನು ಸರಳವಾಗಿ ವಿದ್ಯಾರ್ಥಿಗಳಿಗೆ ಉಣಬಡಿಸಿದ ಪರಿಚಾರಕರು

• ಬಿ.ಎಸ್.ಭಗವಾನ್

ಗಣಿತ ಜಗತ್ತಿಗೆ ಪ್ರಾಚೀನ ಭಾರತೀಯರ ಕೊಡುಗೆ ಬಹು ದೊಡ್ಡದು. ಅಮೆರಿಕದ ಪ್ರೊ. ಜಿ.ಬಿ.ಹಾಲ್‌ಸ್ಟೆಡ್ ಎಂಬ ವಿದ್ವಾಂಸ ಉಲ್ಲೇಖಿಸಿದಂತೆ, ಪಿಂಗಳನು ‘ಛಂದಃಸೂತ್ರ’ ರಚಿಸುವ ಕಾಲಕ್ಕಾಗಲೇ ಅಂದರೆ ಕ್ರಿ.ಪೂ. 200ರ ಸುಮಾರಿಗೆ ಭಾರತದಲ್ಲಿ ‘ಸೊನ್ನೆ’ ಬಳಕೆಯಲ್ಲಿತ್ತು. ಕರ್ನಾಟಕದ ಗಣಿತ ಸಾಧಕರಲ್ಲಿ ಮಹಾವೀರಾಚಾರ್ಯ ಹಾಗೂ ಭಾಸ್ಕರಾಚಾರ್ಯ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಬೀಜಗಣಿತ, ಜ್ಯಾಮಿತಿಯಲ್ಲಿ ಮಹಾವೀರರು ಅಪ್ರತಿಮ ಪ್ರತಿಭೆ ಮೆರೆದರು. ಅವರ ಕಾಲ ಕ್ರಿ.ಶ. 800– 870.

ಮೈಸೂರಿನಲ್ಲಿ ಜನಿಸಿದ್ದ ಮಹಾವೀರಾಚಾರ್ಯರು ಇಂದಿನ ಕಲಬುರಗಿಯಲ್ಲಿ ಇದ್ದರೆಂದು ಹೇಳಲಾಗಿದೆ. ಕ್ರಿ.ಶ. 850ರ ಸುಮಾರಿನಲ್ಲಿ ಮಹಾವೀರರು ‘ಗಣಿತ ಸಾರಸಂಗ್ರಹ’ ಎಂಬ ಗ್ರಂಥವನ್ನು ರಚಿಸಿದ್ದು, ಇದು ಗಣಿತಕ್ಕೇ ಸೀಮಿತಗೊಂಡ ಅತಿ ಪ್ರಾಚೀನ ಕೃತಿ. ಗ್ರಂಥದ ಆರಂಭದಲ್ಲಿ, ಗಣಿತ ದಿಗ್ಗಜರಾದ ಆರ್ಯಭಟ, ದಶಮಾಂಶ ಪದ್ಧತಿಯ ಜನಕ ಸೌರಾಷ್ಟ್ರದ ಮೊದಲನೇ ಭಾಸ್ಕರ ಮತ್ತು ಬ್ರಹ್ಮಗುಪ್ತರನ್ನು ಅವರು ಸ್ಮರಿಸಿರುವುದು ಮುಖ್ಯವಾಗುತ್ತದೆ. ಗೋಳದ ವಿಸ್ತೀರ್ಣ, ಗಾತ್ರ ಮತ್ತು ಒಂದು ಸಂಖ್ಯೆಯ ಘನಮೂಲವನ್ನು ಲೆಕ್ಕಹಾಕುವ ವಿಧಾನಗಳು, ವರ್ಗಸಮೀಕರಣಗಳನ್ನು ಪರಿಹರಿಸುವ ಬಗೆಗಳು ವಿಶೇಷವಾಗಿ ಆಸಕ್ತಿ ಹುಟ್ಟಿಸುತ್ತವೆ. ಸಮಕೋನ ತ್ರಿಭುಜದ ಗುಣವನ್ನು ಆಧಾರವಾಗಿ ಇಟ್ಟುಕೊಂಡು ಬೀಜಗಣಿತವನ್ನು ಜ್ಯಾಮಿತಿಯೊಂದಿಗೆ ಅನನ್ಯವಾಗಿ ಬೆಸೆದ ಹೆಗ್ಗಳಿಕೆ ಮಹಾವೀರರದು.

1847ರಲ್ಲಿ ಫ್ರಾನ್ಸ್ ದೇಶದ ಲೂಯಿಸ್ ಕೌಚಿ ಎಂಬ ಗಣಿತಜ್ಞನು ಮಹಾವೀರಾಚಾರ್ಯರಿಂದ ಪ್ರಭಾವಿತನಾಗಿ ಕಾಲ್ಪನಿಕ ಸಂಖ್ಯೆಗಳ ಸಿದ್ಧಾಂತಗಳಿಗೆ ಬುನಾದಿ ಹಾಕಿದ. ಅಂತೆಯೇ ಲಘುತಮ ಸಾಮಾನ್ಯ ಅಪವರ್ತ್ಯ ಕಂಡುಹಿಡಿಯುವ ತಂತ್ರಗಳು, ಕ್ರಮಯೋಜನೆ ಮತ್ತು ವಿಕಲ್ಪಗಳು (permutations and combinations) ಮಹಾವೀರರ ಶೋಧನೆಗಳು. 15ನೇ ಶತಮಾನದ ತನಕವೂ ಯುರೋಪ್‌ಗೆ ಇವು ಪರಿಚಿತವಾಗಿರಲಿಲ್ಲ. ‘ಗಣಿತದ ರಾಜ’ ಎಂದೇ ಪ್ರಶಂಸಿಸಲ್ಪಡುವ ಸ್ವಿಸ್ ದೇಶದ ಲಿಯೊನಾರ್ಡ್ ಆಯ್ಲರ್ ಎಂಬ ಗಣಿತಜ್ಞ ಕೂಡ ಮಹಾವೀರರ ಪ್ರಭಾವಕ್ಕೆ ಒಳಗಾಗಿದ್ದ ಎನ್ನುವುದು ಅಚ್ಚರಿಯ ಸಂಗತಿ.

ಗ್ರೀಕರಿಗೂ ಮುನ್ನ ದೀರ್ಘವೃತ್ತದ ವಿಸ್ತೀರ್ಣ, ಸುತ್ತಳತೆ, ಆ ಸಂಬಂಧಿತ ಸೂತ್ರಗಳನ್ನು ಪಡೆದ ಹಿರಿಮೆ ಕನ್ನಡಕ್ಕೆ ಸಂದಿದ್ದು ಸಾಮಾನ್ಯ ಸಂಗತಿಯಲ್ಲ. ಒಂದು ಸಂಖ್ಯೆಯನ್ನು ಸೊನ್ನೆಯಿಂದ ಗುಣಿಸಿದರೆ ಫಲ ಸೊನ್ನೆ, ಸಂಖ್ಯೆಗೆ ಸೊನ್ನೆ ಸೇರಿಸಿದರೆ ಅದು ಅಬಾಧಿತ ಎಂದಿರುವುದು ಸರಿಯೆ. ಆದರೆ ಅವರು ಸಂಖ್ಯೆಯನ್ನು ಸೊನ್ನೆಯಿಂದ ಭಾಗಿಸಿದಾಗ ಸೊನ್ನೆ ಎಂದಿರುವುದು ದೋಷಯುಕ್ತ. ಬಹುಶಃ ಅನಿರ್ಧಾರಕ ಎನ್ನುವುದನ್ನು ಅವರು ‘ಸೊನ್ನೆ’ ಎಂದಿರಬಹುದು. ಗಣಿತ ವಿದ್ವಾಂಸರಾಗಿದ್ದ ಎರಡನೇ ಭಾಸ್ಕರರು (1114– 1185) ಭಾಸ್ಕರಾಚಾರ್ಯರು ಎಂದೇ ಇತಿಹಾಸ ಪ್ರಸಿದ್ಧರು. ಖಗೋಳವಿಜ್ಞಾನದಲ್ಲೂ ನೈಪುಣ್ಯವಿದ್ದ ಅವರು ಇಂದಿನ ವಿಜಯಪುರ ಜಿಲ್ಲೆಯಲ್ಲಿ ಜನಿಸಿದವರು ಎನ್ನಲಾಗಿದೆ. ಸಂಖ್ಯಾಸಿದ್ಧಾಂತದಲ್ಲಿ ಅವರಿಗೆ ಅಪಾರ ಪರಿಶ್ರಮವಿತ್ತು. ‘ಸಿದ್ಧಾಂತ ಶಿರೋಮಣಿ’ ಗ್ರಂಥ ರಚಿಸಿದಾಗ ಅವರಿಗಿನ್ನೂ 36 ವರ್ಷ. ಈ ಕೃತಿಯಲ್ಲಿ ಲೀಲಾವತಿ, ಬೀಜಗಣಿತ, ಗೋಳಾಧ್ಯಾಯ ಮತ್ತು ಗ್ರಹಗಣಿತ ಎಂಬ ನಾಲ್ಕು ಭಾಗಗಳಿವೆ. ಲೀಲಾವತಿಯು ಭಾಸ್ಕರಾಚಾರ್ಯರ ಮಗಳು. ಅಕಾಲ ವೈಧವ್ಯ ಪ್ರಾಪ್ತವಾಗಿದ್ದ ಆಕೆಯ ಮನಸ್ಸನ್ನು ದುಃಖದಿಂದ ಬೇರೆಡೆಗೆ ತಿರುಗಿಸಲು ಭಾಸ್ಕರರು ಗಣಿತ ಹೇಳಿಕೊಟ್ಟರು. ಸಿದ್ಧಾಂತ ಶಿರೋಮಣಿಯಲ್ಲಿ ಶ್ಲೋಕರೂಪದ ಗಣಿತ ಸಮಸ್ಯೆಗಳು ಅತ್ಯಂತ ಸೊಗಸಾಗಿವೆ. ಗಣಿತ, ಸಾಹಿತ್ಯ, ಮನರಂಜನೆ– ಮೂರನ್ನೂ ಸಮನ್ವಯಿಸಿಕೊಂಡ ರಸದೌತಣವೇ ಒಂದೊಂದೂ.

ನ್ಯೂಟನ್ ಮತ್ತು ಲೆಬ್ನಿಜ್ ಇಬ್ಬರಿಗೂ ಮೊದಲು ‘ಭೇದಾತ್ಮಕ ಕಲನಶಾಸ್ತ್ರ’ (differential calculus) ಎಂಬ ಗಣಿತ ವಿಭಾಗವನ್ನು ಶೋಧಿಸಿದ ಭಾಸ್ಕರರ ಗಣಿತ ಕೈಂಕರ್ಯ ಬಹು ದೊಡ್ಡದು. ತ್ರಿಕೋನಾಮಿತಿಯಲ್ಲೂ ಅಪಾರ ಜ್ಞಾನ ಹೊಂದಿದವರು ಅವರು. ಖಗೋಳಶಾಸ್ತ್ರದ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಅವರು ತ್ರಿಕೋನಾಮಿತಿ ಬಳಸಿದ್ದು ಕನ್ನಡಿಗರ ಧೀಃಶಕ್ತಿಗೆ ಸಾಕ್ಷಿ. ಬ್ರಹ್ಮಗುಪ್ತರ ಗಣಿತ ಕಾಯಕವನ್ನು ಭಾಸ್ಕರರು ವಿಸ್ತರಿಸಿದರು. ಉಜ್ಜಯಿನಿಯ ಖಗೋಳ ವೀಕ್ಷಣಾಲಯದ ಮುಖ್ಯಸ್ಥರಾದರು. ಒಂದು ಸಂಖ್ಯೆಯ ವರ್ಗವೆಂದರೆ, ಗುಣಾಕಾರದ ಒಂದು ವಿಶಿಷ್ಟ ರೂಪ ಎಂದವರು ವ್ಯಾಖ್ಯಾನಿಸಿದರು. ಇಂದಿಗೆ ಅವರ ಗ್ರಹಿಕೆಗಳು ಅತಿ ಸರಳವೆನ್ನಿಸಬಹುದು. ಆದರೆ ಕ್ಯಾಲ್ಕ್ಯುಲೇಟರ್, ಲೇಖನಿಯ ಮಾತಿರಲಿ, ನಮೂದಿಸಲು ಕಾಗದವೂ ಇರದ ಕಾಲದಲ್ಲಿ ಇಷ್ಟೆಲ್ಲ ಚಿಂತನೆಗಳು, ನಿರ್ಣಯಗಳು ಸಾಧ್ಯವಾದವಲ್ಲ, ಅದಲ್ಲವೇ ವಿಸ್ಮಯ?



‘ಒಂದು ಗ್ರಹದ ಚಲನೆ ತೀವ್ರಗೊಂಡ ಹಂತದಲ್ಲಿ ಗ್ರಹ ಸ್ಥಗಿತವೇ ಆಗಿರುತ್ತದೆ’ ಎನ್ನುವ ಭಾಸ್ಕರರ ಮಾರ್ಮಿಕ ಪರಿಭಾಷೆ ಒಬ್ಬ ನುರಿತ ಖಗೋಳಮತಿಗಷ್ಟೇ ಸಾಧ್ಯ. ಕ್ರಮಯೋಜನೆ ಮತ್ತು ವಿಕಲ್ಪಗಳಿಗೆ ಅವರು ‘ಅಂಕ ಪಾಶ’ ಎಂಬ ಸುಂದರ ಹೆಸರನ್ನು ಕೊಟ್ಟಿದ್ದಾರೆ.

ಕೆ.ವೆಂಕಟಾಚಲ ಅಯ್ಯಂಗಾರ್, ಸಿ.ಎನ್.ಶ್ರೀನಿವಾಸ ಅಯ್ಯಂಗಾರ್, ಟಿ.ಎಸ್.ನಂಜುಂಡಯ್ಯ, ಪ್ರೊ. ಲ.ನ. ಚಕ್ರವರ್ತಿ ಅವರಂತಹ ಮಹನೀಯರು ಕನ್ನಡನಾಡು ಕಂಡ ಅಚ್ಚುಮೆಚ್ಚಿನ ಗಣಿತ ಅಧ್ಯಾಪಕರು. ಕ್ಲಿಷ್ಟಕರ ಎನ್ನಿಸಿದ್ದ ಗಣಿತವನ್ನು ಸರಳವಾಗಿ ವಿದ್ಯಾರ್ಥಿಗಳಿಗೆ ಉಣಬಡಿಸಿದ ಪರಿಚಾರಕರು. ದಂತಗೋಪುರದಲ್ಲಿ ವಿಜೃಂಭಿಸದೆ ತಮ್ಮ ಸಮರ್ಥ ಬೋಧನೆಯಿಂದ ಶಿಷ್ಯವತ್ಸಲ ಗುರುವರ್ಯರಾಗಿದ್ದ ಅವರು ಗಣಿತಜ್ಞರಷ್ಟೇ ಮಾನ್ಯರು.

ವಾಚಕರ ವಾಣಿ

ವಕ್ಫ್ ವಿವಾದ: ರಾಜಕೀಯ ಮೇಲಾಟ ಸಲ್ಲದು

ಇಬ್ಬರ ಜಗಳದಲ್ಲಿ ಕೂಸು ಬಡವಾಯಿತು ಎಂಬ ಮಾತಿನಂತೆ, ರಾಜ್ಯದಲ್ಲಿ ಇಷ್ಟು ದಿನ ಮುಡಾ ಹಗರಣ, ಈಗ ವಕ್ಫ್ ಆಸ್ತಿ ಗೊಂದಲ. ಇದರಿಂದ ನೂರಾರು ರೈತರು, ಜನಸಾಮಾನ್ಯರು ಆತಂಕಕ್ಕೆ ಒಳಗಾಗಿದ್ದಾರೆ. ರಾಜಕಾರಣಿಗಳು ಅವರ ಸಮಸ್ಯೆಗಳನ್ನು ಪರಿಹರಿಸುವುದರ ಬದಲು ಇದನ್ನೇ ಉಪಚುನಾವಣೆಯ ಅಸ್ತ್ರವನ್ನಾಗಿ ಬಳಸಿಕೊಂಡು ಒಬ್ಬರ ಮೇಲೊಬ್ಬರು ಆರೋಪ, ಪ್ರತ್ಯಾರೋಪ ಮಾಡುತ್ತಿದ್ದಾರೆ. ಹೀಗೆ ರಾಜಕೀಯ ಹಿತಾಸಕ್ತಿಗಾಗಿ ಜನರಲ್ಲಿ ಗೊಂದಲ ಸೃಷ್ಟಿಸಿ ಸಾಮಾಜಿಕ ವಾತಾವರಣ ಕೆಡಿಸುವುದು ಸರಿಯಲ್ಲ.

ಜನರ ಪಹಣಿಯಲ್ಲಿ ಏಕಾಏಕಿ ‘ವಕ್ಫ್ ಆಸ್ತಿ’ ಎಂದು ಹೇಗೆ ಬಂತು ಎಂಬುದರ ಬಗ್ಗೆ ಕೂಡಲೇ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು. ಎಲ್ಲಕ್ಕಿಂತಲೂ ಮುಖ್ಯವಾಗಿ ಶೇಕಡ 99ರಷ್ಟು ನಾಗರಿಕರಿಗೆ ವಕ್ಫ್ ಕಾನೂನು ಎಂದರೇನು ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿಯಿಲ್ಲ. ಹಾಗಾಗಿ, ಇನ್ನು ಮುಂದೆ ಆಸ್ತಿ ಖರೀದಿಸುವ ಮುನ್ನ ವಹಿಸಬೇಕಾದ ಎಚ್ಚರಿಕೆಯ ಕ್ರಮಗಳ ಬಗ್ಗೆ ಸಾರ್ವಜನಿಕ ಪ್ರಕಟಣೆ ನೀಡಬೇಕು. ಜೊತೆಗೆ ಆಸ್ತಿ ನೋಂದಣಿ ಸಮಯದಲ್ಲಿ ಆ ಆಸ್ತಿಯು ವಕ್ಫ್ ಹೆಸರಿನಲ್ಲಿ ಇದೆಯೇ ಇಲ್ಲವೇ ಎಂಬುದನ್ನು ಸಬ್ ರಿಜಿಸ್ಟ್ರಾರ್ ಸೂಕ್ತವಾಗಿ ಪರಿಶೀಲಿಸಿ ನೋಂದಣಿ ಮಾಡಿಸಬೇಕು.

ಸುರೇಂದ್ರ ಪೈ, ಭಟ್ಕಳ

ಕನ್ನಡದ ಶಾಲು...

ದಿನವೂ ಬಳಸುತ್ತಿದ್ದರೆ
ಸರಾಗವಾಗಿ ಬಾಯಿಗೆ ಬರುವವು
ಕನ್ನಡದ ಪದಗಳು...
ಇಲ್ಲದಿದ್ದರೆ ಹುಡುಕಿದಂತೆ
ವರ್ಷಕ್ಕೊಮ್ಮೆ ಹಾಕಿಕೊಳ್ಳುವ
ಕನ್ನಡದ ಶಾಲು!

ವಿಜಯಮಹಾಂತೇಶ್ ಬಂಗಾರಗುಂಡ್
ಬಾಗಲಕೋಟೆ

ಉಕ್ಕಿಹರಿದ ಕನ್ನಡಪ್ರೇಮ!

ಕರ್ನಾಟಕ ರಾಜ್ಯೋತ್ಸವದ ದಿನವಾದ ಶುಕ್ರವಾರ ಬೆಳಿಗ್ಗೆಯಿಂದಲೇ ವಾಟ್ಸ್‌ಆ್ಯಪ್ ಸ್ಟೇಟಸ್ ವಿಭಾಗವು ಕನ್ನಡ ಧ್ವಜ, ಕನ್ನಡ ಗೀತೆ, ಕನ್ನಡ ಸಿನಿಮಾ ಕ್ಲಿಪ್‌ಗಳಿಂದ ಹಾಗೂ ಕನ್ನಡ ಅಭಿಮಾನ ವ್ಯಕ್ತಪಡಿಸುವ ತರಹೇವಾರಿ ಸಂದೇಶಗಳಿಂದ ತುಂಬಿಹೋಗಿತ್ತು. ಕನ್ನಡಪ್ರೇಮ ಉಕ್ಕಿ ಹರಿದಿತ್ತು!

ನಂತರ ಸೂಕ್ಷ್ಮವಾಗಿ ಗಮನಿಸಿದೆ. ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗೆ ಸೇರಿಸಿದವರು, ಸದಾ ಕಾಲ ಹಿಂದಿ ಸೇರಿ ಅನ್ಯ ಭಾಷೆಗಳ ಸಿನಿಮಾಗಳನ್ನೇ ನೋಡುತ್ತಾ, ಅವುಗಳನ್ನು ಹಾಡಿ ಹೊಗಳುತ್ತಾ, ಕನ್ನಡ ಸಿನಿಮಾಗಳನ್ನು ಕಡೆಗಣಿಸುವ ಮಂದಿ, ಕನ್ನಡವನ್ನು ಅಲ್ಪ ಸ್ವಲ್ಪವಾದರೂ ಮಾತನಾಡುವ ಹೊರ ರಾಜ್ಯದ ವ್ಯಾಪಾರಿಯೊಂದಿಗೆ ಹಿಂದಿಯಲ್ಲಿಯೇ ಮಾತನಾಡುವ ಧಿಮಾಕಿನ ಮಂದಿಯೆಲ್ಲ ‘ಕನ್ನಡ’ದ ಬಗ್ಗೆ ಸ್ಟೇಟಸ್ ಹಾಕಿಕೊಂಡಿದ್ದರು. ದುರಂತವೆಂದರೆ ಇದೇ ಅಲ್ಲವೆ?

ಇಂದಿನ ಬಹುತೇಕ ದಿನಾಚರಣೆಗಳು ವಾಟ್ಸ್‌ಆ್ಯಪ್, ಫೇಸ್‌ಬುಕ್ ಸ್ಟೇಟಸ್‌ಗಳಿಗೆ ಮಾತ್ರ ಸೀಮಿತವಾಗಿವೆ. ಅವುಗಳ ನಿಜವಾದ ಮಹತ್ವ ಅರಿತು ಪಾಲಿಸುವಲ್ಲಿ ನಾವು ವಿಫಲರಾಗಿದ್ದೇವೆ.

ಬಸನಗೌಡ ಪಾಟೀಲ, ಯರಗುಪ್ಪಿ

ವೇಗದ ಬೌಲಿಂಗ್‌ಗೆ ನೆರವಾಗುವ ಪಿಚ್ ಬೇಡವೇಕೆ?

ತವರಿನ ಟೆಸ್ಟ್ ಪಂದ್ಯಗಳಲ್ಲಿ ನಿಧಾನಗತಿಯ ಸ್ಪಿನ್ ಬೌಲಿಂಗ್ ಪಿಚ್‌ಗಳಲ್ಲಿ ಭಾರತವು ನ್ಯೂಜಿಲೆಂಡ್ ವಿರುದ್ಧ ತಡವರಿಸುತ್ತಿದೆ. ನೆನಪಿರಲಿ, ಮುಂಬರುವ ಆಸ್ಟ್ರೇಲಿಯಾ ಪ್ರವಾಸವು ವೇಗದ, ಬೌನ್ಸಿ ಪಿಚ್‌ಗಳಲ್ಲಿ ನಡೆಯುತ್ತದೆ. ಹೀಗಾದರೆ ತಂಡ ಅಲ್ಲಿಯೂ ಬೆಲೆ ತೆರಬೇಕಾಗಬಹುದು. ನಮ್ಮಲ್ಲಿಯೂ ವೇಗದ ಬೌಲರ್‌ಗಳಿದ್ದಾರೆ. ಆದರೆ ವೇಗದ ಬೌಲಿಂಗ್‌ಗೆ ನೆರವಾಗುವ ಪಿಚ್‌ಗಳು ಏಕೆ ಬೇಡ?

ಗುರು ಜಗಳೂರು, ಹರಿಹರ

ಪಟಾಕಿ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸಿ

ಪಟಾಕಿ ಉದ್ಯಮದಲ್ಲಿ ತೊಡಗಿರುವ ಕಾರ್ಮಿಕರ ಕಲ್ಯಾಣವನ್ನು ಗಮನದಲ್ಲಿ ಇಟ್ಟುಕೊಂಡು ದೀಪಾವಳಿಯಂದು ಬಹಳಷ್ಟು ಪ್ರಮಾಣದಲ್ಲಿ ಪಟಾಕಿಗಳನ್ನು ಸಿಡಿಸಿ, ಮಾಲಿನ್ಯದ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಬೇಡಿ ಎಂದು ತಮಿಳುನಾಡಿನ ಬಿಜೆಪಿ ನಾಯಕ ಕೆ.ಅಣ್ಣಾಮಲೈ ಅವರು ಹೇಳಿರುವುದನ್ನು (ಪ್ರ.ವಾ., ಅ. 29) ಓದಿ ನಗಬೇಕೋ ಅಳಬೇಕೋ ತಿಳಿಯದಾಯಿತು. ಮಾಲಿನ್ಯವನ್ನು ಹಗುರವಾಗಿ ಪರಿಗಣಿಸಿ, ಪಟಾಕಿ ಕಾರ್ಮಿಕರು ಮತ್ತು ಮಾರಾಟಗಾರರ ಕಲ್ಯಾಣದ ಹೆಸರಿನಲ್ಲಿ ಹೆಚ್ಚು ಹೆಚ್ಚು ಪಟಾಕಿಗಳನ್ನು ಸುಡುವಂತೆ ಕರೆ ನೀಡಿರುವ ಅಣ್ಣಾಮಲೈ ಅವರು ಪಟಾಕಿ ಸುಡುವಾಗ ಇತರರಿಗೆ ತೊಂದರೆ ಆಗದಂತೆ ಪಟಾಕಿ ಸುಡಬೇಕೆಂದಿರುವುದು ಹಾಸ್ಯಾಸ್ಪದವಾಗಿದೆ. ಬಹುಶಃ ಹಸಿರು ಪಟಾಕಿಗಳಿರುವಂತೆ ನಿಶ್ಶಬ್ದವಾಗಿ ಸಿಡಿಯುವ ಪಟಾಕಿಗಳಿವೆಯೋ ಏನೋ ಎಂದು ಚಿಂತಿಸುವಂತಾಗಿದೆ. ಪಟಾಕಿ ನಿಷೇಧಿಸಿದರೆ ಕಾರ್ಮಿಕರು ಹೊಟ್ಟೆಗಿಲ್ಲದೇ ಸಾಯಬೇಕೆ ಎಂದು ಹಲವರು ಪ್ರಶ್ನಿಸಬಹುದು. ಆದರೆ ದೇಹವೆಲ್ಲಾ ವಿವಿಧ ರಾಸಾಯನಿಕಗಳ ಲೇಪನವಾಗಿರುವಂತೆ ಕಾಣುವ ಪಟಾಕಿ ಕಾರ್ಮಿಕರ ಆರೋಗ್ಯವನ್ನು ಹಾಗೂ ಇದುವರೆಗೆ ಪಟಾಕಿ ತಯಾರಿಕೆ ಅಥವಾ ದಾಸ್ತಾನು ಮಾಡುವ ವೇಳೆ ದುರಂತ ಸಂಭವಿಸಿ ಸಜೀವವಾಗಿ ದಹನಗೊಂಡವರನ್ನು ಒಮ್ಮೆ ನೆನೆದಾಗ, ನಮ್ಮ ಕ್ಷಣಿಕ ಸಂತಸಕ್ಕಾಗಿ ಎಷ್ಟೋ ಜನರ ಜೀವ-ಜೀವನವನ್ನೇ ಬಲಿ ಕೊಡುತ್ತಿದ್ದೇವೆ ಅನ್ನಿಸುತ್ತದೆ. ಈ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ.

ಪಟಾಕಿ ಕಾರ್ಮಿಕರ ಬಗ್ಗೆ ನಿಜವಾದ ಕಾಳಜಿ ಇರುವವರು ಮೊದಲು ಅವರಿಗೆ ಪುನರ್ವಸತಿ ಕಲ್ಪಿಸಿ, ಉತ್ತಮ ಶಿಕ್ಷಣ ಅಥವಾ ಇತರ ಉದ್ಯೋಗದ ತರಬೇತಿ ನೀಡುವ ಮಾರ್ಗೋಪಾಯಗಳನ್ನು ಒದಗಿಸಬೇಕು. ನಾವು ಪಟಾಕಿ ಸಿಡಿಸಿ ಖುಷಿಪಡುತ್ತೇವೆ, ನೀವು ನಮಗಾಗಿ ನಿಮ್ಮ ಆರೋಗ್ಯ, ಆಯುಷ್ಯ ಕಳೆದುಕೊಳ್ಳಿ ಎನ್ನುವುದು ಯಾವ ರೀತಿಯಲ್ಲೂ ನಮ್ಮ ಸಂಸ್ಕೃತಿಯಾಗಬಾರದು. ದೀಪಾವಳಿಯಂದು ಪಟಾಕಿ ಸುಡುವ ಸಂಸ್ಕೃತಿಯಿಂದ ಸಸಿ ನೆಡುವ ಸಂಸ್ಕೃತಿಯ ಕಡೆಗೆ ನಾವೆಲ್ಲ ಸಾಗಬೇಕಿದೆ. ಪ್ರತಿವರ್ಷ ಪಟಾಕಿ ಸುಡಲು ಹೋಗಿ ಎಷ್ಟೋ ಮಕ್ಕಳು ದೃಷ್ಟಿ ಕಳೆದುಕೊಳ್ಳುತ್ತಲೇ ಇದ್ದಾರೆ. ಇನ್ನಾದರೂ ಈ ಅವಾಂತರಕಾರಿ ಆಚರಣಾ ವಿಧಾನಗಳನ್ನು ಬಿಡಬೇಕಾಗಿದೆ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕನ್ನಡ ಸಂವಹನ ಮಾಧ್ಯಮವಷ್ಟೇ ಅಲ್ಲ; ಅದು ಬದುಕನ್ನು ಕಟ್ಟಿಕೊಡುವ ಜೀವಸೆಲೆ

ಕನ್ನಡ ನುಡಿಯ ವಿಶ್ವ

● ಬಿ.ಎ.ವಿವೇಕ ರೈ

ಕನ್ನಡದ ಮೊತ್ತಮೊದಲನೆಯ (ಕ್ರಿ.ಶ. 850) ಲಕ್ಷಣಗ್ರಂಥ 'ಕವಿರಾಜಮಾರ್ಗ'ದಲ್ಲಿ ಕನ್ನಡ ನಾಡು ಮತ್ತು ನುಡಿಯ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. 'ಕಾವೇರಿಯಿಂದಮ್ ಆ ಗೋದಾವರಿವರಮ್ ಇರ್ಪ ನಾಡು ಅದು ಆ ಕನ್ನಡದೊಳ್ ಭಾವಿಸಿದ ಜನಪದಮ್'. ಇದು ಕನ್ನಡನಾಡಿನ ವಿಸ್ತಾರ. ಅದರ ಒಳಗೆ 'ಕನ್ನಡದ ತಿರುಳ್' ಆಗಿರುವ ಪ್ರದೇಶದ ಬಗ್ಗೆ ಮಾರ್ಗಕಾರನ ನುಡಿ: 'ಅದರ ಒಳಗಮ್ ಕಿಸುವೊಳಲಾ ವಿದಿತ ಮಹಾ ಕೊಪಣ ನಗರದಾ ಪುಲಿಗೆರೆಯಾ ಸತ್ ಅಭಿಸ್ತುತ-ಮಪ್ಪ ಒಂಕುಂದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್'. ಮಾರ್ಗಕಾರನ ದೃಷ್ಟಿಯಲ್ಲಿ ಈಗಿನ ಪಟ್ಟದಕಲ್ಲು, ಕೊಪ್ಪಳ, ಲಕ್ಷ್ಮೇಶ್ವರ, ಒಕ್ಕುಂದಗಳ ನಡುವಣ ನಾಡಿನ ಒಳಗಿನ ನುಡಿ 'ಕನ್ನಡದ ತಿರುಳು'. ಆದಿಕವಿ ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ (10ನೇ ಶತಮಾನ) ಆತ ತನ್ನ ಕವಿತೆ 'ಸಾಜದ ಪುಲಿಗೆರೆಯ ತಿರುಳ ಕನ್ನಡದೊಳ್ ಪುದಿದ' ಎಂದು ಹೇಳಿಕೊಂಡಿದ್ದಾನೆ. ಪಂಪನಿಗೆ ಕೂಡಾ 'ಕನ್ನಡದ ತಿರುಳು' ಎನ್ನಿಸುವ ಪ್ರದೇಶ 'ಪುಲಿಗೆರೆ' (ಲಕ್ಷ್ಮೇಶ್ವರ). ತಾವು ನೆಲವೂರಿದ್ದ ಮತ್ತು ಪರಿಚಿತವಾಗಿದ್ದ ಪ್ರದೇಶದ ಕನ್ನಡನುಡಿಯನ್ನು ಮಾರ್ಗಕಾರ ಮತ್ತು ಪಂಪ 'ಕನ್ನಡದ ತಿರುಳ್' ಎಂದು ಪರಿಭಾವಿಸುವಾಗ ಕನ್ನಡನುಡಿಯನ್ನು ಒಂದು ಪ್ರದೇಶಕ್ಕೆ ಸೀಮಿತಗೊಳಿಸಿ ಪ್ರಮಾಣೀಕರಿಸುವ ಮನೋಧರ್ಮ-ವನ್ನು ಕಾಣಬಹುದು.

ಈ ನಿಲುವಿಗೆ ಪೂರಕವಾಗಿ ಕವಿರಾಜಮಾರ್ಗಕಾರನ ಒಂದು ಜನಪ್ರಿಯ ಹೇಳಿಕೆಯನ್ನು ಗಮನಿಸಬಹುದು: 'ದೋಸಮ್ ಇನಿತು ಎಂದು ಉದ್ಭಾಸಿಸಿ ತರಿಸಂದು ಕನ್ನಡಂಗಳೊಳ್ ಎಂದುಮ್ ವಾಸುಗಿಯುಮ್ ಅರಿಯಲಾರದೆ ಬೇಸರುಗುಮ್ ದೇಸಿ ಬೇರೆ ಬೇರೆ ಅಪ್ಪುದರಿಂ' (ಕನ್ನಡಗಳಲ್ಲಿ ದೇಸಿ ಬೇರೆಬೇರೆ ಆಗಿರುವುದರಿಂದ ಆದಿಶೇಷನು ಕೂಡ ದೋಷ ಈ ರೀತಿಯದೆಂದು ಸ್ಪಷ್ಟವಾಗಿ ಹೇಳಲಾಗದೆ ಬೇಸರ-ಗೊಳ್ಳುತ್ತಾನೆ).

ಕವಿರಾಜಮಾರ್ಗಕಾರನು 'ಕನ್ನಡಂಗಳ್' ಎಂದು ಕನ್ನಡ ನುಡಿಯ ಬಹುತ್ವವನ್ನು ಗುರುತಿಸಿ ಅದರ ದೇಸಿ ರೂಪಗಳ ವೈವಿಧ್ಯವನ್ನು ಗಮನಿಸಿ, ಅವನ್ನು 'ದೋಷ' ಎಂದು ಕರೆಯುತ್ತಾನೆ. ಆದರೆ, ವೈರುಧ್ಯವೆಂದರೆ ಅದೇ ಪದ್ಯದಲ್ಲಿ ಅವನು ಆದಿಪ್ರಾಸದ ಸಮರೂಪತೆಗಾಗಿ 'ದೋಷ' ಎಂಬ ಶಿಷ್ಟ ಪದದ ಬದಲು 'ದೋಸ' ಎಂಬ ದೇಸಿಪದವನ್ನು ಬಳಸುತ್ತಾನೆ. ಆದರೆ ಇನ್ನೊಂದು ಕಡೆ ಅವನೇ, 'ತಂತಮ್ಮ ನುಡಿಯೊಳ್ ಎಲ್ಲರ್ ಜಾಣರ್' ಎನ್ನುವ ಮೆಚ್ಚುಗೆಯ ಮಾತನ್ನೂ ಆಡುತ್ತಾನೆ.

ಕನ್ನಡ ನುಡಿಯಲ್ಲಿ 'ಬರಹದ ನುಡಿ' (ಮಾರ್ಗ) ಮತ್ತು 'ಆಡುನುಡಿ' (ದೇಸಿ) ಇವು ಕನ್ನಡನಾಡಿನ ಇತಿಹಾಸದ ಉದ್ದಕ್ಕೂ ಬಹುಮಟ್ಟಿಗೆ ಸಮಾನಾಂತರವಾಗಿ ಚಲಿಸಿವೆ. ಅನೇಕ ಬಾರಿ ಇವುಗಳ ನಡುವೆ ಕೊಡುಕೊಳೆ ನಡೆದಿವೆ. ಕವಿರಾಜಮಾರ್ಗ ಮತ್ತು ಪಂಪನ ಕಾವ್ಯಗಳ ಕಾಲದಲ್ಲಿ ನಡೆದ ಮಾರ್ಗ ದೇಸಿಗಳ ಸಂಘರ್ಷ ಮತ್ತು ಸಮನ್ವಯದ ಚರ್ಚೆಯಲ್ಲಿ ಅಂತಹ ಸೂಚನೆಗಳು ದೊರೆಯುತ್ತವೆ. 'ಆಡುನುಡಿಗಳು' ಸಾಹಿತ್ಯದ ರೂಪದಲ್ಲಿ 'ಗ್ರಾಂಥಿಕ ಭಾಷೆಗಳು' ಆಗುವ ಪ್ರಕ್ರಿಯೆ ಇಂದಿನವರೆಗೂ ನಡೆದಿದೆ.

ಭಾಷಾವಿಜ್ಞಾನಿಗಳು ಒಂದು ಭಾಷೆಯ ಒಳಗೆ ಕಾಣಿಸುವ ಭಿನ್ನತೆಗಳನ್ನು ಸ್ಥೂಲವಾಗಿ 'ಪ್ರಾದೇಶಿಕ ಉಪಭಾಷೆ' ಮತ್ತು 'ಸಾಮಾಜಿಕ ಉಪಭಾಷೆ' ಎಂದು ವರ್ಗೀಕರಣ ಮಾಡಿದರು. ಮುಂದೆ ಇದಕ್ಕೆ 'ವ್ಯಕ್ತಿ ಭಾಷೆ'ಯನ್ನು ಸೇರಿಸಿದರು. ಬಳಿಕ ಸಾಮಾಜಿಕ, ಸಾಂಸ್ಕೃತಿಕ ಮತ್ತು ಮನೋವೈಜ್ಞಾನಿಕ ಆಯಾಮಗಳಲ್ಲಿ ಚರ್ಚಿಸಿದರು. ಒಂದು ಭಾಷೆಯಲ್ಲಿ ಪ್ರಾದೇಶಿಕ ಭಿನ್ನತೆಗಳು ಕಾಣಿಸಿಕೊಳ್ಳಲು ಐತಿಹಾಸಿಕವಾಗಿ ಮೂರು ಅಂಶಗಳು ಕಾರಣವಾದುವು. ಇವು ಕನ್ನಡ ಭಾಷೆಗೂ ಅನ್ವಯ ಆಗುತ್ತವೆ. 1. ನೈಸರ್ಗಿಕ ಗಡಿರೇಖೆಗಳಾದ ಪರ್ವತ, ಬೆಟ್ಟ, ನದಿಗಳು ಸರೋವರಗಳು, ಅರಣ್ಯ ಮುಂತಾದವು. 2. ಸ್ಥಳೀಯ ರಾಜರು, ಸಾಮಂತರು, ಪಾಳೆಯಗಾರರು - ಇವರ ಆಳ್ವಿಕೆಯ ರಾಜಕೀಯ ಗಡಿರೇಖೆಗಳು. 3. ಕನ್ನಡ ನಾಡಿನ ಗಡಿಪ್ರದೇಶಗಳಲ್ಲಿ ಇರುವ ಕನ್ನಡೇತರ ಭಾಷೆಗಳ ಸಂಪರ್ಕದಿಂದ ರೂಪಿತವಾಗುವ ದ್ವಿಭಾಷಾ/ಬಹುಭಾಷಾ ಪ್ರಾದೇಶಿಕ ವಲಯಗಳು.

ಕನ್ನಡ ಭಾಷಾ ಶಾಸ್ತ್ರಜ್ಞರು ಆರಂಭದಲ್ಲಿ ನಾಲ್ಕು ಪ್ರಾದೇಶಿಕ ಉಪಭಾಷೆಗಳನ್ನು ಗುರುತಿಸಿದರು. ಮೈಸೂರು ಕನ್ನಡ, ಧಾರವಾಡ ಕನ್ನಡ, ಮಂಗಳೂರು ಕನ್ನಡ ಮತ್ತು ಗುಲ್ಬರ್ಗ (ಕಲಬುರಗಿ) ಕನ್ನಡ. ಇದು ಸ್ಥೂಲವಾದ ವರ್ಗೀಕರಣವೇ ಹೊರತು ಸೂಕ್ಷ್ಮವಾದ ಕ್ಷೇತ್ರಾಧ್ಯಯ-ನದ ವಿಭಜನೆ ಆಗಿರಲಿಲ್ಲ. ಮುಂದೆ ಇದಕ್ಕೆ ಬೆಳಗಾವಿ, ರಾಯಚೂರು, ಬಳ್ಳಾರಿ, ಬೀದರ್, ತುಮಕೂರು, ಚಿಕ್ಕಮಗಳೂರು, ಚಾಮರಾಜನಗರ, ಕೋಲಾರ- ಈ ಜಿಲ್ಲೆಗಳ ಕನ್ನಡದ ಭಾಷೆಗಳನ್ನು ಸೇರಿಸಲಾಯಿತು. ಮಂಗಳೂರು ಕನ್ನಡವನ್ನು ಕರಾವಳಿ ಕನ್ನಡ ಎಂದು ಕರೆಯಲಾಯಿತು. ಇನ್ನಷ್ಟು ಕ್ಷೇತ್ರಕಾರ್ಯಗಳ ಫಲವಾಗಿ ಕರ್ನಾಟಕದ ಜಿಲ್ಲೆಗಳ ಒಳಗಡೆಯೇ ಸುಮಾರು ಹದಿನೈದು ಇಪ್ಪತ್ತು ಮೈಲಿಗಳ ಅಂತರದಲ್ಲಿ ಹಳ್ಳಿಗೊಂದರಂತೆ ಕನ್ನಡ ಆಡುನುಡಿ ಭಿನ್ನವಾಗುವುದು ಕಿವಿಗಳಿಗೆ ಬಿದ್ದಿತು. 'ಕನ್ನಡ ನುಡಿ'ಯ ಮೂಲಧಾತು ಇರುವುದು ಕಿವಿಗಳ ಗ್ರಹಿಕೆಯಲ್ಲೇ ಹೊರತು ಕಣ್ಣುಗಳ ನೋಟದಲ್ಲಿ ಅಲ್ಲ. ಕನ್ನಡನಾಡಿನ ಒಳಗಡೆಯೇ ಕೆಲವು ವಿಶಿಷ್ಟ ಪ್ರದೇಶಗಳಲ್ಲಿ ಅನನ್ಯವಾದ ಕನ್ನಡದ ಆಡುನುಡಿಗಳು ಇಂದಿಗೂ ಕ್ರಿಯಾಶೀಲ ಆಗಿವೆ. ಕರಾವಳಿಯ 'ಕುಂದಾಪ್ರ ಕನ್ನಡ' (ಕುಂದ ಕನ್ನಡ) ಅಂತಹ ಒಂದು ಮಾದರಿ. ನಂಜನಗೂಡು ಕನ್ನಡದ ಹಾಗೆಯೇ ಅನೇಕ ಕನ್ನಡಗಳು ಕರ್ನಾಟಕದ ಒಳಗಡೆ ಇವೆ.

ಸಾಮಾಜಿಕ ಉಪಭಾಷೆ ಎನ್ನುವುದು ಪ್ರಾದೇಶಿಕ ಭಾಷೆಯ ಒಳಗಿನ ಆಡುನುಡಿ. ಜನಾಂಗ, ಜಾತಿ, ಬುಡಕಟ್ಟು, ಸಮುದಾಯದ ಒಳಗೆ ಮಾತಾಡಿಕೊಳ್ಳುವ ಒಳ್ನುಡಿ. ಹವ್ಯಕ ಕನ್ನಡ, ಕೋಟ ಕನ್ನಡ, ಕೋಟೆಯವರ ಕನ್ನಡ, ಗೌಡ ಕನ್ನಡ (ಅರೆಭಾಷೆ) ಇವು ಕರಾವಳಿ ಕರ್ನಾಟಕದ ಒಳಗೆಯೇ ಇರುವ ಆಡುನುಡಿಗಳು. ಅರೆಭಾಷೆ ಕೊಡಗಿಗೂ ಹಬ್ಬಿದೆ. ಹಾಲಕ್ಕಿ ಕನ್ನಡ, ದೀವರ ಕನ್ನಡ, ನಾಡವರ ಕನ್ನಡ - ಇವು ಉತ್ತರ ಕನ್ನಡದ ಒಳಗಿನ ಸಮುದಾಯಗಳ ನುಡಿಗಳು.

ಕರ್ನಾಟಕದ ದಲಿತರ ಕನ್ನಡದ ಆಡುನುಡಿ ಸ್ವತಂತ್ರವಾಗಿ ಮತ್ತು ಪ್ರಾದೇಶಿಕವಾಗಿ ಅನನ್ಯವಾಗಿದೆ. ಸಿದ್ದಲಿಂಗಯ್ಯನವರ 'ಹೊಲೆಮಾದಿಗರ ಹಾಡು', ದೇವನೂರ ಮಹಾದೇವರ 'ಕುಸುಮಬಾಲೆ', ಅರವಿಂದ ಮಾಲಗತ್ತಿ ಅವರ 'ಕಾರ್ಯ', ಚೆನ್ನಣ್ಣ ವಾಲೀಕಾರರ 'ಕರಿತೆಲಿ ಮಾನವನ ಜೀಪದ' – ಇವುಗಳ ನುಡಿ ಮತ್ತು ನುಡಿಗಟ್ಟುಗಳು ಬೇರೆ ಬೇರೆ. ಕನ್ನಡ ಕೇವಲ ಒಂದು ಸಂವಹನ ಮಾಧ್ಯಮ ಅಲ್ಲ, ಅದು ಬದುಕನ್ನು ಕಟ್ಟಿಕೊಡುವ ಜೀವಸೆಲೆ.



ಹಲ್ಮಿಡಿ ಶಾಸನ (ಕನ್ನಡದ ಮೊದಲ ಶಾಸನ)

ಕರ್ನಾಟಕದ ಒಳಗೆಯೇ ತಮ್ಮ ಇರುವಿಕೆಯಿಂದ ಅನನ್ಯರಾಗಿ ತಮ್ಮ ತಾಯ್ನುಡಿಯ ಜೊತೆಗೆ ಕನ್ನಡವನ್ನು ಎರಡನೆಯ ನುಡಿಯಾಗಿ ಬೆಳೆಸಿದ ಬೇರೆ ಬೇರೆ ಸಮುದಾಯದವರದ್ದೇ ಆದ ಕನ್ನಡತನವಿದೆ. ತುಳು, ಕೊಡವ, ಕೊಂಕಣಿ, ಲಂಬಾಣಿ (ಬಂಜಾರ), ದಖ್ಖನಿ (ಉರ್ದು), ಬ್ಯಾರಿ ಭಾಷೆಗಳನ್ನು ಆಡುವವರ ಹಾಗೆಯೇ ಮರಾಠಿ, ಚಿತ್ಪಾವನಿ, ಸಂಕೇತಿ ಭಾಷೆಗಳನ್ನು ತಾಯ್ನುಡಿಯಾಗಿ ಉಳ್ಳ ಕನ್ನಡಿಗರ 'ಕನ್ನಡಗಳು' ವಿಶಿಷ್ಟವಾಗಿವೆ. ತಮ್ಮ ತಾಯ್ನುಡಿಯ ಧಾಟಿಯಲ್ಲಿ ಮತ್ತು ವ್ಯಾಕರಣದ ಪ್ರ-ಕ್ರಿಯೆಯಲ್ಲಿ ಇವರು ಕನ್ನಡವನ್ನು ಮಾತಾಡುವ ಕಾರಣ ಕನ್ನಡ ನುಡಿಗೆ ವೈವಿಧ್ಯ ದೊರೆಕೊಂಡಿದೆ. ಆಡುನುಡಿಯಲ್ಲಿ ಸರಿತಪ್ಪುಗಳಿಗೆ ಅವಕಾಶ ಇಲ್ಲ. ಬರಹಕ್ಕೆ ಬಂದಾಗಲೂ ಸಾಹಿತ್ಯದ ಭಾಷೆಗೆ ಕನ್ನಡೇತರರ ತಾಯ್ನುಡಿಯು ಸೊಗಸನ್ನು ಕೊಟ್ಟ ನಿದರ್ಶನಗಳು ಹಲವು ಇವೆ.

ಬುಡಕಟ್ಟು ಮತ್ತು ಅಲೆಮಾರಿ/ ಅರೆ ಅಲೆಮಾರಿ ಸಮುದಾಯದವರು ತಮ್ಮ ತಾಯ್ನುಡಿಯ ಜೊತೆಗೆ ನಿಧಾನವಾಗಿ ಶಾಲೆಗಳಿಗೆ ಹೋಗಲು ಶುರು ಮಾಡಿದ ಫಲವಾಗಿ ಕನ್ನಡ ನುಡಿಯು ಅವರ ಕಲಿಕೆಯ ಅಂಗವಾಗಿದೆ. ಕೊರಗ, ಇರುಳ, ಸೋಲಿಗ, ಯೆರವ, ಕುಡಿಯ/ಮಲೆಕುಡಿಯ, ಜೇನು/ ಬೆಟ್ಟ ಕುರುಬ, ಸಿದ್ದಿ, ಗೌಳಿ, ಕೊರಚ, ಹಕ್ಕಿ ಪಿಕ್ಕಿ- ಇಂತಹ ಅನೇಕ ಬುಡಕಟ್ಟು ಮತ್ತು ಅಲೆಮಾರಿ- ಅರೆಅಲೆಮಾರಿ ಸಮುದಾಯದವರ ಕನ್ನಡ ನುಡಿ ಅವರ ಸಾಂಸ್ಕೃತಿಕ ಹಿನ್ನೆಲೆಯಿಂದ ಶ್ರೀಮಂತವಾಗುತ್ತದೆ.

ಬೇರೆ ಬೇರೆ ಸಮುದಾಯದವರು ಮಾತನಾಡುವ ನುಡಿಗಳು ಬೇರೆ ಆಗಿದ್ದಾಗ ಅವರು ಕನ್ನಡವನ್ನು ಆಲಿಸುವ ನುಡಿಯಾಗಿ, ಓದುವ ಭಾಷೆಯಾಗಿ ಕಲಿಯುವ ಪ್ರಕ್ರಿಯೆ ತ್ರಾಸ-ದಾಯಕವಾದುದು. ಹಾಗಾಗಿ ಅವರ ಕನ್ನಡದಲ್ಲಿ ದೋಷವನ್ನು ಹುಡುಕಬಾರದು. ಅದು ನಿಜವಾದ 'ಕನ್ನಡಗಳ ಕೂಡುವಿಕೆ'.

ಬೇರೆ ಬೇರೆ ತಾಯ್ನುಡಿಯವರು ಕನ್ನಡಗಳನ್ನು ಬಳಸಿದಾಗ ಅವರ ಲೋಕಗ್ರಹಿಕೆಯ ಸ್ವತಂತ್ರ ಚಿಂತನೆಗಳು ಕನ್ನಡಕ್ಕೆ ಬರುತ್ತವೆ. ಇದರಿಂದ ಕನ್ನಡ ಶ್ರೀಮಂತ ಆಗುತ್ತದೆ. ಈಗಿನ ವಿಶಾಲ ಕರ್ನಾಟಕದ ಸುತ್ತಲೂ ಮಲಯಾಳ, ತಮಿಳು, ತೆಲುಗು, ಮರಾಠಿ ಮತ್ತು ಕೊಂಕಣಿ ಮಾತನಾಡುವ ರಾಜ್ಯಗಳು ಇವೆ. ಕರ್ನಾಟಕದ ಗಡಿಪ್ರದೇಶಗಳಲ್ಲಿ ಎರಡು ಭಾಷೆಗಳನ್ನು ಸಹಜವಾಗಿ ಮಾತನಾಡುವ ಜನರಿದ್ದಾರೆ. ಇವರಲ್ಲಿ ಕನ್ನಡ ಮನೆಮಾತಿನವರು ಇರುವ ಹಾಗೆಯೇ ಕನ್ನಡವನ್ನು ಎರಡನೆಯ ಭಾಷೆಯಾಗಿ ಬಳಸುವವರೂ ಇದ್ದಾರೆ. ಇವರ 'ಕನ್ನಡಗಳು' ಗಡಿಗಳ ಎಲ್ಲೆಯನ್ನು ಮೀರಿದವುಗಳು. ನುಡಿ ಬೆಳೆಯುವುದೇ ಮನುಷ್ಯರು ಕಟ್ಟಿಕೊಂಡ ಗಡಿಗಳನ್ನು ಮೀರುವ ಮೂಲಕ.

ಕರ್ನಾಟಕದ ಒಳಗಿನ ಪ್ರದೇಶಗಳಲ್ಲಿಯೇ ತಮಿಳು, ತೆಲುಗು, ಮರಾಠಿ, ಮಲೆಯಾಳ ಮುಂತಾದ ಭಾಷೆಗಳನ್ನು ತಾಯ್ನುಡಿಯಾಗಿ ಉಳ್ಳವರು ಅನೇಕ ತಲೆಮಾರುಗಳಿಂದ ನೆಲಸಿದ್ದಾರೆ. ಅವರೆಲ್ಲಾ ಈ ನೆಲದಲ್ಲೇ ಹುಟ್ಟಿ ಕನ್ನಡನಾಡಿನ ಅವಿಭಾಜ್ಯ ಅಂಗವಾಗಿ ಇರುವವರು. ಕನ್ನಡ ಸಾಹಿತ್ಯಕ್ಕೆ ಇವರ ಕೊಡುಗೆಯ ಬಗ್ಗೆ ಮಾತಾಡುವಾಗ ಕೆಲವೊಮ್ಮೆ ಇವರ ತಾಯ್ನುಡಿಯ ಪ್ರಸ್ತಾವ ಬರುತ್ತದೆ. ಅವರಂತೆ ಕರ್ನಾಟಕದ ಸೊಗಸಿಗೆ ಅನ್ಯಾನ್ಯ ಕ್ಷೇತ್ರಗಳಲ್ಲಿ ತಮ್ಮನ್ನು ತೆತ್ತುಕೊಂಡ ಅನೇಕರ ಕನ್ನಡ ಪ್ರೀತಿ ಅಸದಳವಾದದ್ದು.

ಕನ್ನಡ ನುಡಿಯ ಬಹುರೂಪತೆಯ ನೆಲೆಯಿಂದ ನೋಡಿದರೆ ಹನ್ನೆರಡನೆಯ ಶತಮಾನದ ಶಿವಶರಣರ ಅನುಭವ ಮಂಟಪ, ಬಸವಣ್ಣನವರ ಕಲ್ಯಾಣದ ಕ್ರಾಂತಿ ಒಂದು ಮಹೋಪಮೆ. ಬೇರೆ ಬೇರೆ ಪ್ರದೇಶಗಳ, ಸಾಮಾಜಿಕ ಸಮುದಾಯಗಳ, ವರ್ಗಗಳ, ವರ್ಣಗಳ ಗಂಡಸರು ಹೆಂಗಸರು ಒಟ್ಟುಸೇರಿ ಅಲ್ಲಿ ವಚನ ರಚನೆ ಮಾಡಿದರು. ಬೇರೆ ಬೇರೆ ಕಸುಬಿನವರು ಕನ್ನಡದಲ್ಲಿ ವಚನ ರಚನೆ ಮಾಡಲು ಅವಕಾಶ ದೊರೆತ ಕಾರಣ ಕನ್ನಡಕ್ಕೆ ಸಾಮಾಜಿಕ ಬಹುತ್ವ ಪ್ರಾಪ್ತವಾಯಿತು. ಹೆಣ್ಣುಮಕ್ಕಳ ಕನ್ನಡಕ್ಕೆ ಸಮಾನ ಸ್ಥಾನ ದೊರೆಯಿತು. ಕಾಯಕಗಳ ಮೂಲಕ ಕನ್ನಡಗಳನ್ನು ಒಟ್ಟಿಗೆ ಸೇರಿಸುವ ಮಹತ್ವದ ಕ್ರಾಂತಿ ನಡೆಯಿತು. ಅವರು ತಮ್ಮ ಕಸುಬುಗಳನ್ನು ಬದುಕಿನ ರೂಪಕವಾಗಿ ವಚನಗಳಲ್ಲಿ ನೇಯ್ದ ಕಾರಣ ತಳಸಮುದಾಯಗಳನ್ನು ಬೆಸೆಯುವ ತಿಳಿವಳಿಕೆ ಕನ್ನಡ ನಾಡಿಗೆ ದತ್ತವಾಯಿತು. ಕನ್ನಡ ವಚನಗಳಲ್ಲಿ ಭಾಷಿಕ, ಆರ್ಥಿಕ ಮತ್ತು ಸಾಮಾಜಿಕ ಬಹುರೂಪಿ ಚಹರೆಗಳು ಕಾಣಿಸಿಕೊಂಡವು.

ಕನ್ನಡ ಮತ್ತು ಕನ್ನಡಿಗರು ಈಗ ಅಪ್ಪಿಕೊಳ್ಳಬೇಕಾದದ್ದು ಒಳಗೊಳ್ಳುವಿಕೆಯ ಮೂಲಕವೇ ಹೊರತು ಹೊರಗಿಡುವಿಕೆಯ ಮೂಲಕ ಅಲ್ಲ. ಕುವೆಂಪು ಅವರು ಹೇಳಿದ 'ಸರ್ವ ಜನಾಂಗದ ಶಾಂತಿಯ ತೋಟ'ದಲ್ಲಿ ಬಣ್ಣ ಬಣ್ಣದ ಕನ್ನಡ ಹೂಗಳು ಅರಳಲು ನಾವು ಒಂದೊಂದು ಕನ್ನಡ ಗಿಡಗಳನ್ನು ನೀರೆರೆದು ಸಾಕಿ ಸಲಹಬೇಕು. ಬ್ರೆಕ್ಟ್ ತನ್ನ 'ನೀರು ಚಿಮುಕಿಸು ತೋಟಕ್ಕೆ' ಕವನವನ್ನು ಹೀಗೆ ಕೊನೆಮಾಡುತ್ತಾನೆ: 'ನೀರು ಕೇವಲ ಹಸುರುಹುಲ್ಲಿಗೆ ಬಾಡಿದವುಗಳಿಗೆ ಮಾತ್ರ ಅಲ್ಲ, ಕುಡಿಸು ನೀರನು ಬಂಜರು ಭೂಮಿಗೆ ಕೂಡಾ, ತಣ್ಣಗಾಗಲಿ ಅದರ ಹೊಟ್ಟೆಯೂ ನೋಡಾ.'

ಲೇಖಕ: ಕನ್ನಡ ಸಂಶೋಧಕ, ವಿಶ್ರಾಂತ ಕುಲಪತಿ

ಕುಟುಕಿದ ಪಿ.ಎಂ: ಕೆರಳಿದ ಸಿ.ಎಂ

ಒಂದನೇ ಪುಟದಿಂದ...

'ಕಾಂಗ್ರೆಸ್‌ನ ಬಣ್ಣ ಬಯಲಾಗಿದೆ'

'ಕಾಂಗ್ರೆಸ್ ಆಡಳಿತವಿರುವ ಕರ್ನಾಟಕ, ತೆಲಂಗಾಣ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಅಭಿವೃದ್ಧಿ ಕುಂಠಿತವಾಗಿದೆ ಮತ್ತು ಆರ್ಥಿಕ ಸ್ಥಿತಿಗತಿಯು ತೀರಾ ಹದಗೆಟ್ಟಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು ಅಭಿವೃದ್ಧಿಯ ಬಗ್ಗೆ ಯೋಚಿಸದೆ, ಪಕ್ಷದೊಳಗಿನ ಆಂತರಿಕ ರಾಜಕೀಯ ಮತ್ತು ಲೂಟಿಯಲ್ಲಿ ತೊಡಗಿದೆ' ಎಂದು ಮೋದಿ ಟೀಕಿಸಿದ್ದಾರೆ.

'ಇವಿಷ್ಟೇ ಅಲ್ಲ, ಈಗಾಗಲೇ ಜಾರಿಯಲ್ಲಿರುವ ಯೋಜನೆಗಳನ್ನೂ ಅವರು ವಾಪಸ್ ಪಡೆಯಲಿದ್ದಾರೆ' ಎಂದೂ ಹೇಳಿದ್ದಾರೆ.

'ಎಕ್ಸ್'ನಲ್ಲಿ ಸರಣಿ ಟ್ವೀಟ್‌ಗಳನ್ನು ಮಾಡಿರುವ ಪ್ರಧಾನಿ, 'ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಗ್ಯಾರಂಟಿಗಳ ಸುಳ್ಳುಗಳು ಈಡೇರಿಲ್ಲ. ಇದು ಆ ರಾಜ್ಯಗಳ ಜನರಿಗೆ ಮಾಡಿದ ಮಹಾ ವಂಚನೆ. ಬಡವರು, ಯುವಕರು ರೈತರು ಮತ್ತು ಮಹಿಳೆಯರು ಅವರ ಸುಳ್ಳು ಗ್ಯಾರಂಟಿ ರಾಜಕೀಯದ ಸಂತ್ರಸ್ತರಾಗಿದ್ದಾರೆ. ಕಾಂಗ್ರೆಸ್ ನೀಡಿರುವ ಭರವಸೆಗಳಿಂದ ಇವರೆಲ್ಲ ವಂಚಿತರಾಗಿದ್ದಾರೆ. ಅಲ್ಲದೇ, ಈಗಾಗಲೇ ಅವರು ಫಲಾನುಭವಿಗಳಾಗಿರುವ ಯೋಜನೆಗಳನ್ನೂ ದುರ್ಬಲಗೊಳಿಸಲಾಗಿದೆ' ಎಂದು ಟೀಕಿಸಿದ್ದಾರೆ.

'ಕಾಂಗ್ರೆಸ್ ಪ್ರಯೋಜಿತ ನಕಲಿ ಭರವಸೆಗಳ ಸಂಸ್ಕೃತಿ ಬಗ್ಗೆ ಜನರು ಎಚ್ಚರಿಕೆಯಿಂದ ಇರಬೇಕು. ಇತ್ತೀಚೆಗೆ ಹರಿಯಾಣದ ಜನರು ಹೇಗೆ ಅವರ ಸುಳ್ಳುಗಳನ್ನು ತಿರಸ್ಕರಿಸಿದರು ಎಂಬುದನ್ನು ಗಮನಿಸಬೇಕು. ಅಲ್ಲಿ ಜನರು ಸ್ಥಿರ, ಅಭಿವೃದ್ಧಿ ಪರವಾಗಿರುವ ಮತ್ತು ಕಾರ್ಯತತ್ಪರವಾಗಿರುವ ಸರ್ಕಾರವನ್ನು ಆಯ್ಕೆ ಮಾಡಿದ್ದಾರೆ' ಎಂದು ಹೇಳಿದ್ದಾರೆ.

'ಕಾಂಗ್ರೆಸ್‌ಗೆ ಮತ ಹಾಕುವುದು ಎಂದರೆ ಆಡಳಿತರಾಹಿತ್ಯ ವ್ಯವಸ್ಥೆ, ದುರ್ಬಲ ಆರ್ಥಿಕತೆ ಮತ್ತು ಸರಿಸಾಟಿ ಇಲ್ಲದ ಲೂಟಿಗೆ ಮತ ಹಾಕುವುದು ಎಂಬುದು ದೇಶದಾದ್ಯಂತ ಜನರಿಗೆ ಈಗ ಅರ್ಥವಾಗುತ್ತಿದೆ. ದೇಶದ ಜನರು ಈಗ ಅಭಿವೃದ್ಧಿ ಮತ್ತು ಪ್ರಗತಿಯನ್ನು ಬಯಸುತ್ತಾರೆ' ಎಂದು ಹೇಳಿದ್ದಾರೆ.

'ಭ್ರಷ್ಟಾಚಾರ ಬೆಂಬಲಿಸಿದ್ದೇ ನಿಮ್ಮ ಸಾಧನೆ'

'ಬಿಜೆಪಿ ಆಡಳಿತದ ಅವಧಿಯಲ್ಲಿ ಶೇ 40ರಷ್ಟು ಕಮಿಷನ್ ಮತ್ತು ಭ್ರಷ್ಟಾಚಾರ ಪ್ಲೇಗ್ ಮಾರಿಯಂತಾಗಿತ್ತು. ರಾಜ್ಯದ ಜನರ ಜೀವನನ್ನು ಉತ್ತಮಪಡಿಸಬಹುದಾಗಿದ್ದ ಸಂಪ-ನ್ಮೂಲವನ್ನು ದೋಚಲಾಗಿತ್ತು. ಅದೇ ಶೇ 40ರಷ್ಟು ಹಣವನ್ನು ನಾವು ಜನರ ಉದ್ಧಾರಕ್ಕೆ ತಿರುಗಿಸಿದ್ದೇವೆ. ರಾಜ್ಯದಲ್ಲಿ ನಿಮ್ಮ ಸಾಧನೆ ಏನು? ಭ್ರಷ್ಟಾಚಾರವನ್ನು ಬೆಂಬಲಿಸಿದ್ದೇ? ರಾಜ್ಯವನ್ನು ಸಾಲಕ್ಕೆ ದೂಡಿದ್ದೇ? ನಿಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಅಪಪ್ರಚಾರಗಳ ಮೊರೆಹೋಗಿದ್ದೇ' ಎಂದು ಪ್ರಶ್ನಿಸಿದ್ದಾರೆ.

'ಮೋದಿ ಅವರೇ, ನಿಮ್ಮ ಮಹಾನಾಯಕತ್ವದಲ್ಲಿ ಭಾರತದ ಸಾಲವು ₹187.27 ಲಕ್ಷ ಕೋಟಿಗಳಿಗೆ ಏರಿದೆ ಎಂಬುದನ್ನು ಮರೆಯಬೇಡಿ. ಅದೂ ಬರೋಬ್ಬರಿ, ಜಿಡಿಪಿಯ ಶೇ 56.8ರಷ್ಟು ಸಾಲ. ನಿಮ್ಮದು ಬರಿಯ ಕೆಟ್ಟ ಆಡಳಿತವಲ್ಲ. ದೇಶದ ಪ್ರತಿಪ್ರಜೆಯ ಮೇಲೆ ನೀವು ಹೇರಿದ ಹೊರೆಯಿದು' ಎಂದು ಟೀಕಿಸಿದ್ದಾರೆ.

'ಇಲ್ಲಿ ಅಣಕ ಏನು ಗೊತ್ತೇ? ದೇಶದ ಖಜಾನೆ ತುಂಬುವಲ್ಲಿ ಕರ್ನಾಟಕದ ಕೊಡುಗೆ ಯಥೇಚ್ಛ ಪ್ರಮಾಣದ್ದು, ಆದರೆ ನಮ್ಮ ನ್ಯಾಯಯುತವಾದ ಪಾಲನ್ನು ನೀಡಲು ನಿಮ್ಮ ಸರ್ಕಾರ ಕರುಬುತ್ತದೆ. ಈ ಮೂಲಕ ಗ್ಯಾರಂಟಿಗಳ ಅನುಷ್ಠಾನಕ್ಕೆ ನಿಮ್ಮ ಸರ್ಕಾರ ತೊಂದರೆ ನೀಡುತ್ತಿದೆ. ಕರ್ನಾಟಕ ನೀಡುವ ಪ್ರತಿ ರೂಪಾಯಿಗೆ, ವಾಪಸ್ ಬರುತ್ತಿರುವುದು 13 ಪೈಸೆ ಮಾತ್ರ. ಇದು ಸಹಕಾರ ಒಕ್ಕೂಟವಲ್ಲ, ಹಗಲು ದರೋಡೆ' ಎಂದಿದ್ದಾರೆ.

'ದಕ್ಷ ಆಡಳಿತ'

'ಕರ್ನಾಟಕವನ್ನು ಆರೋಗ್ಯಕರ ಮತ್ತು ಸಮೃದ್ಧ ರಾಜ್ಯವಾಗಿಸಲು, ದೇಶದ ಸಾರ್ವಭೌಮತೆ, ಏಕತೆ ಮತ್ತು ಸಮಗ್ರತೆಯನ್ನು ಬಲಪಡಿಸಲು ಎಲ್ಲರೂ ಒಟ್ಟಾಗಿ ಶ್ರಮಿಸೋಣ. ದೇಶವು ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ. ಮುಂದಿನ ದಿನಗಳಲ್ಲಿ ಮೂರನೇ ಸ್ಥಾನಕ್ಕೆ ಏರಲಿದೆ. ಈ ಹಾದಿಯಲ್ಲಿ ಕರ್ನಾಟಕವೂ ಪಾತ್ರ ವಹಿಸಲಿದೆ' ಎಂದರು.

'ನವೆಂಬರ್ 1ರಂದು ಕರ್ನಾಟಕ ಸೇರಿ ಆಂಧ್ರಪ್ರದೇಶ, ಛತ್ತೀಸಗಢ, ಹರಿಯಾಣ, ಕೇರಳ, ಮಧ್ಯಪ್ರದೇಶ, ತಮಿಳುನಾಡು, ಪಂಜಾಬ್ ಮತ್ತು ಐದು ಕೇಂದ್ರಾಡಳಿತ ಪ್ರದೇಶಗಳಾದ ಅಂಡಮಾನ್ ಮತ್ತು ನಿಕೋಬಾರ್, ಚಂಡೀಗಢ, ದೆಹಲಿ, ಲಕ್ಷದ್ವೀಪ, ಪುದುಚೇರಿಯ ಸಂಸ್ಥಾಪನಾ ದಿನವನ್ನು ಆಚರಿಸಲಾಗುತ್ತಿದೆ. 'ಏಕ್ ಭಾರತ್, ಶ್ರೇಷ್ಠ ಭಾರತ್' ಘೋಷಣೆ ಅಡಿಯಲ್ಲಿ ರಾಜಭವನದಲ್ಲಿ ಈ ಕಾರ್ಯಕ್ರಮ ಆಚರಿಸಲಾಗುತ್ತದೆ' ಎಂದರು.

ತಿದ್ದುಪಡಿ

- 'ಪ್ರಜಾವಾಣಿ'ಯ ಶುಕ್ರವಾರದ ಸಂಚಿಕೆಯ ಮೊದಲ ಪುಟದಲ್ಲಿ ಪ್ರಕಟವಾದ 'ಜಯ ಹೇ ಕರ್ನಾಟಕ ಮಾತೆ' ಚಿತ್ರದ ಶೀರ್ಷಿಕೆಯಲ್ಲಿ '... ಬೆಂಗಳೂರಿನ ಮೇಯರ್ ಆಗಿದ್ದ ಅನಂತನಾರಾಯಣ ಅವರಿದ್ದರು' ಎಂದು ಬರೆಯಲಾಗಿತ್ತು. ಆದರೆ, 1973ರಲ್ಲಿ ಎ.ಕೆ.ಅನಂತಕೃಷ್ಣ ಅವರು ಮೇಯರ್ ಆಗಿದ್ದರು.
- 'ಕರ್ನಾಟಕ ಚಿನ್ನದ ಹೊಳಪು' ವಿಶೇಷ ಪುಟದ 50 ಮೈಲಿಗಲ್ಲುಗಳ ಪೈಕಿ 19ನೇ ಟಿಪ್ಪಣಿಯಲ್ಲಿ '1983ರಲ್ಲಿ ರಾಮಕೃಷ್ಣ ಹೆಗಡೆ ನೇತೃತ್ವದಲ್ಲಿ ದೇಶದಲ್ಲೇ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ ಬಂತು' ಎಂದಿದೆ. ಅದು 'ರಾಜ್ಯದಲ್ಲಿ ಮೊದಲ ಬಾರಿಗೆ...' ಎಂದಾಗಬೇಕಿತ್ತು.
- ಬೆತ್ತಲೆ ಸೇವೆ ನಿಷೇಧ ಎಂಬ 26ನೇ ಟಿಪ್ಪಣಿಯಲ್ಲಿ ಜೆ.ಎಚ್.ಪಟೇಲ್ ನೇತೃತ್ವದ ಸರ್ಕಾರ 1987ರಲ್ಲಿ ಬೆತ್ತಲೆ ಸೇವೆಯನ್ನು ನಿಷೇಧಿಸಿತು ಎಂದು ಪ್ರಕಟವಾಗಿತ್ತು. ಆದರೆ, ಆ ಸಮಯದಲ್ಲಿ ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರ ಅಧಿಕಾರದಲ್ಲಿತ್ತು.

ಶ್ರೀಮುರಳಿ

ಹಳೆ ಕಥೆಗೆ ಹೊಸ ಆ್ಯಕ್ಷನ್

ನಾವು ನೋಡಿದ ಸಿನಿಮಾ

ಬಘೀರ
- ನಿರ್ಮಾಣ: ಹೊಂಬಾಳೆ ಫಿಲ್ಮ್ಸ್
- ನಿರ್ದೇಶನ: ಸೂರಿ
- ತಾರಾಗಣ: ಶ್ರೀಮುರಳಿ, ರುಕ್ಮಿಣಿ ವಸಂತ್, ಪ್ರಕಾಶ್ ರಾಜ್, ಗರುಡ ರಾಮ್ ಮತ್ತಿತರರು

ಭ್ರಷ್ಟ ಆಡಳಿತ ವ್ಯವಸ್ಥೆಯಿಂದ ಕೈಕಟ್ಟಿ ಕುಳಿತ ಪೊಲೀಸ್ ಅಧಿಕಾರಿಯೊಬ್ಬ ಮುಖವಾಡ ಧರಿಸಿಕೊಂಡು ವ್ಯವಸ್ಥೆಯ ವಿರುದ್ಧ ಹೋರಾಡುವುದೇ 'ಬಘೀರ' ಚಿತ್ರದ ಒಂದೆಳೆ. ಈ ರೀತಿ ಕಥೆ ಹೊಂದಿರುವ ಸಾಕಷ್ಟು ಚಿತ್ರಗಳು ಈಗಾಗಲೇ ಕನ್ನಡದಲ್ಲಿಯೇ ಬಂದಿರುವುದರಿಂದ ಕಥೆಯಲ್ಲಿ ಹೊಸತನ ಕಾಣಿಸುವುದಿಲ್ಲ. ಇನ್ನು ಕಥೆ ಹೇಳಲು ಬಳಸಿದ ತಂತ್ರ ಆ್ಯಕ್ಷನ್ ಸಿನಿಮಾಗಳ ಸಿದ್ಧ-ಸೂತ್ರದಿಂದ ಹೊರಗೆ ನಿಲ್ಲುವುದಿಲ್ಲ. ಕಥೆ ಪ್ರಶಾಂತ್ ನೀಲ್ ಅವರದ್ದಾಗಿರುವುದರಿಂದ ಚಿತ್ರದಲ್ಲಿ ಕತ್ತಲು ಹೆಚ್ಚಿದೆ! ಭೀಕರ ಹೊಡೆದಾಟದ ಸನ್ನಿವೇಶಗಳಿಗೆ ಕೊರತೆಯಿಲ್ಲ.

ಚಿತ್ರದ ನಾಯಕ ವೇದಾಂತ್‌ಗೆ ಬಾಲ್ಯದಿಂದಲೇ ಸೂಪರ್‌ಮ್ಯಾನ್ ಆಗುವ ಕನಸು. ಸಮಾಜಕ್ಕೆ ಸೇವೆ ಮಾಡುವ ಎಲ್ಲರೂ ಸೂಪರ್‌ಮ್ಯಾನ್‌ಗಳು ಎಂಬ ಅಮ್ಮನ ಮಾತಿನಿಂದ ಆತ ಪೊಲೀಸ್ ಅಧಿಕಾರಿಯಾಗುತ್ತಾನೆ. ಕರಾವಳಿಯ ತೀರ ಮಂಗಳೂರಿಗೆ ನಿಯೋಜನೆಯಾಗಿ ಬಂದವನಿಗೆ ಪ್ರಾರಂಭದಲ್ಲಿ ಇಲಾಖೆ ಬೆಂಬಲವಾಗಿರುತ್ತದೆ. ಆದರೆ ದೊಡ್ಡ ರಾಜಕಾರಣಿಗಳ ಕೈಕೆಳಗಿನ ರೌಡಿಗಳನ್ನು ಬೇಟೆಯಾಡಲು ಪ್ರಾರಂಭಿಸಿದಾಗ ವೇದಾಂತ್‌ಗೆ ತನ್ನ ಇಲಾಖೆಯ ಉನ್ನತಾಧಿಕಾರಿಗಳಿಂದಲೇ ಸಂಕಷ್ಟ ಎದುರಾಗುತ್ತದೆ. ಜೊತೆಗೆ ಇಲಾಖೆಯಲ್ಲಿಯೇ ಕೆಲಸ ಮಾಡುತ್ತಿರುವ ತನ್ನ ತಂದೆ ಕೂಡ ಭ್ರಷ್ಟ ಎಂದು ತಿಳಿದು ಆಘಾತವಾಗುತ್ತದೆ. ಅಲ್ಲಿಂದ ಪೊಲೀಸ್ ಇಲಾಖೆ ಕುರಿತಾಗಿ ಆತನ ದೃಷ್ಟಿಕೋನ ಬದಲಾಗಿ, 'ಬಘೀರ'ನ ಕತ್ತಲಿನ ಅಧ್ಯಾಯ ಪ್ರಾರಂಭವಾಗುತ್ತದೆ!

ಇಲಾಖೆಗೆ ನಿಷ್ಠನಾಗಿದ್ದ ವೇದಾಂತ್ ವರಸೆ ಬದಲಾಗುತ್ತದೆ. ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಂಡು ಆತ ರಾತ್ರಿ ವೇಳೆ 'ಬಘೀರ'ನಾಗಿ ದುಷ್ಟರ ಬೇಟೆಗಿಳಿಯುತ್ತಾನೆ. ಮೊದಲಾರ್ಧ ಆಸಕ್ತಿ-ದಾಯಕವಾಗಿದೆ. ಆದರೂ ಅವಧಿಯನ್ನು ಕೊಂಚ ತಗ್ಗಿಸುವ ಅವಕಾಶ ನಿರ್ದೇಶಕರಿಗಿತ್ತು. ಕಥೆಯನ್ನು ಸುಲಭವಾಗಿ ಊಹಿಸಬಹುದಾಗಿದ್ದು, ಹೆಚ್ಚುತಿರುವು-ಗಳಿಲ್ಲದಿರುವುದು ದ್ವಿತಿಯಾರ್ಧವನ್ನು ಪೇಲವವಾ-ಗಿಸುತ್ತದೆ. ಪೊಲೀಸ್ ಅಧಿಕಾರಿಯಾಗಿ ಶ್ರೀಮುರಳಿ ಇಷ್ಟವಾಗುತ್ತಾರೆ. ನಾಯಕಿ ರುಕ್ಮಿಣಿ ವಸಂತ್‌ಗೆ ಚಿತ್ರದಲ್ಲಿ ಹೆಚ್ಚು ಕೆಲಸವಿಲ್ಲ. ಹೊಡೆದಾಟಗಳ ಅಬ್ಬರದಲ್ಲಿ ರೊಮ್ಯಾನ್ಸ್‌ಗೆ ಜಾಗವಿರಲೆಂದು ಬಲವಂತವಾಗಿ ಈ ಪಾತ್ರವನ್ನು ಪೋಣಿಸಿದಂತೆ ಭಾಸವಾಗುತ್ತದೆ.

ಕಾನ್‌ಸ್ಟೆಬಲ್ ಆಗಿ ರಂಗಾಯಣ ರಘು, ಪ್ರಕಾಶ್ ತುಮ್ಮಿನಾಡು ಅಲ್ಲಲ್ಲಿ ನಗಿಸುತ್ತಾರೆ. ಪ್ರಮುಖ ಖಳನಟನಾಗಿ ಗರುಡ ರಾಮ್ ಭಯ ಹುಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಘೀರ ಯಾರೆಂದು ಪತ್ತೆ ಮಾಡಲು ಬರುವ ಅಧಿಕಾರಿ ಪ್ರಕಾಶ್ ರಾಜ್ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಅವಿನಾಶ್, ಪ್ರಮೋದ್ ಶೆಟ್ಟಿ ಪಾತ್ರಗಳಿಗೆ ಹೆಚ್ಚಿನ ಪ್ರಾತಿನಿಧ್ಯವಿಲ್ಲ. ಪ್ರಾರಂಭದಲ್ಲಿ ಅಜನೀಶ್ ಲೋಕನಾಥ್ ಹಿನ್ನೆಲೆ ಸಂಗೀತ ತುಸು ಅಬ್ಬರವಾದಂತೆ ಅನ್ನಿಸಿದರೂ ಬಳಿಕ ಹಿತವೆನಿಸು-ತ್ತದೆ. ಆ್ಯಕ್ಷನ್ ಸನ್ನಿವೇಶಗಳು ಅದ್ದೂರಿಯಾಗಿವೆ. ಹೆರಿಗೆಗಾಗಿ ಬಸ್‌ಸ್ಟಾಂಡ್‌ನಲ್ಲಿ ಕಾಯುವ ಮಹಿಳೆ, ಸ್ಟೇಷನ್ ಎದುರು ಬೆಂಕಿ ಹಚ್ಚಿಕೊಳ್ಳುವ ಯುವತಿ... ಮೊದಲಾದ ದೃಶ್ಯಗಳ ನಿರೂಪಣೆ ಶೈಲಿಯನ್ನು ಬದಲಿಸುವ ಅವಕಾಶ ನಿರ್ದೇಶಕರಿಗಿತ್ತು.

ವಿನಾಯಕ ಕೆ.ಎಸ್

ಪದಬಂಧ 5850

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
- 2.ಹಂತಕನೇರಿದ ಮೆಟ್ಟಿಲು (2)
- 5.ಗುಲಾಬಿ ಹೂ ಹಿಡಿದಿರುವ ಚಾರ (3)
- 8.ಕಡಿಯಲು ಹಾತೊರೆಯುತ್ತಿರುವ ಭಲ್ಲೂಕ (3)
- 9.ಮುಳ್ಳುಗಳ ನಡುವೆ ಅರಳುವ ಪುಷ್ಪ (3)
- 10.ಕರ್ತಾರನಿಗೆ ನಮಿಸುತ್ತಿರುವ ಕೈ! (2)
- 11.ಕರ್ನಾಟಕದ ಗಾಂಧಿ ಎಂದು ಖ್ಯಾತರಾಗಿರುವ ಶರಣ (7)
- 12.ಹುರಿ ಮಾಡಿದ ಹತ್ತಿ ಎಳೆ (2)
- 14.ಸೇವಕರು ಎದೆಯ ಮೇಲೆ ಅಡ್ಡ ಧರಿಸುವ ಬಿಲ್ಲೆಯುಳ್ಳ ಪಟ್ಟಿ (3)
- 17.ವನದೊಳಗಿನ ಅಭಿವೃದ್ಧಿ (3)
- 18.ಚೌಡಯ್ಯನವರು ನುಡಿಸುತ್ತಿದ್ದ ತಂತಿವಾದ್ಯ (3)
- 19.ಗ್ರಹಗಳು ಸುತ್ತುವ ಮಾರ್ಗ (2)

ಮೇಲಿಂದ ಕೆಳಕ್ಕೆ
- 1.ಬೆರಳಿಗೆ ಧರಿಸುವ ಆಭರಣ (3)
- 3.ನೂಲನ್ನು ತೆಗೆಯುವ ಉಪಕರಣ (3)
- 4.ಎಲ್ಲೆಯಲ್ಲಿರುವ ಕಾಲ ಸೂಚಕ ಯಂತ್ರ (4)
- 6.ಮಲಗುತ್ತಿರುವ ಕೂಸು! (2)
- 7.ತನ್ನ ಹೆಸರನ್ನೇ ನಾಮಾಂಕಿತ ಮಾಡಿಕೊಂಡಿರುವ ಈ ವಚನಕಾರನ ಹುಟ್ಟೂರು ಚೌಡದಾನಪುರ (7)
- 10.ಸಾಮಂತರಿಂದ ಅಧಿರಾಜನಿಗೆ ಸಲ್ಲುವ ಹಣ ಇತ್ಯಾದಿ (2)
- 11.ಹತ್ತಿರದಲ್ಲೇ ಕಾಣುತ್ತಿರುವ ಅರಳೆ! (2)
- 12.ಅನುಭವ ಮಂಟಪದ ಸ್ಥಾಪಿಸಿದವರು (4)
- 13.ಪಾಕ ಆದ ನಂತರ ಕುಡಿದಿರುವ ಷರಬತ್ತು (3)
- 15.ಚಿಲಿಪಿಲಿಯಲ್ಲಿರುವ ಅಕ್ಷರ! (2)
- 16.ಕಮ್ಮಾರನ ಒಲೆ (3)



5849ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಸಂದೇಹ 5.ವೈಯಾಕರಣಿ 7.ಮಾತಾಮಹಿ 8.ನೆಣ 10.ಪಾಶ 12.ಜೀರ್ಕೋಳವಿ 14.ಶರಸಂಧಾನ 15.ಡಮರು

ಮೇಲಿಂದ ಕೆಳಕ್ಕೆ:
1.ವಸಂತ 2.ಗಣಿ 4.ಹರತಾಳ 5.ವೈವಾಹಿಕಜೀವನ 6.ರವಾನೆ 9.ಹಳವಂಡ 11.ಶರೀರ 13.ಕುರುಡು 14.ಶಕ

ಸುಡೊಕು 6235

4	9			2		6		1
		2			5		9	
	4		3		1		7	
1	3	7		8		4	6	5
			4		7		1	
	2		5				3	
6		9				5		4
	5				2		8	7

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6234 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶನಿವಾರ ನವೆಂಬರ್ 2, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಪ್ರತಿಪದ್ ಗಂ. 20-22 ನಕ್ಷತ್ರ: ವಿಶಾಖಾ ಗಂ. 29-58 ಯೋಗ: ಆಯುಷ್ಮಾನ್ ಗ. 11-18 ಕರಣ: ಕಿಂಸ್ತುಘ್ನ ಗಂ. 07-22, ತುಲಾ ಮಾಸದ 16 ನೇ ದಿನ, ಮಳೆನಕ್ಷತ್ರ: ಸ್ವಾತಿ 3.
ರಾಹುಕಾಲ : ಬೆಳಿಗ್ಗೆ 09-00 – 10-30 ಸೂರ್ಯೋದಯ : 06-28 ಸೂರ್ಯಾಸ್ತ : 05-59
ಮುಸ್ಲಿಂ ದಿನಾಂಕ : 29 ರಬಿಯುಸ್ಸಾನಿ , ದಿನ ವಿಶೇಷ : ಗೋಪೂಜೆ, ಗೋವರ್ಧನ ಪೂಜಾ, ಬಲಿ ಪೂಜಾ, ಅನ್ನಕೂಟ, ಅದೃಷ್ಟ ಸಂಖ್ಯೆ: 6, 11

ಮೇಷ: ಬರಹಗಾರರಿಗೆ ಕೀರ್ತಿ ಅರಸಿ ಬರುವುದು, ಆದರೂ ಬದುಕಿನಲ್ಲಿ ಸ್ಥಿರತೆಯ ಅಭಾವ ಕಾಣಲಿದೆ. ವಿವಾಹದ ವಿಚಾರದ ಕಾರ್ಯಗಳಲ್ಲಿನ ವೈಫಲ್ಯದಿಂದಾಗಿ ಮನಸ್ಸಿಗೆ ಅತಿಯಾಗಿ ಬೇಸರವಾಗಬಹುದು.

ವೃಷಭ: ಕುಟುಂಬದ ಸರ್ವತೋಮುಖ ಬೆಳವಣಿಗೆಗೆ ನಿಮ್ಮ ಪಾತ್ರ ಮುಖ್ಯ ಎಂಬುದು ಕುಟುಂಬ ವರ್ಗಕ್ಕೆ ಮನದಟ್ಟಾಗುವುದು. ದ್ವೇಷ ಮನೋಭಾವಗಳು ಸರಿಯಾಗಲಿದೆ. ಪಾಲುದಾರಿಕೆಯಲ್ಲಿ ಅಭಿಪ್ರಾಯ ಭೇದ ಉಂಟಾಗಬಹುದು.

ಮಿಥುನ: ರಾಜಕಾರಣಿಗಳಿಗೆ ಈ ದಿನ ತಮ್ಮ ಪಕ್ಷದ ಬಗೆಗಿನ ಪ್ರಚಾರಕ್ಕಾಗಿ ಉತ್ತಮ ಭಾಷಣ ನಡೆಸಿ ಜನರ ಮನಗೆಲ್ಲುವ ಒಂದು ಸದವಕಾಶ ಲಭಿಸುವುದು. ಮಕ್ಕಳಿಗೆ ವಿದೇಶದಲ್ಲಿ ಶಿಕ್ಷಣ ಕೊಡಿಸಲು ಸಂಘಗಳು ನೆರವಾಗುವವು.

ಕರ್ಕಾಟಕ: ಅಕ್ಕ-ಪಕ್ಕದವರ ಹಾವಭಾವಗಳಿಂದ ಬೇಸರಗೊಂಡು ಜೀವನದ ಪಾಠವನ್ನು ಕಲಿಯುವುದು ಅಗತ್ಯವೆನಿಸುವುದು. ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಎಡವುವ ಪರಿಸ್ಥಿತಿ ನಿಮ್ಮದಾಗಲಿದೆ.

ಸಿಂಹ: ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಸುಮಧುರ ಘಟನೆಯು ನಿಮ್ಮ ಬಾಳಲ್ಲಿ ನಡೆಯಲಿದೆ. ಆಹಾರ ಪದಾರ್ಥದ ಉದ್ದಿಮೆದಾರರಿಗೆ ಹೊಸ ಯೋಜನೆ ಸಾಫಲ್ಯ ತರಲಿದೆ. ಯಾತ್ರೆ ಕೈಗೊಳ್ಳುವ ಮನಸ್ಸಾಗಲಿದೆ.

ಕನ್ಯಾ: ಸಗಟು ವ್ಯಾಪಾರಿಗಳಿಗೆ ಅಧಿಕ ಲಾಭವಾಗಲಿದೆ, ವ್ಯವಹಾರಕ್ಕೆ ಸಹಾಯವಾಗುವಂತಹ ವಾಹನ ಖರೀದಿಯ ಬಗ್ಗೆ ಗಮನಹರಿಸಿ. ಬಂಧು ಮಿತ್ರರೊಡನೆ ಸಂತಸದ ಕ್ಷಣಗಳನ್ನು ಹಂಚಿಕೊಳ್ಳುವಂತಾಗಲಿದೆ.

ತುಲಾ: ಎಲ್ಲಾ ಕಾರ್ಯದಲ್ಲೂ ಆತ್ಮವಿಶ್ವಾಸವಿರಲಿ, ಆದರೇ ನಿಮಗಿರುವ ಅತಿಯಾದ ಆತ್ಮವಿಶ್ವಾಸ ನಿಮ್ಮ ಜಯಕ್ಕೆ ಹೊಡೆತವನ್ನು ನೀಡುವುದು. ಕ್ರೀಡಾಪಟುಗಳಿಗೆ ಅಭ್ಯಾಸದ ಕೊರತೆಯು ವೈಫಲ್ಯಕ್ಕೆ ಕಾರಣವಾಗುವುದು.

ವೃಶ್ಚಿಕ: ರಸ ಪದಾರ್ಥಗಳ ವ್ಯವಹಾರ ನಡೆಸುವವರಿಗೆ ಉತ್ತಮ ಅವಕಾಶ ಸಿಗಲಿದೆ. ಬಹಳ ದಿನದಿಂದ ಇದ್ದಂತಹ ಶತ್ರು ಬಾಧೆ ದೇವತಾನುಗ್ರದಿಂದ ನಿವಾರಣೆ ಆಗಲಿದೆ. ವೈವಾಹಿಕ ಜೀವನದಲ್ಲಿ ನೆಮ್ಮದಿ ಇರಲಿದೆ.

ಧನು: ರಕ್ತ ಸಂಬಂಧಿತವಾದ ಖಾಯಿಲೆಯನ್ನು ಹೊಂದಿದವರು ಅಥವಾ ಅಂತಹ ಅನುಮಾನ ಇರುವವರು ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು. ಬಾಕಿ ಉಳಿದ ಕೆಲಸವನ್ನು ಪೂರ್ತಿಗೊಳಿಸಲು ಈ ದಿನ ಪ್ರಶಸ್ತವಾಗಿದೆ.

ಮಕರ: ಮನೆಯ ಅಭಿವೃದ್ಧಿಯ ವಿಚಾರದಲ್ಲಿ ವದಂತಿಗಳಿಗೆ ಕಿವಿಗೊಡದೆ ಪ್ರಯತ್ನ ಮುಂದುವರೆಸಿ. ಕೃಷಿಯ ಮಾಡುವ ಬಗ್ಗೆ ಒಲವು ಹೆಚ್ಚಲಿದೆ. ವೈದ್ಯರು ತಮ್ಮ ಅಭ್ಯಾಸದಲ್ಲಿ ಹೆಚ್ಚಿನ ಜಾಗ್ರತೆವಹಿಸುವುದು ಒಳ್ಳೆಯದು.

ಕುಂಭ: ಆಸ್ತಿ ವಿಷಯಗಳನ್ನು ತ್ವರಿತ ಗತಿಯಲ್ಲಿ ಬಗೆಹರಿಸಿಕೊಳ್ಳಲು ಹಿತೈಷಿಯೊಬ್ಬರ ನೆರವು ಪಡೆಯುವಿರಿ. ಉದ್ಯೋಗಾಕಾಂಕ್ಷಿಗಳಿಗೆ ಸಂಸ್ಥೆಯ ಲೆಕ್ಕಾಚಾರವನ್ನು ನೋಡುವ ಅಮೋಘ ಅವಕಾಶಗಳ ಸೂಚನೆ ಸಿಗಲಿದೆ.

ಮೀನ: ವಿದ್ಯುತ್ ಅಥವಾ ಅಗ್ನಿಯಿಂದಾಗಲೀ ಅಪಘಾತಗಳು ಸಂಭವಿಸುವ ಲಕ್ಷಣಗಳಿರುವುದು. ಸದ್ಯದ ಪರಿಸ್ಥಿತಿಯಲ್ಲಿ ಕತ್ತಲೆಯ ಪ್ರಪಂಚದಲ್ಲಿರುವ ನಿಮ್ಮ ಜೀವನಕ್ಕೆ ದೂರದಲ್ಲೊಂದು ಜ್ಯೋತಿ ಕಾಣಲಿದೆ.

ವಾಣಿಜ್ಯ ಸಿಲಿಂಡರ್ ದರ ₹62 ಏರಿಕೆ

ನವದೆಹಲಿ (ಪಿಟಿಐ): ವಾಣಿಜ್ಯ ಬಳಕೆಯ 19.2 ಕೆ.ಜಿ ತೂಕದ ಸಿಲಿಂಡರ್ ದರವು ₹62 ಏರಿಕೆಯಾಗಿದ್ದು, ಸದ್ಯ ₹1,802 ಆಗಿದೆ.

ಸತತ ನಾಲ್ಕು ತಿಂಗಳಿಂದ ಒಟ್ಟು ₹156 ಹೆಚ್ಚಳವಾಗಿದೆ. ಮುಂಬೈನಲ್ಲಿ ಸಿಲಿಂಡರ್ ದರ ₹1,754 ಇದ್ದರೆ, ಕೋಲ್ಕತ್ತದಲ್ಲಿ ₹1,911 ಮತ್ತು ಚೆನ್ನೈನಲ್ಲಿ ₹1,964 ಆಗಿದೆ.

ಗೃಹ ಬಳಕೆಗೆ ಬಳಸುವ 14.2 ಕೆ.ಜಿ ತೂಕದ ಅಡುಗೆ ಅನಿಲ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಪ್ರಸ್ತುತ ಇದರ ದರ ₹803 ಇದೆ.

ವಿಮಾನ ಇಂಧನ ದರ ಏರಿಕೆ: ವಿಮಾನದಲ್ಲಿ ಬಳಸುವ ಇಂಧನ ದರವನ್ನು ಶೇ 3ರಷ್ಟು ಏರಿಕೆ ಮಾಡಲಾಗಿದೆ.

ದೆಹಲಿಯಲ್ಲಿ ಪ್ರತಿ ಕಿಲೋಲೀಟರ್‌ಗೆ (ಒಂದು ಸಾವಿರ ಲೀಟರ್) ₹2,941 ಏರಿಕೆಯಾಗಿದ್ದು, ₹90,538 ಆಗಿದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ತಿಳಿಸಿವೆ.

ವಿಮಾನ ಇಂಧನ ದರ (ಎಟಿಎಫ್) ಸೆಪ್ಟೆಂಬರ್‌ನಲ್ಲಿ ₹4,495 ಮತ್ತು ಅಕ್ಟೋಬರ್‌ನಲ್ಲಿ ₹5,883 ಕಡಿತವಾಗಿತ್ತು. ಪ್ರಸ್ತುತ ಎಟಿಎಫ್ ದರ ಮುಂಬೈನಲ್ಲಿ ₹84,642 ಆಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಇಂಧನ ದರ ಹಾಗೂ ವಿದೇಶಿ ವಿನಿಮಯ ದರಕ್ಕೆ ಅನುಗುಣವಾಗಿ ತೈಲ ಮಾರಾಟ ಕಂಪನಿಗಳು ಪ್ರತಿ ತಿಂಗಳು ದರ ಪರಿಷ್ಕರಣೆ ಮಾಡುತ್ತವೆ.

‘ಆ್ಯಪಲ್ ಐಪ್ಯಾಡ್ ಮಾರಾಟ ದ್ವಿಗುಣ’

ನವದೆಹಲಿ (ಪಿಟಿಐ): ಭಾರತದಲ್ಲಿ 2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಆ್ಯಪಲ್‌ನ ಐಪ್ಯಾಡ್ ಮಾರಾಟವು ದ್ವಿಗುಣಗೊಂಡಿದೆ ಎಂದು ಕಂಪನಿಯ ಸಿಇಒ ಟಿಮ್ ಕುಕ್ ತಿಳಿಸಿದ್ದಾರೆ.

ಕಳೆದ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯ ಮಾರಾಟ ಮೌಲ್ಯ ₹7.51 ಲಕ್ಷ ಕೋಟಿ ಆಗಿತ್ತು. ಈ ತ್ರೈಮಾಸಿಕದಲ್ಲಿ ₹7.97 ಲಕ್ಷ ಕೋಟಿ ದಾಟಿದೆ ಎಂದು ತಿಳಿಸಿದ್ದಾರೆ.

‘ಈ ತ್ರೈಮಾಸಿಕದಲ್ಲಿ ಭಾರತದಲ್ಲಿನ ವರಮಾನ ಸಂಗ್ರಹದಲ್ಲಿ ಸಾರ್ವಕಾಲಿಕ ದಾಖಲಾಗಿದೆ. ಈಗಾಗಲೇ, ಮುಂಬೈ ಮತ್ತು ದೆಹಲಿಯಲ್ಲಿ ಆ್ಯಪಲ್ ಮಳಿಗೆ ತೆರೆಯಲಾಗಿದೆ. ಬೆಂಗಳೂರು, ಪುಣೆ, ದೆಹಲಿ ಮತ್ತು ಮುಂಬೈನಲ್ಲಿ ಹೊಸ ಮಳಿಗೆ ತೆರೆಯಲು ನಿರ್ಧರಿಸಿದ್ದು, ವಿಳಂಬ ಮಾಡುವುದಿಲ್ಲ’ ಎಂದು ಹೇಳಿದ್ದಾರೆ.

ಅಮೆರಿಕ, ಬ್ರೆಜಿಲ್, ಮೆಕ್ಸಿಕೊ, ಫ್ರಾನ್ಸ್, ಬ್ರಿಟನ್, ಕೊರಿಯಾ, ಮಲೇಷ್ಯಾ, ಥಾಯ್ಲೆಂಡ್, ಸೌದಿ ಅರೇಬಿಯಾ ಮತ್ತು ಯುಎಇನಲ್ಲಿ ಐಫೋನ್ ಮಾರಾಟದಲ್ಲಿ ಹೆಚ್ಚಳವಾಗಿದ್ದು, ವರಮಾನ ಸಂಗ್ರಹದಲ್ಲಿ ದಾಖಲೆಯಾಗಿದೆ ಎಂದು ತಿಳಿಸಿದ್ದಾರೆ.

ಮುಹೂರ್ತ ವಹಿವಾಟು: ಸೂಚ್ಯಂಕ ಏರಿಕೆ

ಮುಂಬೈ (ಪಿಟಿಐ): ಸತತ ಎರಡು ದಿನದ ವಹಿವಾಟಿನಲ್ಲಿ ಇಳಿಕೆ ಕಂಡಿದ್ದ ಷೇರು ಸೂಚ್ಯಂಕಗಳು ದೀಪಾವಳಿ ಹಬ್ಬದ ಅಂಗವಾಗಿ ನಡೆದ ವಿಶೇಷ ಮುಹೂರ್ತ ವಹಿವಾಟಿನಲ್ಲಿ ಏರಿಕೆ ದಾಖಲಿಸಿವೆ.

ಶುಕ್ರವಾರ ಸಂಜೆ 6 ಗಂಟೆಯಿಂದ 7 ಗಂಟೆವರೆಗೆ ವಹಿವಾಟು ನಡೆಯಿತು. ಬ್ಯಾಂಕಿಂಗ್, ಆಟೊ, ತೈಲ ಮತ್ತು ಅನಿಲ ಷೇರುಗಳ ಖರೀದಿ ಹೆಚ್ಚಳವು ಸೂಚ್ಯಂಕಗಳ ಏರಿಕೆಗೆ ನೆರವಾಯಿತು.

ಸೆನ್ಸೆಕ್ಸ್ 335 ಅಂಶ ಏರಿಕೆಯಾಗಿ, 79,724ಕ್ಕೆ ಸ್ಥಿರಗೊಂಡಿತು. ನಿಫ್ಟಿ 99 ಅಂಶ ಹೆಚ್ಚಳವಾಗಿ 24,304ಕ್ಕೆ ಅಂತ್ಯಗೊಂಡಿತು.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹300-515

ದ್ವಿತಳಿ (ಬಿ.ವಿ) ₹345-669

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹177

ಆರ್‌ಎಸ್‌ಎಸ್-5 ₹172

ಗುಡ್ ಲಾಟ್ ₹168

ಸಂಕಷ್ಟದಲ್ಲಿ ಶೇಂಗಾ ಬೆಳೆಗಾರರು

ಪ್ರಜಾವಾಣಿ ವಾರ್ತೆ

ಹಾವೇರಿ: ಮುಂಗಾರಿನಲ್ಲಿ ಜಿಲ್ಲೆಯ 19 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಶೇಂಗಾ ಬಿತ್ತನೆಯಾಗಿತ್ತು. ಇತ್ತೀಚೆಗೆ ಸತತವಾಗಿ ಸುರಿದ ಮಳೆಯಿಂದಾಗಿ ಸುಮಾರು ಒಂದು ಸಾವಿರ ಹೆಕ್ಟೇರ್‌ನಲ್ಲಿ ಬೆಳೆ ಹಾನಿಗೀಡಾಗಿದ್ದು, ರೈತರು ಆತಂಕಗೊಂಡಿದ್ದಾರೆ.

ಜಿಲ್ಲೆಯ ಹಾವೇರಿ, ರಾಣೆಬೆನ್ನೂರು, ಶಿಗ್ಗಾವಿ ಮತ್ತು ಬ್ಯಾಡಗಿ ತಾಲ್ಲೂಕಿನಲ್ಲಿ ರೈತರು ಹೆಚ್ಚಾಗಿ ಶೇಂಗಾ ಬೆಳೆಯುತ್ತಾರೆ. ಈ ವರ್ಷ ಕೊಯ್ಲಿಗೆ ಬಂದ ಸಂದರ್ಭದಲ್ಲಿಯೇ ಮಳೆ ಸುರಿದಿದ್ದರಿಂದ ಬೆಳೆ ನೆಲ ಕಚ್ಚಿದೆ. ಅಳಿದುಳಿದ ಶೇಂಗಾವನ್ನು ಒಣಗಿಸಿ ಮಾರುಕಟ್ಟೆಗೆ ಸಾಗಿಸುತ್ತಿದ್ದಾರೆ.

ಗುಣಮಟ್ಟದ ಶೇಂಗಾ ಬೆಳೆದಿರುವ ರೈತರೂ ಜಿಲ್ಲೆಯಲ್ಲಿದ್ದಾರೆ. ಅವರ ಸಂಖ್ಯೆ ತೀರಾ ಕಡಿಮೆ.

ಜಿಲ್ಲೆಯ ಎಪಿಎಂಸಿಗಳಲ್ಲಿ ಪ್ರತಿ ಕ್ವಿಂಟಲ್‌ಗೆ ₹3,000 ದಿಂದ ₹6,500 ಬೆಲೆ ಇದೆ. ಟೊಳ್ಳು ಕಾಯಿಗಳಿಗೆ ಬೇಡಿಕೆ ಕಡಿಮೆಯಿದ್ದು, ಬೆಲೆಯೂ ಗಣನೀಯವಾಗಿ ಕುಸಿಯುತ್ತಿದೆ. ಗಟ್ಟಿ ಕಾಯಿಗಳಿಗೆ ಬೇಡಿಕೆಯಿದ್ದು, ದರವೂ ಹೆಚ್ಚಿದೆ.

‘ಕೊಯ್ಲು ಹಂತಕ್ಕೆ ಬಂದಿದ್ದ ಶೇಂಗಾ ಕಾಯಿಗಳು ಮಳೆಯಿಂದಾಗಿ ಮೊಳಕೆಯೊಡೆದಿವೆ. ಈ ವರ್ಷ ಶೇಂಗಾ ಬೆಳೆದು ನಷ್ಟ ಅನುಭವಿಸಿದೆವು’ ಎಂದು ಬರದೂರಿನ ರೈತ ಚಂದ್ರಪ್ಪ ಅಳಲು ತೋಡಿಕೊಂಡರು.

‘ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಿದ್ದ ಶೇಂಗಾವನ್ನು ರೈತರು ಮಾರುಕಟ್ಟೆಗೆ ಸಾಗಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಕೇಂದ್ರ ತೆರೆಯಲು ಸಿದ್ಧತೆ ನಡೆದಿದೆ’ ಎಂದು ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ತಿಳಿಸಿದರು.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲ್ಲೂಕಿನ ರಾಯಪುರ ಗ್ರಾಮದಲ್ಲಿ ಶೇಂಗಾ ಬೆಳೆಯು ಮಳೆ ನೀರಿನಲ್ಲಿ ಕೊಚ್ಚಿ ಹೋಗಿದ್ದು, ಅಪಾರ ನಷ್ಟವಾಗಿದೆ

ಮೂರು ಖರೀದಿ ಕೇಂದ್ರ

ಕೊಪ್ಪಳ: ಜಿಲ್ಲೆಯಲ್ಲಿ 6,000 ಹೆಕ್ಟೇರ್‌ನಲ್ಲಿ ಶೇಂಗಾ ಬೆಳೆಯಲಾಗಿದೆ. ಪ್ರತಿ ಎಕರೆಗೆ ಮೂರರಿಂದ ನಾಲ್ಕು ಕ್ವಿಂಟಲ್ ಇಳುವರಿ ಬಂದಿದೆ. ‘ಜಿಲ್ಲೆಯಲ್ಲಿ ಮೂರು ಕಡೆ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಕೇಂದ್ರ ಆರಂಭಿಸಲಾಗಿದ್ದರೂ ಖರೀದಿ ಕಡಿಮೆಯಾಗುವ ಆತಂಕವಿದೆ’ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ರುದ್ರೇಶಪ್ಪ ಟಿ.ಎಸ್. ತಿಳಿಸಿದರು.

ಕೆಲವೆಡೆ ಹಾನಿ: ರಾಯಚೂರು ಜಿಲ್ಲೆಯ ರಾಯಚೂರು ಹಾಗೂ ದೇವದುರ್ಗ ತಾಲ್ಲೂಕಿನಲ್ಲಿ ಕೆಲವೆಡೆ ಶೇಂಗಾ ಬೆಳೆಯಲಾಗಿದೆ. ಮಳೆಯಿಂದಾಗಿ ಕೆಲವು ಪ್ರದೇಶದಲ್ಲಿ ಬೆಳೆ ಹಾಳಾಗಿದೆ. ಮುಕ್ತ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್‌ಗೆ ಕನಿಷ್ಠ ₹3,285 ಹಾಗೂ ಗರಿಷ್ಠ ₹4,155ರ ವರೆಗೆ ಮಾರಾಟವಾಗುತ್ತಿದೆ.

₹6,783 ಎಂಎಸ್‌ಪಿ ನಿಗದಿ

ಬೆಂಗಳೂರು: ಪ್ರತಿ ಕ್ವಿಂಟಲ್ ಶೇಂಗಾಕ್ಕೆ ಕೇಂದ್ರ ಸರ್ಕಾರ ₹6,783 ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನಿಗದಿಪಡಿಸಿದೆ.

ಒಬ್ಬ ರೈತರಿಂದ ಪ್ರತಿ ಎಕರೆಗೆ ಮೂರು ಕ್ವಿಂಟಲ್‌ನಂತೆ ಗರಿಷ್ಠ 15 ಕ್ವಿಂಟಲ್ ಖರೀದಿಸಲಾಗುತ್ತದೆ. ಬೆಳೆಗಾರರಿಂದ ಖರೀದಿಸುವುದಕ್ಕೂ ಮೊದಲು ‘ಫ್ರೂಟ್’ ತಂತ್ರಾಂಶದಲ್ಲಿ ಅವರ ಹೆಸರು ನೋಂದಾಯಿಸಿಕೊಳ್ಳಬೇಕಿದೆ.

ರೈತರ ಹೆಸರು ನೋಂದಣಿಗೆ 45 ದಿನದ ಕಾಲಾವಕಾಶ ನೀಡಲಾಗಿದೆ. ನೋಂದಣಿಯಾದ ಬಳಿಕ 90 ದಿನದವರೆಗೆ ಖರೀದಿ ಮಾಡಲಾಗುತ್ತದೆ.

ನೀರುಗಾಯಿ ಸೃಷ್ಟಿಸಿದ ಸಂಕಟ

ಚಿತ್ರದುರ್ಗ: ಕೊಯ್ಲಿನ ವೇಳೆ ಸುರಿದ ಮಳೆಯಿಂದಾಗಿ ಶೇಂಗಾದ ಗುಣಮಟ್ಟ ಕುಸಿದಿದೆ. ಶೇಂಗಾ ಬೀಜ ನೀರುಗಾಯಿ ಆಗಿದೆ. ಇದರಿಂದ ಕನಿಷ್ಠ ಬೆಂಬಲ ಬೆಲೆಯಡಿ ತೆರೆದಿರುವ ಖರೀದಿ ಕೇಂದ್ರದಲ್ಲಿ ನಡೆಯುವ ಗುಣಮಟ್ಟದ ಪರಿಶೀಲನೆ ವೇಳೆ ತಿರಸ್ಕೃತಗೊಳ್ಳುತ್ತಿದೆ.

ಜಿಲ್ಲೆಯಾದ್ಯಂತ ಈ ಬಾರಿ 1.07 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಶೇಂಗಾ ಬಿತ್ತನೆ ಮಾಡಲಾಗಿದೆ. ಚಳ್ಳಕೆರೆ, ಚಿತ್ರದುರ್ಗ, ಮೊಳಕಾಲ್ಮುರು ಭಾಗದಲ್ಲಿ ಅತಿಹೆಚ್ಚು ಬಿತ್ತನೆಯಾಗಿದೆ. ಮಳೆಯಿಂದಾಗಿ ಕಾಯಿ ಕೊಳೆತಂತಾಗಿ ಬಣ್ಣ ಸೇರಿದಂತೆ ಗುಣಮಟ್ಟ ಕಳೆದುಕೊಂಡಿದೆ. ಕೆಲವೆಡೆ ಕೊಯ್ಲು ಮಾಡಿದಾಗ ಗಿಡ ಮಾತ್ರ ಬರುತ್ತಿದ್ದು, ಕಾಯಿಗಳು ಭೂಮಿಯಲ್ಲೇ ಉಳಿಯುತ್ತಿವೆ. ರೈತರು ಮುಕ್ತ ಮಾರುಕಟ್ಟೆಯಲ್ಲಿ ಗುಣಮಟ್ಟಕ್ಕೆ ಅನುಗುಣವಾಗಿ ಕ್ವಿಂಟಲ್‌ಗೆ ₹2,000ದಿಂದ ₹5,000ವರೆಗೂ ಮಾರಾಟ ಮಾಡುತ್ತಿದ್ದಾರೆ.

ಹಾವೇರಿ ಜಿಲ್ಲೆಯ ಬರದೂರು ಗ್ರಾಮದ ರಸ್ತೆಬದಿಯಲ್ಲಿ ರೈತರೊಬ್ಬರು ತೊಯ್ದಿರುವ ಶೇಂಗಾವನ್ನು ಒಣಗಿಸಿದರು

ಧಾರಣೆ ಇಳಿಕೆ

ಬಳ್ಳಾರಿ: ಇಲ್ಲಿನ ಎಪಿಎಂಸಿಯಲ್ಲಿ ಕಳೆದ 20 ದಿನದ ಅಂತರದಲ್ಲಿ ಶೇಂಗಾ ಬೆಲೆಯು ಕ್ವಿಂಟಲ್‌ಗೆ ₹2,000 ಕುಸಿದಿದೆ. ಗುಜರಾತ್‌ನಲ್ಲಿ ಈ ವರ್ಷ ಶೇಂಗಾ ಫಸಲು ಸಮೃದ್ಧವಾಗಿದೆ. ಈ ಸರಕು ಮಾರುಕಟ್ಟೆಗೆ ಬಂದಿರುವುದರಿಂದ ಸ್ಥಳೀಯ ಶೇಂಗಾದ ಬೆಲೆ ಇಳಿಕೆಯಾಗಿದೆ. ಅಲ್ಲದೆ, ಕಳೆದ ಮೂರು ವಾರದಿಂದ ಬಳ್ಳಾರಿ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ವ್ಯಾಪಕ ಮಳೆಯಾಗಿದೆ. ಇದರಿಂದ ಕಡಲೆಕಾಯಿ ಫಸಲು ಹಾಳಾಗಿದೆ. ಹಾಗಾಗಿ, ದರ ಇಳಿಕೆಯಾಗಿದೆ ಎಂದು ವರ್ತಕರು ಹೇಳುತ್ತಾರೆ. ಇಲ್ಲಿನ ಎಪಿಎಂಸಿಗೆ ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಸೇರಿ ಆಂಧ್ರಪ್ರದೇಶದ ಕರ್ನೂಲು, ಅನಂತಪುರ ಜಿಲ್ಲೆಯಿಂದಲೂ ಶೇಂಗಾ ಪೂರೈಕೆಯಾಗುತ್ತದೆ.

ಒಣಗಿಸಲು ಆಗದೆ ಅಸಹಾಯಕತೆ

ಗದಗ: ಮಳೆಯಿಂದಾಗಿ ಗದಗ ಜಿಲ್ಲೆಯ ಶೇಂಗಾ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಾಯಿ ಒಣಗಿಸಲು ಸಾಧ್ಯ ಆಗುತ್ತಿಲ್ಲ. ಲಕ್ಷ್ಮೇಶ್ವರ ತಾಲ್ಲೂಕಿನ ರೈತರು ಈ ಬಾರಿ ಬಂಪರ್ ಇಳುವರಿಯ ನಿರೀಕ್ಷೆಯಲ್ಲಿದ್ದರು. ಒಂದು ಬಳ್ಳಿಯಲ್ಲಿ 70–80 ಕಾಯಿ ಬಿಟ್ಟಿವೆ. ಆದರೆ, ಸುರಿಯುತ್ತಿರುವ ಮಳೆಯು ಅವರಲ್ಲಿ ಆತಂಕ ಹೆಚ್ಚಿಸಿದೆ. ಮಳೆಯಿಂದ ಶೇಂಗಾ ಬಳ್ಳಿಯೂ ಕೊಳೆಯಲಿದೆ ಎಂದು ಹೇಳುತ್ತಾರೆ. ‘ಸ್ಥಳೀಯ ಮಾರುಕಟ್ಟೆಯಲ್ಲಿ ಬಳ್ಳಿ ಶೇಂಗಾ ಬೆಲೆಯು ಕ್ವಿಂಟಲ್‌ಗೆ ₹6,000 ಇದೆ. ಮಳೆ ಕಡಿಮೆಯಾದರೆ ಹರಗಲು ಅನುಕೂಲವಾಗುತ್ತದೆ. ಇಲ್ಲದಿದ್ದರೆ ಕಷ್ಟವಾಗಲಿದೆ’ ಎಂದು ಬಾಲೆಹೊಸೂರು ಗ್ರಾಮದ ರೈತ ಕೇಶವ ಕಟ್ಟಿಮನಿ ತಿಳಿಸಿದರು.

ಗುಣಮಟ್ಟ ಕುಸಿತದ ಆತಂಕ

ಹೊಸಪೇಟೆ: ವಿಜಯನಗರ ಜಿಲ್ಲೆಯಲ್ಲಿ ಅಧಿಕ ಮಳೆಯಿಂದಾಗಿ ಸುಮಾರು 30 ಹೆಕ್ಟೇರ್‌ನಲ್ಲಿ ಬೆಳೆದಿದ್ದ ಶೇಂಗಾ ಬೆಳೆ ನಾಶವಾಗಿದೆ. ಶೇಂಗಾ ಗುಣಮಟ್ಟವೂ ಕುಸಿಯುವಂತಾಗಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶರಣಪ್ಪ ಮುದುಗಲ್ ತಿಳಿಸಿದ್ದಾರೆ. ಸೆಪ್ಟೆಂಬರ್‌ನಲ್ಲಿ ಕೊಟ್ಟೂರು ಎಪಿಎಂಸಿಯಲ್ಲಿ ಶೇಂಗಾ ಧಾರಣೆಯು ಕ್ವಿಂಟಲ್‌ಗೆ ₹7,200 ಇತ್ತು. ಸದ್ಯ ₹6,710ಕ್ಕೆ ಕುಸಿದಿದೆ.

ಉದುರಿದ ಕಾಯಿ

ಧಾರವಾಡ: ಮುಂಗಾರಿನಲ್ಲಿ ಜಿಲ್ಲೆಯ 16,450 ಹೆಕ್ಟೇರ್ ಪ್ರದೇಶದಲ್ಲಿ ಶೇಂಗಾ ಬಿತ್ತನೆಯಾಗಿತ್ತು. ಮಳೆಯಿಂದಾಗಿ ಆರು ಸಾವಿರ ಹೆಕ್ಟೇರ್‌ಗೂ ಹೆಚ್ಚು ಶೇಂಗಾ ಬೆಳೆ ಹಾನಿಯಾಗಿದೆ.

ಕುಂದಗೋಳ, ಹುಬ್ಬಳ್ಳಿ, ಧಾರವಾಡ ತಾಲ್ಲೂಕಿನಲ್ಲಿ ಹೆಚ್ಚು ಬಿತ್ತನೆ ಮಾಡಲಾಗಿತ್ತು.

‘ನಾಲ್ಕು ಎಕರೆಯಲ್ಲಿ ಶೇಂಗಾ ಬೆಳೆದಿದ್ದೆ. ಫಸಲು ಚೆನ್ನಾಗಿತ್ತು. ಮಳೆಯಿಂದಾಗಿ ಕಾಯಿಗಳು ಉದುರಿ ಸ್ವಲ್ಪ ನಷ್ಟವಾಯಿತು. 60 ಕ್ವಿಂಟಲ್ ಫಸಲು ಬರಬೇಕಾಗಿತ್ತು. 40 ಕ್ವಿಂಟಲ್ ಫಸಲು ಸಿಕ್ಕಿದೆ’ ಎಂದು ಧಾರವಾಡ ತಾಲ್ಲೂಕಿನ ಬ್ಯಾಹಟ್ಟಿಯ ಬೆಳೆಗಾರ ದ್ಯಾವನಗೌಡ ಹುಯಿಲಗೋಳ ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ
ಎಸ್.ಎನ್. ಶಿವಣ್ಣನವರು
ಪೊಲೀಸ್ ಇಲಾಖೆ, ತುಮಕೂರು
ಪತ್ನಿ ಗಂಗಮ್ಮ, ಮಕ್ಕಳು ಉಮೇಶ್.ಎಸ್, ದಿನೇಶ್. ಎಸ್ ಮತ್ತು ಕುಟುಂಬದವರು, 7829893303



ಅಕ್ಟೋಬರ್‌ನಲ್ಲಿ ₹1.87 ಲಕ್ಷ ಕೋಟಿ ವರಮಾನ
ಜಿಎಸ್‌ಟಿ ಸಂಗ್ರಹ ದಾಖಲೆ

ನವದೆಹಲಿ (ಪಿಟಿಐ): ಅಕ್ಟೋಬರ್‌ನಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ₹1.87 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 9ರಷ್ಟು ಏರಿಕೆಯಾಗಿದ್ದು, ದಾಖಲೆಯಾಗಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಪ್ರಸಕ್ತ ವರ್ಷದ ಏಪ್ರಿಲ್‌ನಲ್ಲಿ ₹2.10 ಲಕ್ಷ ಕೋಟಿ ಜಿಎಸ್‌ಟಿ ವರಮಾನ ಸಂಗ್ರಹವಾಗಿ ಹೊಸ ಮೈಲಿಗಲ್ಲು ಸ್ಥಾಪನೆಯಾಗಿತ್ತು. ಆ ಬಳಿಕ ಅತಿಹೆಚ್ಚು ವರಮಾನ ಸಂಗ್ರಹವಾಗಿರುವ ಎರಡನೇ ತಿಂಗಳು ಇದಾಗಿದೆ.

ಕೇಂದ್ರ ಜಿಎಸ್‌ಟಿ ₹33,821 ಕೋಟಿ, ರಾಜ್ಯ ಜಿಎಸ್‌ಟಿ ₹41,864 ಕೋಟಿ, ಸಮಗ್ರ ಜಿಎಸ್‌ಟಿ ₹99,111 ಕೋಟಿ ಹಾಗೂ ₹12,550 ಕೋಟಿ ಸೆಸ್ ಸಂಗ್ರಹವಾಗಿದೆ. ದೇಶೀಯ ಮಟ್ಟದಲ್ಲಿ ಮಾರಾಟದಲ್ಲಿನ ಏರಿಕೆಯು ವರಮಾನ ಹೆಚ್ಚಳಕ್ಕೆ ನೆರವಾಗಿದೆ.

ದೇಶೀಯ ವಹಿವಾಟು ಮೇಲಿನ ಜಿಎಸ್‌ಟಿ ಸಂಗ್ರಹದಲ್ಲಿ ಶೇ 10.6ರಷ್ಟು ಹೆಚ್ಚಳವಾಗಿದ್ದು, ₹1.42 ಲಕ್ಷ ಕೋಟಿ ಆಗಿದೆ. ಆಮದು ಮೇಲಿನ ತೆರಿಗೆ ಸಂಗ್ರಹದಲ್ಲಿ ಶೇ 4ರಷ್ಟು ಏರಿಕೆಯಾಗಿದ್ದು, ₹45,096 ಕೋಟಿ ಆಗಿದೆ.

ಒಟ್ಟು ₹19,306 ಕೋಟಿ ಮರುಪಾವತಿ ಮಾಡಲಾಗಿದೆ. ಮರುಪಾವತಿ ಬಳಿಕ ಒಟ್ಟು ವರಮಾನ ಸಂಗ್ರಹ ₹1.68 ಲಕ್ಷ ಕೋಟಿ ಆಗಿದೆ. ಕಳೆದ ವರ್ಷದ ಅಕ್ಟೋಬರ್‌ನಲ್ಲಿ ₹1.72 ಲಕ್ಷ ಕೋಟಿ ವರಮಾನ ಸಂಗ್ರಹವಾಗಿತ್ತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,205
ಇಂದಿನ ಅಂತ್ಯ	24,304
▲	99
ದಿನದ ಗರಿಷ್ಠ	24,368

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ಪೆಟ್ರೋಲ್ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ದೇಶದಲ್ಲಿ ಪೆಟ್ರೋಲ್ ಮಾರಾಟವು ಅಕ್ಟೋಬರ್ ತಿಂಗಳಲ್ಲಿ ಶೇ 7.3ರಷ್ಟು ಏರಿಕೆಯಾಗಿದೆ. ಆದರೆ, ಇದೇ ವೇಳೆ ಡೀಸೆಲ್ ಬಳಕೆ ಶೇ 3.3ರಷ್ಟು ಕಡಿಮೆಯಾಗಿದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಶುಕ್ರವಾರ ತಿಳಿಸಿವೆ.

ಅಕ್ಟೋಬರ್‌ನಲ್ಲಿ 31 ಲಕ್ಷ ಟನ್ ಪೆಟ್ರೋಲ್ ಮಾರಾಟವಾಗಿದೆ. ಹಿಂದಿನ ವರ್ಷದ ಇದೇ ತಿಂಗಳಲ್ಲಿ 28.7 ಲಕ್ಷ ಟನ್ ಮಾರಾಟವಾಗಿತ್ತು. ಡೀಸೆಲ್ ಮಾರಾಟವು ಶೇ 3.3ರಷ್ಟು ಕಡಿಮೆಯಾಗಿದ್ದು, 67 ಲಕ್ಷ ಟನ್ ಮಾರಾಟವಾಗಿದೆ.

ಹಬ್ಬದ ಋತುವಿನ ಅಂಗವಾಗಿ ಗ್ರಾಹಕರು ವೈಯಕ್ತಿಕ ವಾಹನಗಳನ್ನು ಹೆಚ್ಚು ಬಳಕೆ ಮಾಡಿದ್ದಾರೆ. ಇದರಿಂದ ಪೆಟ್ರೋಲ್ ಮಾರಾಟದಲ್ಲಿ ಏರಿಕೆಯಾಗಿದೆ. ಮಳೆಯಿಂದ ಕೃಷಿ ಚಟುವಟಿಕೆಗಳು ಕಡಿಮೆಯಾಗಿದೆ. ಇದೇ ಡೀಸೆಲ್ ಮಾರಾಟದ ಇಳಿಕೆಗೆ ಕಾರಣ ಎಂದು ಹೇಳಿವೆ.

ಭಾರತದ 15ಕ್ಕೂ ಅಧಿಕ ಉದ್ಯಮಗಳ ಮೇಲೆ ನಿರ್ಬಂಧ ಹೇರಿದ ಅಮೆರಿಕ

ವಾಷಿಂಗ್ಟನ್(ಪಿಟಿಐ): ರಷ್ಯಾದ ಸೇನೆ ಹಾಗೂ ಕೈಗಾರಿಕೆಗಳನ್ನು ಬೆಂಬಲಿಸಿದ ಆರೋಪಕ್ಕೆ ಸಂಬಂಧಿಸಿ, ಭಾರತದ 15ಕ್ಕೂ ಹೆಚ್ಚು ಉದ್ಯಮಗಳು ಸೇರಿದಂತೆ 275 ವ್ಯಕ್ತಿಗಳು/ಸಂಸ್ಥೆಗಳ ಮೇಲೆ ಅಮೆರಿಕ ನಿರ್ಬಂಧ ಹೇರಿದೆ.

ಚೀನಾ, ಸ್ವಿಟ್ಜರ್ಲೆಂಡ್, ಥಾಯ್ಲೆಂಡ್ ಹಾಗೂ ಟರ್ಕಿಯ ಕೆಲ ಕಂಪನಿಗಳ ಮೇಲೂ ನಿರ್ಬಂಧ ಹೇರಲಾಗಿದೆ.

ರಷ್ಯಾ ನಡೆಸುತ್ತಿರುವ ಯುದ್ಧಕ್ಕೆ ನೆರವಾಗುವ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಶಸ್ತ್ರಾಸ್ತ್ರಗಳನ್ನು ಪೂರೈಕೆ ಮಾಡಿದ್ದಕ್ಕಾಗಿ ಈ ನಿರ್ಬಂಧ ಹೇರಲಾಗಿದೆ ಎಂದು ಹಣಕಾಸು ಇಲಾಖೆ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ಹೇಳಲಾಗಿದೆ.

ಇಲಾಖೆ ಬಿಡುಗಡೆ ಮಾಡಿರುವ ಪಟ್ಟಿ ಪ್ರಕಾರ, ಭಾರತದ ಅಭಾರ್ ಟೆಕ್ನಾಲಜೀಸ್ ಆ್ಯಂಡ್ ಸರ್ವಿಸಸ್ ಪ್ರೈವೆಟ್ ಲಿಮಿಟೆಡ್(ಅಭಾರ್), ಡೆನ್ವಾಸ್ ಸರ್ವಿಸಸ್ ಪ್ರೈವೆಟ್ ಲಿ., ಎಮ್‌ಸಿಸ್ಟೆಕ್, ಗ್ಯಾಲಕ್ಸಿ ಬೇರಿಂಗ್ ಲಿಮಿಟೆಡ್., ಆರ್ಬಿಟ್ ಫಿನ್‌ಟ್ರೇಡ್ ಎಲ್‌ಎಲ್‌ಪಿ, ಇನ್ನೋವಿಯೊ ವೆಂಚರ್ಸ್, ಕೆಡಿಜಿ ಎಂಜಿನಿಯರಿಂಗ್ ಪ್ರೈ.ಲಿ. ಹಾಗೂ ಖುಷ್ಬು ಹೋನಿಂಗ್ ಪ್ರೈ.ಲಿಮಿಟೆಡ್ ಕಂಪನಿಗಳ ಮೇಲೆ ನಿರ್ಬಂಧ ಹೇರಲಾಗಿದೆ.

ಲೋಕೇಶ್ ಮಷಿನ್ಸ್ ಲಿ., ಪಾಯಿಂಟರ್ ಎಲೆಕ್ಟ್ರಾನಿಕ್ಸ್, ಆರ್‌ಆರ್‌ಜಿ ಎಂಜಿನಿಯರಿಂಗ್ ಟೆಕ್ನಾಲಜೀಸ್ ಪ್ರೈ.ಲಿ., ಶಾರ್ಪ್‌ಲೈನ್ ಆಟೊಮೇಷನ್ ಪ್ರೈ.ಲಿ., ಶೌರ್ಯ ಏರೋನಾಟಿಕ್ಸ್ ಪ್ರೈ.ಲಿ., ಶ್ರೀಗೀ ಇಂಪೆಕ್ಸ್ ಪ್ರೈ.ಲಿ., ಶ್ರೇಯಾ ಲೈಫ್ ಸೈನ್ಸಸ್ ಪ್ರೈ.ಲಿ. ಹೆಸರು ಕೂಡ ಈ ಪಟ್ಟಿಯಲ್ಲಿ ಇವೆ.

ನಿಧನ ವಾರ್ತೆ

ವಿವೇಕ್ ದೇಬರಾಯ್

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ಅವರ ಆರ್ಥಿಕ ಸಲಹಾ ಮಂಡಳಿಯ (ಇಎಸಿ-ಪಿಎಂ) ಅಧ್ಯಕ್ಷ ವಿವೇಕ್ ದೇಬರಾಯ್ (69) ಅವರು ಶುಕ್ರವಾರ ಬೆಳಿಗ್ಗೆ ನಿಧನರಾದರು.

ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಗುರುವಾರ ರಾತ್ರಿ ಏಮ್ಸ್‌ಗೆ ದಾಖಲಿಸಲಾಗಿತ್ತು ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ದೇಬರಾಯ್ ಅವರು ರಾಮಕೃಷ್ಣ ಮಿಷನ್ ಶಾಲೆ, ಪ್ರೆಸಿಡೆನ್ಸಿ ಕಾಲೇಜು, ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್ ಮತ್ತು ಕೇಂಬ್ರಿಡ್ಜ್‌ನ ಟ್ರಿನಿಟಿ ಕಾಲೇಜಿನ ವಿದ್ಯಾರ್ಥಿಯಾಗಿದ್ದಾರೆ.

ಕೋಲ್ಕತ್ತದ ಪ್ರೆಸಿಡೆನ್ಸಿ ಕಾಲೇಜು, ಪುಣೆಯ ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟಿಕ್ಸ್ ಆ್ಯಂಡ್ ಎಕನಾಮಿಕ್ಸ್, ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫಾರಿನ್ ಟ್ರೇಡ್, ಹಣಕಾಸು ಸಚಿವಾಲಯದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

2019ರ ವರೆಗೆ ನೀತಿ ಆಯೋಗದ ಸದಸ್ಯರಾಗಿದ್ದ ಅವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಅವರಿಗೆ 2015ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಪುರಸ್ಕರಿಸಲಾಗಿತ್ತು.

ಮಹಿಳೆ ಕುರಿತ ಮಾಜಿ ಅಧ್ಯಕ್ಷರ ಹೇಳಿಕೆಗೆ ತಿರುಗೇಟು

ಟ್ರಂಪ್‌ಗೆ ಸೇಡು ಮುಖ್ಯ: ಕಮಲಾ ಟೀಕೆ

ಫಿಲಡೆಲ್ಫಿಯಾ/ರೆನೊ (ಪಿಟಿಐ/ಎಎಫ್‌ಪಿ): ಅಮೆರಿಕ ಅಧ್ಯಕ್ಷೀಯ ಚುನಾವಣೆ ಸಮೀಪಿಸುತ್ತಿರುವಂತೆಯೇ, ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ ಅವರು ತಮ್ಮ ಎದುರಾಳಿ ಡೊನಾಲ್ಡ್ ಟ್ರಂಪ್ ವಿರುದ್ಧದ ವಾಗ್ದಾಳಿಯನ್ನು ಮತ್ತಷ್ಟು ಹರಿತಗೊಳಿಸಿದ್ದಾರೆ.

ಇತ್ತೀಚೆಗಿನ ರ‍್ಯಾಲಿಯೊಂದರಲ್ಲಿ ಮಹಿಳೆಯರ ಕುರಿತು ಟ್ರಂಪ್ ಹೇಳಿದ್ದ ಮಾತುಗಳನ್ನು ಪ್ರಸ್ತಾಪಿಸಿ ಅವರ ವಿರುದ್ಧ ಟೀಕಾಪ್ರಹಾರ ನಡೆಸಿರುವ ಕಮಲಾ, ‘ಟ್ರಂಪ್ ಅವರು ತಮ್ಮ ಮಾನಸಿಕ ಸ್ಥಿಮಿತವನ್ನು ಕಳೆದುಕೊಳ್ಳುತ್ತಿದ್ದಾರೆ. ಸೇಡಿನ ರಾಜಕಾರಣವೇ ಮುಖ್ಯವಾಗಿರುವ ಅವರು, ಅನಿರ್ಬಂಧಿತ ಅಧಿಕಾರಕ್ಕೆ ಹಾತೊರೆಯುತ್ತಿದ್ದಾರೆ’ ಎಂದು ಶುಕ್ರವಾರ ಹೇಳಿದ್ದಾರೆ.

ಲಾಸ್‌ವೇಗಾಸ್‌ನಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಟ್ರಂಪ್ ಅವರಿಗೆ ‘ದ್ವೇಷ’ ಹಾಗೂ ಜನರಲ್ಲಿ ಒಡಕು ಮೂಡಿಸುವುದೇ ಮುಖ್ಯವಾಗಿದೆ. ಅವರು ಒಂದು ವೇಳೆ ಗೆದ್ದಲ್ಲಿ, ತಮ್ಮ ಶತ್ರುಗಳ ಪಟ್ಟಿಯನ್ನೇ ಶ್ವೇತಭವನಕ್ಕೆ ತರುತ್ತಾರೆ. ನಾನು ನನ್ನ ಆದ್ಯತೆಗಳು ಹಾಗೂ ಅವುಗಳನ್ನು ಕಾರ್ಯಗತಗೊಳಿಸುವುದು ಹೇಗೆ ಎಂಬ ಪಟ್ಟಿಯನ್ನು ಒಯ್ಯುತ್ತೇನೆ’ ಎಂದು ಹೇಳಿದ್ದಾರೆ.

ಖ್ಯಾತ ಗಾಯಕಿ ಜೆನ್ನಿಫರ್ ಲೋಪೆಜ್ ಇದೇ ವೇಳೆ, ರ‍್ಯಾಲಿಯಲ್ಲಿ ಪಾಲ್ಗೊಂಡು, ಕಮಲಾ ಪರ ಮತ ಯಾಚಿಸಿದರು.



ತಮಗೆ ಸಂಬಂಧಿಸಿದ ವಿಚಾರಗಳ ಕುರಿತು ಮಹಿಳೆಯರು ನಿರ್ಧಾರ ಕೈಗೊಳ್ಳುವ ಹಕ್ಕು ಹೊಂದಿದ್ದಾರೆ ಎಂಬುದನ್ನು ಡೊನಾಲ್ಡ್ ಟ್ರಂಪ್ ಅರ್ಥ ಮಾಡಿಕೊಂಡಿಲ್ಲ

ಕಮಲಾ ಹ್ಯಾರಿಸ್
ಅಧ್ಯಕ್ಷ ಸ್ಥಾನದ ಡೆಮಾಕ್ರಟಿಕ್ ಅಭ್ಯರ್ಥಿ

ಗಡಿಗೆ ಹೊಂದಿಕೊಂಡಿರುವ ರಾಜ್ಯ ನ್ಯೂ ಮೆಕ್ಸಿಕೊದಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡಿದ್ದ ಟ್ರಂಪ್, ‘ವಲಸಿಗರು ಹಿಂಸಾಚಾರದಲ್ಲಿ ತೊಡಗುತ್ತಾರೆ. ಅವರು ಅಮೆರಿಕದಲ್ಲಿ ವ್ಯಾಪಕ ಹತ್ಯೆಗಳನ್ನು ನಡೆಸಿದ್ದಾರೆ’ ಎಂದು ಹೇಳಿದ್ದರು.

ಗರ್ಭಪಾತ ಹಕ್ಕು ಕುರಿತು ಪ್ರಸ್ತಾಪಿಸಿದ್ದ ಟ್ರಂಪ್, ‘ನಾನು ಅಮೆರಿಕ ಮಹಿಳೆಯರ ರಕ್ಷಣೆ ಬಯಸುತ್ತೇನೆ. ನನ್ನ ಈ ನಡೆಯನ್ನು ಮಹಿಳೆಯರು ಇಷ್ಟಪಡಲಿ ಅಥವಾ ಬಿಡಲಿ’ ಎಂದು ಮತ್ತೊಂದು ಪ್ರಚಾರಸಭೆಯಲ್ಲಿ ಹೇಳಿದ್ದರು.

ಈ ಹೇಳಿಕೆಗಳನ್ನು ಪ್ರಸ್ತಾಪಿಸಿ, ಕಮಲಾ ಅವರು ಟ್ರಂಪ್ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ.

ತಾಯಿಯ ಹೋರಾಟ ಪ್ರಸ್ತಾಪಿಸಿದ ಕಮಲಾ

ವಾಷಿಂಗ್ಟನ್(ಎಎಫ್‌ಪಿ): ಅಧ್ಯಕ್ಷೀಯ ಚುನಾವಣೆಯಲ್ಲಿ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಭಾರಿ ಪೈಪೋಟಿ ನೀಡುತ್ತಿರುವ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ ಅವರು, ಪ್ರತಿ ಪ್ರಚಾರ ಭಾಷಣದಲ್ಲಿ ತಮ್ಮ ತಾಯಿ ಕುರಿತು ಪ್ರಸ್ತಾಪ ಮಾಡುತ್ತಿದ್ದಾರೆ.

ತಮ್ಮ ಹೋರಾಟದ ಜೀವನ ಕುರಿತು ವಿವರಿಸುವುದು ಅಷ್ಟೇ ಅಲ್ಲ, ಮಹಿಳಾ ಕೇಂದ್ರಿತ ವಿದ್ಯಮಾನಗಳು ಹಾಗೂ ಜನಾಂಗೀಯವಾದ ಕುರಿತು ವಿವರಿಸಲು ತಾಯಿಯ ಜೀವನದ ಘಟನೆಗಳನ್ನು ಕಮಲಾ ವಿವರಿಸುತ್ತಿದ್ದಾರೆ.

‘ಐದು ಅಡಿ ಎತ್ತರ ನಿಲುವಿನ, ಗೋಧಿ ಮೈಬಣ್ಣದ ನನ್ನ ತಾಯಿ ಪ್ರತಿಭಾವಂತೆ. ದೊಡ್ಡ ಮಗಳಾದ ನಾನು, ಈ ಸಮಾಜ ನನ್ನ ತಾಯಿಯನ್ನು ಹೇಗೆ ನೋಡುತ್ತಿತ್ತು ಎಂಬುದನ್ನು ಕಣ್ಣಾರೆ ನೋಡಿರುವೆ’ ಎಂದು ಹೇಳಿದ್ದಾರೆ.

ತಾಯಿ ಶ್ಯಾಮಲಾ ಗೋಪಾಲನ್, ಸ್ನಾತಕೋತ್ತರ ಪದವಿಗಾಗಿ 19ನೇ ವಯಸ್ಸಿನಲ್ಲಿ ಭಾರತ ತೊರೆದು ಕ್ಯಾಲಿಫೋರ್ನಿಯಾಕ್ಕೆ ಬಂದು, ನಂತರ ನೆಲೆ ಕಂಡುಕೊಂಡಿದ್ದನ್ನು ಕಮಲಾ ವಿವರಿಸಿದ್ದಾರೆ.

ಹಿಂದೂಗಳ ಹಕ್ಕು ರಕ್ಷಣೆಗೆ ಟ್ರಂಪ್ ಭರವಸೆ: ಹಿಂದೂ ಅಮೆರಿಕನ್ನರ ಶ್ಲಾಘನೆ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಮತ್ತು ಬಾಂಗ್ಲಾದೇಶ ಸೇರಿದಂತೆ ಜಗತ್ತಿನಾದ್ಯಂತ ಹಿಂದೂಗಳ ಹಕ್ಕುಗಳನ್ನು ರಕ್ಷಿಸುವ ಮತ್ತು ಮೂಲಭೂತ ಎಡಪಂಥೀಯರ ಧರ್ಮ ವಿರೋಧಿ ಕಾರ್ಯಸೂಚಿಯಿಂದ ರಕ್ಷಿಸುವ ಭರವಸೆ ನೀಡಿರುವ ಅಮೆರಿಕ ಅಧ್ಯಕ್ಷೀಯ ಚುನಾವಣೆಯ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರನ್ನು ಹಿಂದೂ ಅಮೆರಿಕನ್ ಗುಂಪುಗಳು ಶ್ಲಾಘಿಸಿವೆ.

‘ಹಿಂದೂಸ್ ಫಾರ್ ಅಮೆರಿಕ ಫಸ್ಟ್’ನ ಸಂಸ್ಥಾಪಕ ಮತ್ತು ಅಧ್ಯಕ್ಷ ಉತ್ಸವ್ ಸಂದುಜಾ ಅವರು, ‘ಟ್ರಂಪ್ ಅವರಿಗೆ ನಾವು ಕೃತಜ್ಞರಾಗಿರುತ್ತೇವೆ. ಕಮಲಾ ಅವರು ಈ ವಿಷಯದ ಬಗ್ಗೆ ಏನನ್ನೂ ಹೇಳದಿರುವುದು ಬೇಸರ ತರಿಸಿದೆ. ಇದರಿಂದಾಗಿಯೇ ಈ ಚುನಾವಣೆಯಲ್ಲಿ ದೊಡ್ಡ ಬದಲಾವಣೆ ಆಗಲಿದೆ ಎಂದು ನಾನು ಭಾವಿಸುತ್ತೇವೆ’ ಎಂದು ಪಿಟಿಐಗೆ ಪ್ರತಿಕ್ರಿಯಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General
ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ
Astrology
ಕೆಲಸಆದ ನಂತರ ಕಾಣಿಕೆ ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಧನವಶ, ಜನವಶ, ಭೂಮಿ ವಶ, ಶತ್ರುನಾಶ, ಇನ್ನೂ ನಿಮ್ಮ ಸಮಸ್ಯೆ ಏನೇಯಿದ್ದರೂ ಕಾಮಾಕ್ಯಕ್ಷೇತ್ರದ ಅಥರ್ವಣ ಆಳಂದಿಭೈರವಿ ತಾಂತ್ರಿಕವಿದ್ಯೆಯಿಂದ ಕೇವಲ 11ಗಂಟೆಯಲ್ಲಿ ಪೋನಿನ ಮೂಲಕ 100%ಶಾಶ್ವತ ಪರಿಹಾರ. ಕರೆಮಾಡಿ: 9686168466.

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಕ್ಲಾಸಿಫೈಡ್ಸ್
ADMISSION CORNER
A JAIN INSTITUTION
ADARSH INSTITUTE OF MANAGEMENT & INFORMATION TECHNOLOGY (AIMIT)
Affiliated to Bengaluru City University & Approved by AICTE
ADARSH GROUP OF INSTITUTIONS AGI BENGALURU Estd : 1971
MBA
Master of Business Administration
DUAL Specialization
TRIPLE Course Advantage
PGCET Code B361
1st Rank Bengaluru City University(MBA) Sahana Shree B
Visit our campus and get upto 2 LAKH SCHOLARSHIP
PLACEMENT 100 RECORD
Visit : adarshaimit.org
Call Us For More Info +91 7406740077/88

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036
*Conditions apply

‘ಪುರಿ: ರತ್ನ ಭಂಡಾರಕ್ಕೆ ಸಾಗಲು ರಹಸ್ಯ ಮಾರ್ಗಗಳಿಲ್ಲ’

ಭುವನೇಶ್ವರ (ಪಿಟಿಐ): ‘ಪುರಿ ಜಗನ್ನಾಥ ದೇವಾಲಯ ರತ್ನ ಭಂಡಾರವನ್ನು ತಲುಪಲು ಯಾವುದೇ ರಹಸ್ಯ ಮಾರ್ಗಗಳಿಲ್ಲ ಎಂಬುದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್ಐ)ನಡೆಸಿದ ಸಮೀಕ್ಷೆಯಲ್ಲಿ ಪತ್ತೆಯಾಗಿದೆ’ ಎಂದು ಕಾನೂನು ಸಚಿವ ಪೃಥ್ವಿರಾಜ್ ಹರಿಚಂದನ್ ಶುಕ್ರವಾರ ಹೇಳಿದರು.

ಇಲಾಖೆಯು ನೆಲದಾಳದ ವಸ್ತುಗಳನ್ನು ಪತ್ತೆ ಮಾಡುವ ರೆಡಾರ್ ಬಳಸಿ ಈ ಅಂಶವನ್ನು ಪತ್ತೆಹಚ್ಚಿದೆ. ‘ಪ್ರಥಮ ಹಂತದ ಸಮೀಕ್ಷೆಯಲ್ಲಿ ರಹಸ್ಯ ಮಾರ್ಗ ಇರುವುದು ಪತ್ತೆಯಾಗಿಲ್ಲ. ಸಮೀಕ್ಷೆ ಪೂರ್ಣಗೊಳ್ಳುವವರೆಗೆ ಈ ಅಂಶವನ್ನು ಖಚಿತಪಡಿಸಲು ಸಾಧ್ಯವಿಲ್ಲ. ಆದರೆ, ದೇವಾಲಯದ ರತ್ನ ಭಂಡಾರದಲ್ಲಿ ಬಿರುಕು ಮೂಡಿರುವುದು ಸಮೀಕ್ಷೆಯಿಂದ ಪತ್ತೆಯಾಗಿದೆ’ ಎಂದರು.

ರತ್ನ ಭಂಡಾರಕ್ಕೆ ಸಾಗುವುದಕ್ಕೆ ರಹಸ್ಯ ಮಾರ್ಗವಿದ್ದು, ಇಲ್ಲಿ ಬೆಲೆ ಬಾಳುವ ವಸ್ತುಗಳು, ಒಡವೆಗಳು ಇವೆ ಎಂಬುದಾಗಿ ಹೇಳಲಾಗಿತ್ತು. ಈ ಕಾರಣದಿಂದಲೇ ಪುರಾತತ್ವ ಸರ್ವೇಕ್ಷಣಾ ಇಲಾಖೆಯಿಂದ ಸಮೀಕ್ಷೆ ನಡೆಸಲಾಗುತ್ತಿದೆ.

‘ಇದು ಕಾರ್ತೀಕ ಮಾಸವಾಗಿದ್ದರಿಂದ ದೇವಾಲಯಕ್ಕೆ ಬರುವ ಭಕ್ತರ ಸಂಖ್ಯೆ ಅಧಿಕವಾಗಿರುತ್ತದೆ. ಈ ಮಾಸ ಮುಗಿದ ಬಳಿಕ ರತ್ನ ಭಂಡಾರದಲ್ಲಿ ಮೂಡಿದ ಬಿರುಕನ್ನು ದುರಸ್ತಿಗೊ ಳಿಸಲಾಗುವುದು’ ಎಂದು ಸಚಿವ ಪೃಥ್ವಿರಾಜ್ ತಿಳಿಸಿದರು.

ತನಿಖೆಗೆ ಸಿಗದ ವೇಗ: ಮತ್ತೆ ಪ್ರತಿಭಟನೆ– ವೈದ್ಯರ ಘೋಷಣೆ

ಕೋಲ್ಕತ್ತ(ಪಿಟಿಐ): ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಮತ್ತು ಆಕೆಯ ಕೊಲೆ ಪ್ರಕರಣ ಕುರಿತು ಸಿಬಿಐ ನಡೆಸುತ್ತಿರುವ ತನಿಖೆ ಕುರಿತು ಅಸಮಾಧಾನ ವ್ಯಕ್ತಪಡಿಸಿರುವ ಕಿರಿಯ ವೈದ್ಯರು, ಹೊಸದಾಗಿ ಪ್ರತಿಭಟನೆ ನಡೆಸುವುದಾಗಿ ಶುಕ್ರವಾರ ಘೋಷಿಸಿದ್ದಾರೆ.

‘ಪ್ರಕರಣ ಕುರಿತು ಸಿಬಿಐನಿಂದ ನಡೆಯುತ್ತಿರುವ ತನಿಖೆಗೆ ವೇಗ ಸಿಗುತ್ತಿಲ್ಲ’ ಎಂದು ಪಶ್ಚಿಮ ಬಂಗಾಳ ಕಿರಿಯ ವೈದ್ಯರ ವೇದಿಕೆ ಹೇಳಿದೆ.

‘ನ.9ರಂದು ಕೋಲ್ಕತ್ತದ ಕಾಲೇಜ್ ಸ್ಕ್ವೇರ್‌ನಿಂದ ಎಸ್ಪಲನೇಡ್‌ವರೆಗೆ ರ್‍ಯಾಲಿ ನಡೆಸಲಾಗುವುದು. ನಾಗರಿಕ ಸಂಘಟನೆಗಳ ಸದಸ್ಯರು ಇದರಲ್ಲಿ ಪಾಲ್ಗೊಳ್ಳುವರು. ರಾಜ್ಯದ ಇತರ ಭಾಗ ಗಳಲ್ಲಿಯೂ ಇದೇ ರೀತಿಯ ಪ್ರತಿಭಟನೆ ಗಳನ್ನು ನಡೆಸಲಾಗುವುದು. ನ.9ರಂದು ರಾಣಿ ರಶ್ಮೋನಿ ಅವೆನ್ಯೂವಿ ನಲ್ಲಿ ಬೃಹತ್ ಸಮಾವೇಶ ಆಯೋಜಿಸ ಲಾಗುವುದು’ ಎಂದು ವೇದಿಕೆಯ ವಕ್ತಾರ ದೇಬಶಿಸ್ ಹಲ್ದರ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ದೇಶದ ಸ್ವಚ್ಛ ನಗರಿ ಎಂಬ ಖ್ಯಾತಿಯ ನಗರವೇ ಇದೀಗ ಮಾಲಿನ್ಯಕಾರಕ

ಇಂದೋರ್: ವಾಯು ಗುಣಮಟ್ಟ ಕಳಪೆ

ಇಂದೋರ್ (ಪಿಟಿಐ): ತ್ಯಾಜ್ಯ ನಿರ್ವಹಣೆಯಲ್ಲಿ ದೇಶದ ಸ್ವಚ್ಛ ನಗರ ಎಂಬ ಖ್ಯಾತಿಗೆ ಸತತ ಏಳು ವರ್ಷ ಭಾಜನವಾಗಿದ್ದ ಇಂದೋರ್‌ನಲ್ಲಿ, ಗಾಳಿಯ ಗುಣಮಟ್ಟವು ‘ಅತ್ಯಂತ ಕಳಪೆ’ಯಾಗಿದೆ ಎಂದು ಶುಕ್ರವಾರ ದಾಖಲಾಗಿದೆ.

ಮಧ್ಯಪ್ರದೇಶದ ಆರ್ಥಿಕ ರಾಜಧಾನಿಯೂ ಆಗಿರುವ ಈ ನಗರದಲ್ಲಿ ವಾಯು ಗುಣಮಟ್ಟ ಸೂಚ್ಯಂಕವು (ಎಕ್ಯೂಐ) 400 ಅನ್ನು ದಾಟಿದ್ದು, ಇದೀಗ ‘ವಿಷಮ ಸ್ಥಿತಿ’ಯ ವರ್ಗಕ್ಕೆ ಸೇರ್ಪಡೆಯಾಗಿದೆ.

ನಗರದ ಜನನಿಬಿಡ ಹಾಗೂ ವಾಹನದಟ್ಟಣೆಯ ಛೋಟಿ ಗ್ವಾಲ್ಟೋಲಿ ಪ್ರದೇಶದಲ್ಲಿ ಎಕ್ಯೂಐ ಮಧ್ಯಾಹ್ನ 404ಕ್ಕೆ ದಾಖಲಾಗಿದ್ದರೆ, ಪಿ.ಎಂ 2.5 (ದೂಳಿನ ಕಣಗಳ ಸಾಂದ್ರತೆ) ಸರಾಸರಿ 255.26 ಇದ್ದರೆ, ಪಿಎಂ 10ರ ಸರಾಸರಿ ಮಟ್ಟ 318.08 ದಾಖಲಾಗಿತ್ತು ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮಾಹಿತಿ ನೀಡಿದೆ.

‘ದೀಪಾವಳಿ ಹಬ್ಬದ ಸಂಭ್ರಮ ಗುರುವಾರ ಬೆಳಿಗ್ಗೆಯಿಂದಲೇ ನಗರದಲ್ಲಿ ಮನೆ ಮಾಡಿತ್ತು. ಇದರೊಟ್ಟಿಗೆ ಪಟಾಕಿಗಳ ಸಿಡಿತವೂ ಜೋರಾಗಿತ್ತು. ಇದು ತಡರಾತ್ರಿಯವರೆಗೂ ಮುಂದುವರೆದಿತ್ತು. ಶುಕ್ರವಾರವೂ ಹಲವು ಪ್ರದೇಶಗಳಲ್ಲಿ ಇದೇ ಚಿತ್ರಣವಿತ್ತು. ನಗರದಲ್ಲಿನ ಗಾಳಿಯ ಗುಣಮಟ್ಟವು ‘ವಿಷಮ ಸ್ಥಿತಿ’ ತಲುಪಲು ಇದೇ ಮುಖ್ಯ ಕಾರಣವಾಗಿದೆ’ ಎಂದು ಪರಿಸರ ತಜ್ಞ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿವೃತ್ತ ಅಧಿಕಾರಿ ಡಾ. ದಿಲೀಪ್ ವಘೇಲಾ ಅವರು ಸುದ್ದಿಸಂಸ್ಥೆಗೆ ಮಾಹಿತಿ ನೀಡಿದರು.

ನವದೆಹಲಿಯಲ್ಲಿ ಶುಕ್ರವಾರ ಕಲುಷಿತ ಗಾಳಿಯ ಸೇವನೆಯಿಂದ ರಕ್ಷಿಸಿಕೊಳ್ಳಲು ಮಾಸ್ಕ್ ಧರಿಸಿ ಸಂಚರಿಸಿದ ಸೈಕಲ್ ಸವಾರ ಪಿಟಿಐ ಚಿತ್ರ

‘ಶುಕ್ರವಾರ ಬೆಳಿಗ್ಗೆ 8.30ಕ್ಕೆ ನಗರದಲ್ಲಿ ಗಾಳಿಯ ವೇಗ ಶೂನ್ಯವಾಗಿತ್ತು’ ಎಂದು ಹವಾಮಾನ ಇಲಾಖೆ ತಿಳಿಸಿದೆ. ‘ಶಾಂತ ಗಾಳಿಯಿಂದಾಗಿ ಮಾಲಿನ್ಯಕಾರಕಗಳು ಬೇರೆಡೆ ಪಸರಿಸದೆ ಒಂದೇ ಸ್ಥಳದಲ್ಲಿವೆ. ಇದು ಗಾಳಿಯ ಗುಣಮಟ್ಟವನ್ನು ಮತ್ತಷ್ಟು ಕುಸಿಯುವಂತೆ ಮಾಡಿದೆ’ ಎಂದು ಅವರು ಹೇಳಿದರು. ನಗರದ ಗಾಳಿಯ ಗುಣಮಟ್ಟವು ಸಹಜವಾಗಿ ‘ತೃಪ್ತಿದಾಯಕ’ (ಎಕ್ಯೂಐ 51-100) ವರ್ಗದಲ್ಲಿ ಇರುತ್ತಿತ್ತು ಎಂದು ತಜ್ಞರು ಹೇಳಿದ್ದಾರೆ.

ದೆಹಲಿ ವಾಯು ಗುಣಮಟ್ಟ ಸ್ಥಿರ: ಡಿಪಿಸಿಸಿ

ರಾಷ್ಟ್ರ ರಾಜಧಾನಿಯಲ್ಲಿನ ವಾಯುಮಾಲಿನ್ಯವನ್ನು ತಗ್ಗಿಸಲು ಶುಕ್ರವಾರ ಹೊಂಜು ವಿರೋಧಿ ಬಂದೂಕುಗಳನ್ನು ಬಳಸಲಾಯಿತು ಪಿಟಿಐ ಚಿತ್ರ

ರಾಷ್ಟ್ರ ರಾಜಧಾನಿಯ ಅಸಂಖ್ಯಾತ ಜನರು ಪಟಾಕಿ ಸುಡುವುದರಿಂದ ದೂರ ಉಳಿದರು. ಇದರಿಂದ ಎಕ್ಯೂಐ ಹೆಚ್ಚಲಿಲ್ಲ. ದೆಹಲಿಯ ಜನರಿಗೆ ಕೃತಜ್ಞತೆ ಅರ್ಪಿಸುವೆ

ಗೋಪಾಲ್ ರಾಯ್, ದೆಹಲಿ ಪರಿಸರ ಸಚಿವ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯ ವಾಯು ಗುಣಮಟ್ಟ ಸೂಚ್ಯಂಕವು ಈ ದೀಪಾವಳಿಯಲ್ಲಿ ಯಾವುದೇ ಮಹತ್ತರ ಬದಲಾವಣೆ ಹೊಂದಿಲ್ಲ ಎಂದು ದೆಹಲಿಯ ಮಾಲಿನ್ಯ ನಿಯಂತ್ರಣ ಮಂಡಳಿಯು ಹೇಳಿಕೊಂಡಿದೆ.

ಬಹುತೇಕರು ಮಾಲಿನ್ಯ ನಿಯಮಗಳನ್ನು ಉಲ್ಲಂಘಿಸಿದ ಬಳಿಕವೂ ದೆಹಲಿ ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿಯ ಪ್ರಕಾರ, 24 ಗಂಟೆಗಳ ಸರಾಸರಿ ಎಕ್ಯೂಐ ಗುರುವಾರ 328ಕ್ಕೆ ತಲುಪಿದ್ದು, ದೀಪಾವಳಿ ಹಬ್ಬದ ಒಂದು ದಿನದ ನಂತರ 362ಕ್ಕೆ ಏರಿದೆ.

ಕಳೆದ ವರ್ಷದ ದೀಪಾವಳಿಗೆ ಹೋಲಿಸಿದರೆ ಪಿಎಂ 2.5 ಮಟ್ಟವು ಶೇಕಡಾ 4ರಷ್ಟು ಕಡಿಮೆಯಾಗಿದೆ ಎಂದು ವರದಿ ಹೇಳಿದೆ. 10 ಮೈಕ್ರೋಮೀಟರ್ ಅಥವಾ ಅದಕ್ಕಿಂತ ಕಡಿಮೆ ವ್ಯಾಸದ ಕಣಗಳನ್ನು ಒಳಗೊಂಡಿರುವ ಪಿಎಂ 10 ಮಟ್ಟವು ಶೇ 11ರಷ್ಟು ಹೆಚ್ಚಾಗಿದೆ.

ಕಲುಷಿತ ದೀಪಾವಳಿ: ದೆಹಲಿಯು ಮೂರು ವರ್ಷಗಳಲ್ಲಿ ಅತ್ಯಂತ ಕಲುಷಿತ ದೀಪಾವಳಿಯನ್ನು ದಾಖಲಿಸಿದೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ದತ್ತಾಂಶವು ಹೇಳಿದೆ.

ಗುರುವಾರ ನಗರದ 24 ಗಂಟೆಗಳ ಸರಾಸರಿ ಎಕ್ಯೂಐ 330ಕ್ಕೆ ದಾಖಲಾಗಿದೆ. 2023ರಲ್ಲಿ 218 ಹಾಗೂ 2022ರಲ್ಲಿ 312 ದಾಖಲಾಗಿತ್ತು. ಹಿಂದಿನ ಈ ಎರಡಕ್ಕೂ ಹೋಲಿಸಿದರೆ ಈ ಬಾರಿ ಹೆಚ್ಚಾಗಿದೆ ಎಂದಿದೆ.

ರಾಷ್ಟ್ರ ರಾಜಧಾನಿಯ ಎಕ್ಯೂಐ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ 362ಕ್ಕೆ ಏರಿಕೆಯಾಗುವ ಮೂಲಕ ‘ಅತ್ಯಂತ ಕಳಪೆ’ ವಿಭಾಗದಲ್ಲಿ ದಾಖಲಾಗಿದೆ.

ಕಾಶ್ಮೀರದಲ್ಲಿ ಉಗ್ರರ ದಾಳಿ: ಇಬ್ಬರು ಕಾರ್ಮಿಕರಿಗೆ ಗುಂಡೇಟು

ಶ್ರೀನಗರ: ಕಾಶ್ಮೀರದ ಬಡಗಾಮ್ ಜಿಲ್ಲೆಯ ಮಜಹಮಾ ಪ್ರದೇಶದಲ್ಲಿ ಶುಕ್ರವಾರ ಇಬ್ಬರು ವಲಸೆ ಕಾರ್ಮಿಕರ ಮೇಲೆ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದಾರೆ. ಕಳೆದ ಎರಡು ವಾರಗಳಲ್ಲಿ ಕಾಶ್ಮೀರ ಕಣಿವೆಯಲ್ಲಿ ವಲಸೆ ಕಾರ್ಮಿಕರನ್ನು ಗುರಿಯಾಗಿಸಿ ಉಗ್ರರು ನಡೆಸಿರುವ ನಾಲ್ಕನೇ ದಾಳಿ ಇದಾಗಿದೆ.

ಭಯೋತ್ಪಾದಕರ ಗುಂಡೇಟಿನಿಂದ ಗಾಯಗೊಂಡಿರುವ ಇಬ್ಬರು ಕಾರ್ಮಿಕರು ಉತ್ತರ ಪ್ರದೇಶದ ಸಂಜಯ್ ಮತ್ತು ಉಸ್ಮಾನ್ ಎಂದು ಗುರುತಿಸಲಾಗಿದೆ. ಜಲ ಜೀವನ್ ಯೋಜನೆಯಲ್ಲಿ ಕೂಲಿ ಕಾರ್ಮಿಕರಾಗಿ ಇವರು ಕೆಲಸದಲ್ಲಿ ತೊಡಗಿದ್ದರು. ಗಾಯಾಳುಗಳನ್ನು ತಕ್ಷಣ ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಆರೋಗ್ಯ ಸ್ಥಿರವಾಗಿದೆ ಎಂದು ತಿಳಿದುಬಂದಿದೆ.

ಗುಂಡಿನ ದಾಳಿ ನಡೆದ ತಕ್ಷಣ ಪೊಲೀಸರು ಮತ್ತು ಭದ್ರತಾ ಪಡೆಗಳು ಸ್ಥಳಕ್ಕೆ ದೌಡಾಯಿಸಿದ್ದು, ಉಗ್ರರಿಗೆ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಕೇಂದ್ರಾಡಳಿತ ಪ್ರದೇಶ ಜಮ್ಮು ಮತ್ತು ಕಾಶ್ಮೀರದ ಮೊದಲ ಮುಖ್ಯಮಂತ್ರಿಯಾಗಿ ಒಮರ್ ಅಬ್ದುಲ್ಲಾ ಅವರು ಅಕ್ಟೋಬರ್ 16ರಂದು ಅಧಿಕಾರ ವಹಿಸಿಕೊಂಡ ನಂತರ ಕಣಿವೆಯಲ್ಲಿ ವಲಸೆ ಕಾರ್ಮಿಕರು ಮತ್ತು ಭದ್ರತಾ ಪಡೆಗಳ ಮೇಲೆ ಭಯೋತ್ಪಾದಕ ದಾಳಿಗಳು ಹೆಚ್ಚುತ್ತಿವೆ.

ಲೇಹ್‌ನಲ್ಲಿ ‘ಅನಲಾಗ್ ಸ್ಪೇಸ್ ಮಿಷನ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್ಯಗ್ರಹಗಳಲ್ಲಿ ಮಾನವ ನೆಲೆ ಸ್ಥಾಪಿಸಿಕೊಂಡಾಗ ಎದುರಾಗುವ ಸಮಸ್ಯೆಗಳೇನು, ಗಗನಯಾತ್ರಿಗಳು ಆ ಸವಾಲುಗಳನ್ನು ಹೇಗೆ ಎದುರಿಸಬೇಕು ಎಂಬುದರ ಅನುಭವವನ್ನು ಭೂಮಿಯಲ್ಲೇ ಪಡೆಯಲು ಲಡಾಖ್‌ನ ಲೇಹ್‌ನಲ್ಲಿ ನೆಲೆಯೊಂದನ್ನು ಇಸ್ರೊ ಸ್ಥಾಪಿಸಿದೆ.

‘ಅನಲಾಗ್ ಸ್ಪೇಸ್ ಮಿಷನ್’ ಎಂದು ಕರೆಯಲಾಗುವ ಈ ನೆಲೆ ಶುಕ್ರವಾರ ಕಾರ್ಯಾರಂಭ ಮಾಡಿರುವುದಾಗಿ ಇಸ್ರೊ ‘ಎಕ್ಸ್’ ಮೂಲಕ ತಿಳಿಸಿದೆ.

ಅನ್ಯಗ್ರಹಗಳಿಗೆ ಹೋಗಿ ಅಲ್ಲಿ ನೆಲೆ ಸ್ಥಾಪಿಸಿ ಕಾರ್ಯನಿರ್ವಹಿಸುವಾಗ ಹಲವು ಸವಾಲುಗಳು ಎದುರಾಗುತ್ತವೆ. ಅದರಲ್ಲಿಯೂ ಮುಖ್ಯವಾಗಿ ನಿರ್ಜನತೆ. ಅಂದರೆ ಬೇರೆ ಮಾನವರು ಅಥವಾ ಜೀವಿಗಳು ಸಿಗುವ ಸಾಧ್ಯತೆ ಅಲ್ಲಿ ಇರುವುದಿಲ್ಲ. ಅಲ್ಲಿನ ವಾತಾವರಣವೂ ತೀರಾ ಪ್ರತಿಕೂಲವಾಗಿರುತ್ತದೆ. ಅಲ್ಲಿಗೆ ಒಬ್ಬರು ಅಥವಾ ಅದಕ್ಕಿಂತ ಹೆಚ್ಚು ಮಂದಿ ಗಗನಯಾತ್ರಿಗಳು ಹೋದ ಸಂದರ್ಭದಲ್ಲಿ ನಿರ್ಜನತೆಯ ಸವಾಲುಗಳನ್ನು ಹೇಗೆ ಎದುರಿಸಬೇಕು ಎಂಬ ಪಾಠ ಭೂಮಿಯ ಮೇಲೆ ನೀಡಲಾಗುತ್ತದೆ. ಇದರಿಂದ ಅನ್ಯಗ್ರಹಗಳಿಗೆ ಹೋಗಿ ನೆಲೆ ಸ್ಥಾಪಿಸಿ ವಾತಾವರಣಕ್ಕೆ ಹೊಂದಿಕೊಳ್ಳಲು ಅನುಕೂಲವಾಗುತ್ತದೆ ಎಂದು ಇಸ್ರೊ ಮೂಲಗಳು ತಿಳಿಸಿವೆ.

ಲೇಹ್‌ನಲ್ಲಿ ಸ್ಥಾಪಿತವಾಗಿರುವ ಅನಲಾಗ್ ‘ಸ್ಪೇಸ್ ಮಿಷನ್’ ನೆಲೆ

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ 100 ವರ್ಷ ತುಂಬುವ ವೇಳೆಗೆ ಮಾನವನನ್ನು ಚಂದ್ರನ ಮೇಲೆ ಇಳಿಸಿ, ಅಲ್ಲಿ ನೆಲೆಯೊಂದನ್ನು ಸ್ಥಾಪಿಸುವ ಗುರಿಯನ್ನು ಇಸ್ರೊ ಹೊಂದಿದೆ. ಲೇಹ್‌ನ ಅನಲಾಗ್ ಸ್ಪೇಸ್ ಮಿಷನ್ ಇದಕ್ಕೆ ನೆರವಾಗಲಿದೆ. ಲೇಹ್ ಅತ್ಯಂತ ನಿರ್ಜನ ಮತ್ತು ತೀರಾ ಶೀತದಿಂದ ಕೂಡಿದ ಮರುಭೂಮಿಯಾಗಿದೆ. ಅನ್ಯಗ್ರಹಗಳನ್ನು ಹೋಲುವ ವಾತಾವರಣ ಇರುತ್ತದೆ ಎಂದು ಮೂಲಗಳು ಹೇಳಿವೆ.

ಈ ನೆಲೆಯನ್ನು ಇಸ್ರೊದ ಹ್ಯೂಮನ್ ಸ್ಪೇಸ್ ಸೆಂಟರ್, ಎಎಕೆಎ ಸ್ಪೇಸ್ ಸ್ಟುಡಿಯೊ, ಲಡಾಖ್ ವಿಶ್ವವಿದ್ಯಾಲಯ, ಐಐಟಿ ಬಾಂಬೆ, ಲಡಾಖ್ ಸ್ವಾಯತ್ತ ಗಿರಿ ಅಭಿವೃದ್ಧಿ ಮಂಡಳಿ ಸೇರಿ ಸ್ಥಾಪಿಸಿವೆ.

ಮಹಿಳೆ ಸಾವು: 6 ಮಂದಿ ಮೊಮೊ ಮಾರಾಟಗಾರರ ಸೆರೆ

ಹೈದರಾಬಾದ್: ಕಲುಷಿತ ಮೊಮೊಗಳನ್ನು ಮಾರಾಟ ಮಾಡಿ, ಮಹಿಳೆಯೊಬ್ಬರ ಸಾವಿಗೆ ಕಾರಣವಾದ ಪ್ರಕರಣದ ಸಂಬಂಧ ಆರು ಮಂದಿ ಮೊಮೊ ಮಾರಾಟಗಾರರನ್ನು ಹೈದರಾಬಾದ್ ಪೊಲೀಸರು ಬಂಧಿಸಿದ್ದಾರೆ.

ಬಿಹಾರದ ಕಿಶನ್‌ಗಂಜ್‌ನವರಾದ ಅರ್ಮಾನ್, ಸಾಜಿದ್ ಹುಸೇನ್, ಮಹಮದ್ ರಯೀಸ್, ಮಹಮದ್ ಶಾರುಖ್, ಮಹಮದ್ ಹನೀಫ್ ಹಾಗೂ ಮಹಮದ್ ರಾಜಿಕ್ ಬಂಧಿತರು. ಇವರ ವಿರುದ್ಧ ವಿಷಯುಕ್ತ, ಕಲುಷಿತ ಮೊಮೊಗಳನ್ನು ಮಾರಾಟ ಮಾಡಿದ ಆರೋಪ ಕೇಳಿಬಂದಿದೆ. ಇಂತಹ ಮೊಮೊ ಮಾರಾಟ ಮಾಡಿ ಗ್ರಾಹಕರಲ್ಲಿ ಒಬ್ಬರ ಸಾವು ಮತ್ತು ಇನ್ನು ಕೆಲವರ ಅನಾರೋಗ್ಯಕ್ಕೆ ಕಾರಣ ವಾಗಿರುವುದರಿಂದ ಆರೋಪಿಗಳ ವಿರುದ್ಧ ನರಹತ್ಯೆ ಪ್ರಕರಣವನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ.

31 ವರ್ಷದ ರೇಷ್ಮಾ ಬೇಗಂ ಮತ್ತು ಆಕೆಯ ಚಿಕ್ಕ ಮಗಳು ಬಂಜಾರಾ ಹಿಲ್ಸ್‌ನ ಸಿಂಗದ ಕುಂಟಾದಲ್ಲಿನ ತರಕಾರಿ ಮಾರುಕಟ್ಟೆಯಲ್ಲಿ ಮೊಮೊಗಳನ್ನು ಸೇವಿಸಿದ್ದರು. ನಂತರ ಆಕೆ ಮತ್ತು ಮಕ್ಕಳು ತೀವ್ರ ವಾಂತಿ ಮತ್ತು ಅತಿಸಾರ ಸಮಸ್ಯೆ ಅನುಭವಿಸಿದ್ದರು. ರೇಷ್ಮಾ ಬೇಗಂ ಮೃತಪಟ್ಟಿದ್ದರು.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ನವದೆಹಲಿಯಲ್ಲಿ ದೀಪಾವಳಿ ಅಂಗವಾಗಿ ಕುಂಬಾರಿಕೆಯಲ್ಲಿ ನಿರತ ಕುಟುಂಬದ ಸದಸ್ಯರೊಂದಿಗೆ ಮಣ್ಣಿನ ಹಣತೆ ತಯಾರಿಸಿದ್ದಾರೆ –ಪಿಟಿಐ ಚಿತ್ರ

‘ಜನರ ಕೌಶಲಕ್ಕೆ ಪ್ರತಿಫಲ ಸಿಗುವ ವ್ಯವಸ್ಥೆ ಬೇಕು’

ನವದೆಹಲಿ(ಪಿಟಿಐ): ‘ಪ್ರತಿಯೊಬ್ಬರ ಕೌಶಲಕ್ಕೂ ಪ್ರತಿಫಲ ಸಿಗುವಂತಹ ಹಾಗೂ ಪ್ರತಿಯೊಬ್ಬ ವ್ಯಕ್ತಿಯ ಕೊಡುಗೆಯನ್ನು ಗೌರವಿಸುವಂತಹ ವ್ಯವಸ್ಥೆಯೊಂದನ್ನು ರೂಪಿಸುವ ಅಗತ್ಯ ಇದೆ’ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶುಕ್ರವಾರ ಹೇಳಿದ್ದಾರೆ.

ದೀಪಾವಳಿ ಪ್ರಯುಕ್ತ ಬಣ್ಣ ಬಳಿಯುವವರು ಹಾಗೂ ಕುಂಬಾರರ ಜೊತೆ ನಡೆಸಿದ ಮಾತುಕತೆ ವೇಳೆ ಅವರು ಈ ಮಾತು ಹೇಳಿದ್ದಾರೆ. ಈ ವೇಳೆ, ಸೋದರಳಿಯ ರೇಹಾನ್ ರಾಜೀವ್ ವಾದ್ರಾ ಅವರೊಂದಿಗೆ ನಡೆಸಿದ ಸಂವಾದದ ಒಂಬತ್ತು ನಿಮಿಷಗಳ ವಿಡಿಯೊವನ್ನು ಅವರು ಯೂಟ್ಯೂಬ್‌ನಲ್ಲಿ ಹಂಚಿಕೊಂಡಿದ್ದಾರೆ.

‘ಬಣ್ಣ ಹಚ್ಚುವ ಕೆಲಸ ಮಾಡುವ ಸಹೋದರರ ಜೊತೆ ಹಾಗೂ ಕುಂಬಾರಿಕೆ ಕುಟುಂಬದ ಸದಸ್ಯರೊಂದಿಗೆ ಮಣ್ಣಿನ ಹಣತೆ ತಯಾರಿಸುವ ಮೂಲಕ ನಾನು ದೀಪಾವಳಿ ಆಚರಿಸಿದೆ’ ಎಂದಿದ್ದಾರೆ.

‘ನಾವು ಹಬ್ಬಗಳನ್ನು ಬಹಳ ಸಂಭ್ರಮದಿಂದ ಆಚರಿಸುತ್ತೇವೆ. ಆದರೆ, ಈ ಜನರು ಮನೆಗೆ ಹೋಗುವುದಿಲ್ಲ. ಸ್ವಲ್ಪ ಹಣ ಗಳಿಸುವುದಕ್ಕಾಗಿ ಈ ಜನರು ತಮ್ಮ ಹಳ್ಳಿ, ಪಟ್ಟಣ ಹಾಗೂ ಕುಟುಂಬಗಳನ್ನು ಮರೆತು ದುಡಿಯುತ್ತಾರೆ’ ಎಂದು ಸಂವಾದದಲ್ಲಿ ಹೇಳಿದ್ದಾರೆ.

‘ಅವರು ಹಣತೆಗಳನ್ನು ತಯಾರಿಸಲು ಬಳಸುವ ಮಣ್ಣಿನೊಂದಿಗೆ ಕೆಲಸ ಮಾಡುವ ಮೂಲಕ ಸಂತೋಷ ಕಾಣುತ್ತಾರೆ. ಬೇರೆಯವರ ಹಬ್ಬಗಳಲ್ಲಿ ಬೆಳಕು ಹೊಮ್ಮುವಂತೆ ಮಾಡುವ ಅವರು, ತಮ್ಮ ಬದುಕನ್ನು ಬೆಳಗುವಂತೆ ಮಾಡಿಕೊಳ್ಳಲು ಸಮರ್ಥರಾಗಿದ್ದಾರೆಯೇ?’ ಎಂದು ಹೇಳಿದ್ದಾರೆ.

ತಾಯಿ ತಂಗಿಗೆ ಉಡುಗೊರೆ

‘10 ಜನಪಥ’ದಲ್ಲಿರುವ ತಮ್ಮ ನಿವಾಸದಲ್ಲಿ ಕಾರ್ಮಿಕರೊಂದಿಗೆ ರಾಹುಲ್ ಗಾಂಧಿ ಅವರು ಗೋಡೆಗಳಿಗೆ ಬಣ್ಣ ಬಳಿಯುವುದನ್ನು ಕಲಿಯುತ್ತಿರುವ ದೃಶ್ಯಗಳು ವಿಡಿಯೊದಲ್ಲಿವೆ. ವಿಡಿಯೊದ ಮತ್ತೊಂದು ಭಾಗದಲ್ಲಿ, ರಾಹುಲ್ ಕುಂಬಾರಿಕೆಯಲ್ಲಿ ನಿರತರಾಗಿರುವ ಮಹಿಳೆಯೊಬ್ಬರ ಮನೆಗೆ ತೆರಳಿ, ಮಣ್ಣಿನ ಹಣತೆ ತಯಾರಿಸುತ್ತಿರುವ ದೃಶ್ಯಗಳಿವೆ. ಹಣತೆ ತಯಾರಿಕೆಯಲ್ಲಿ ಮಹಿಳೆಯ ಐವರು ಪುತ್ರಿಯರು ನೆರವಾಗಿದ್ದಾರೆ. ತಾವು ತಯಾರಿಸಿದ ಹಣತೆಗಳನ್ನು ತನ್ನ ತಾಯಿ ಹಾಗೂ ತಂಗಿಗೆ ನೀಡುವುದಾಗಿಯೂ ರಾಹುಲ್ ಹೇಳಿದ್ದಾರೆ.

ಅರೋರಾ ನೂತನ ಏರ್ ಆಫೀಸರ್

ನವದೆಹಲಿ (ಪಿಟಿಐ): ಏರ್ ಮಾರ್ಷಲ್ ಅಜಯ್ ಕುಮಾರ್ ಅರೋರಾ ಅವರು ಭಾರತೀಯ ವಾಯುಪಡೆಯ (ಐಎಎಫ್) ಏರ್ ಆಫೀಸರ್ (ನಿರ್ವಹಣಾ ಉಸ್ತುವಾರಿ) ಆಗಿ ಶುಕ್ರವಾರ ಅಧಿಕಾರ ವಹಿಸಿಕೊಂಡಿದ್ದಾರೆ.

ಇಲ್ಲಿನ ಏರ್ ಹೆಡ್‌ಕ್ವಾರ್ಟರ್ಸ್‌ನಲ್ಲಿ (ವಾಯು ಭವನ) ಅಧಿಕಾರ ಸ್ವೀಕರಿಸಿದ ನಂತರ ಏರ್ ಮಾರ್ಷಲ್ ಅವರು ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿದರು. ರಾಷ್ಟ್ರಕ್ಕಾಗಿ ತ್ಯಾಗ ಮಾಡಿದ ಸಶಸ್ತ್ರ ಪಡೆ ಸಿಬ್ಬಂದಿಗೆ ಗೌರವ ಸಲ್ಲಿಸಿದರು.

ಅರೋರಾ ಅವರು 1986ರ ಆಗಸ್ಟ್‌ನಲ್ಲಿ ಐಎಎಫ್‌ನ ಏರೋನಾಟಿಕಲ್ ಎಂಜಿನಿಯರಿಂಗ್ ಸ್ಟ್ರೀಮ್‌ನಲ್ಲಿ ಕರ್ತವ್ಯಕ್ಕೆ ಸೇರಿದ್ದರು. ತಮ್ಮ 38 ವರ್ಷಗಳ ವೃತ್ತಿಜೀವನದಲ್ಲಿ ಪ್ರಮುಖ ಕಮಾಂಡ್ ಮತ್ತು ಸಿಬ್ಬಂದಿ ನೇಮಕಾತಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಏರ್ ಆಫೀಸರ್ ಆಗಿ ಅಧಿಕಾರ ವಹಿಸಿಕೊಳ್ಳುವ ಮೊದಲು ಅವರು ಡೈರೆಕ್ಟರ್ ಜನರಲ್ (ವಿಮಾನ) ಆಗಿದ್ದರು.

ವಿಲ್ ಯಂಗ್, ಡ್ಯಾರಿಲ್ ಮಿಚೆಲ್ ಅರ್ಧಶತಕ; ಮತ್ತೆ ಎಡವಿದ ಭಾರತದ ಬ್ಯಾಟರ್‌ಗಳು; ವಾಷಿಂಗ್ಟನ್‌ಗೆ 4 ವಿಕೆಟ್

ಬಿಸಿಲ ಝಳದಲ್ಲಿ ಬೆಳಗಿದ ಜಡೇಜ

ಪ್ರಜಾವಾಣಿ ವಾರ್ತೆ

ಮುಂಬೈ: ಧರಿಸಿದ್ದ ಪೋಷಾಕುಗಳು ತೊಯ್ದು ತೊಪ್ಪೆಯಾಗಿದ್ದವು. ಚೆಂಡು ತೇವವಾಗಿತ್ತು, ಹೆಲ್ಮೆಟ್‌ಗಳಿಂದಲೂ ಬೆವರಿನ ಹನಿಗಳು ಉರುಳುತ್ತಿದ್ದವು. ಅಪರೂಪಕ್ಕೊಮ್ಮೆ ತಂಗಾಳಿಯು ಹೀಗೆ ಬಂದು ಹಾಗೆ ಹೋಗುತ್ತಿತ್ತು...

ಇದು, ಶುಕ್ರವಾರ ವಾಂಖೆಡೆ ಕ್ರೀಡಾಂಗಣದಲ್ಲಿ ಕಂಡ 'ಬೆವರಿನ ಹಬ್ಬ'ದ ಝಲಕ್. ಆಡುತ್ತಿದ್ದವರು ಮತ್ತು ನೋಡುತ್ತಿದ್ದವರೆಲ್ಲರೂ ಬೆವರಿನ ಮುದ್ದೆಯಾಗಿದ್ದರು. ಅದರಲ್ಲೂ ನ್ಯೂಜಿಲೆಂಡ್ ತಂಡದವರಿಗೆ ಈ ಪ್ರವಾಸದಲ್ಲಿ ಇಂತಹ ಅನುಭವವಾಗಿದ್ದು ಇದೇ ಮೊದಲು. ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಸರಣಿಯ ಮೊದಲ ಪಂದ್ಯ ನಡೆದಿದ್ದ ಬೆಂಗಳೂರು ಮತ್ತು ಎರಡನೇ ಪಂದ್ಯವಾಗಿದ್ದ ಪುಣೆ ನಗರಗಳ ವಾತಾವರಣಕ್ಕಿಂತ ಇದು ಭಿನ್ನ.

ಮುಂಬೈನ ಬಿಸಿಲ ಬೇಗೆಯನ್ನು ನಿಭಾಯಿಸಲು ನ್ಯೂಜಿಲೆಂಡ್ ಆಟಗಾರರು ಹಲವು ರೀತಿಯಲ್ಲಿ ಪ್ರಯತ್ನಿಸಿದರು. ಐಸ್ ಪ್ಯಾಕ್ ಬಳಸುತ್ತಿದ್ದರು. ದೇಹದಲ್ಲಿ ನೀರಿನ ಅಂಶ ನಿರ್ವಹಿಸುವ ಪಾನೀಯ ಸೇವಿಸಿದರು. ಪಾನೀಯ ವಿರಾಮದ ಸಂದರ್ಭದಲ್ಲಿ ಛತ್ರಿ ಮತ್ತು ಕುರ್ಚಿಗಳನ್ನು ಆಟಗಾರರು ಬಳಸಿದರು. ಭಾರತದ ಆಟಗಾರರಿಗೂ 'ಬಿಸಿ' ತಟ್ಟಿತ್ತು. ಆದರೆ ಅವರು ಚೆಂಡು ಕೈ ಜಾರಿಹೋಗದಂತೆ ನಿರ್ವಹಿಸಿದರು.

ಈ ವಾತಾವರಣದ ನಡುವೆಯೂ ಆ ಮೂವರು ಮಾತ್ರ ಗಟ್ಟಿಯಾಗಿ ನಿಂತರು. ಗಮನ ಸೆಳೆಯುವ ಆಟವಾಡಿದರು. ನ್ಯೂಜಿಲೆಂಡ್ ತಂಡದ ಬ್ಯಾಟರ್‌ಗಳಾದ ವಿಲ್ ಯಂಗ್ (71; 138ಎ), ಡ್ಯಾರಿಲ್ ಮಿಚೆಲ್ (82; 129ಎ) ಹಾಗೂ ಆತಿಥೇಯ ತಂಡದ ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ (65ಕ್ಕೆ5) ಅವರೇ ಆ ಆಟಗಾರರು. ಜಡೇಜ ಅವರಿಗೆ ವಾಷಿಂಗ್ಟನ್ ಸುಂದರ್ (81ಕ್ಕೆ4) ಉತ್ತಮ ಜೊತೆ ನೀಡಿದರು. ಇದರಿಂದಾಗಿ ಪ್ರವಾಸಿ ತಂಡವನ್ನು ಮೊದಲ ಇನಿಂಗ್ಸ್‌ನಲ್ಲಿ 235 ರನ್‌ಗಳಿಗೆ ಕಟ್ಟಿಹಾಕಲು ಸಾಧ್ಯವಾಯಿತು. ಜಡೇಜ ತಮ್ಮ ಒಂದೇ ಸ್ಪೆಲ್‌ನಲ್ಲಿ 22 ಓವರ್‌ಗಳನ್ನು ಬೌಲಿಂಗ್ ಮಾಡಿದರು. ಇನಿಂಗ್ಸ್‌ನ ಮೊದಲ ವಿಕೆಟ್ ಒಂದೇ ವೇಗಿ ಆಕಾಶ್ ದೀಪ್ ಅವರ ಪಾಲಾಯಿತು. ಮತ್ತೊಬ್ಬ ವೇಗಿ ಸಿರಾಜ್ ಮತ್ತು ಅನುಭವಿ ಸ್ಪಿನ್ನರ್ ಆರ್. ಅಶ್ವಿನ್ ಅವರಿಗೆ ವಿಕೆಟ್ ಒಲಿಯಲಿಲ್ಲ.

ವಿಕೆಟ್ ಗಳಿಸಿದ ಭಾರತದ ಸ್ಪಿನ್ನರ್ ವಾಷಿಂಗ್ಟನ್ ಸುಂದರ್ ಅವರನ್ನು ರವೀಂದ್ರ ಜಡೇಜ ಮತ್ತು ವಿರಾಟ್ ಕೊಹ್ಲಿ ಅಭಿನಂದಿಸಿದರು ಪಿಟಿಐ ಚಿತ್ರ

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ನ್ಯೂಜಿಲೆಂಡ್ ತಂಡವು ಸಾಧಾರಣ ಮೊತ್ತಕ್ಕೆ ಆಲೌಟ್ ಆಯಿತು. ಆದರೆ ಇದರ ಲಾಭ ಪಡೆಯುವಲ್ಲಿ ಭಾರತ ಮತ್ತೆ ಎಡವಿದೆ. ಇನಿಂಗ್ಸ್ ಆರಂಭಿಸಿದ ಆತಿಥೇಯ ತಂಡವು ದಿನದಾಟದ ಮುಕ್ತಾಯಕ್ಕೆ 19 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 86 ರನ್ ಗಳಿಸಿದೆ. ಶುಭಮನ್ ಗಿಲ್ (ಬ್ಯಾಟಿಂಗ್ 31) ಮತ್ತು ರಿಷಭ್ ಪಂತ್ (ಬ್ಯಾಟಿಂಗ್ 1) ಕ್ರೀಸ್‌ನಲ್ಲಿದ್ದಾರೆ.

ಯಶಸ್ವಿ ಜೈಸ್ವಾಲ್ (30; 52ಎ) ಮತ್ತು ನಾಯಕ ರೋಹಿತ್ ಶರ್ಮಾ (18; 18ಎ) ಉತ್ತಮ ಆರಂಭ ನೀಡುವ ಪ್ರಯತ್ನ ಮಾಡಿದರು. ಆದರೆ ಮ್ಯಾಟ್ ಹೆನ್ರಿ ಎಸೆತವನ್ನು ಆಡುವ ಭರದಲ್ಲಿ ರೋಹಿತ್ ಅವರು ಟಾಮ್ ಲೇಥಮ್‌ಗೆ ಕ್ಯಾಚ್ ಕೊಟ್ಟಾಗ ತಂಡದ ಮೊತ್ತ 25 ರನ್‌ಗಳಾಗಿತ್ತು. ಯಶಸ್ವಿ ಮತ್ತು ಗಿಲ್ ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 53 ರನ್ ಸೇರಿಸಿದರು. ಇದರಿಂದಾಗಿ ಇನಿಂಗ್ಸ್ ಸ್ಥಿರಗೊಂಡಂತೆ ಕಂಡಿತ್ತು. ಆದರೆ ಸ್ಪಿನ್ನರ್ ಎಜಾಜ್ ಪಟೇಲ್ ತಮ್ಮ ಒಂದೇ ಓವರ್‌ನಲ್ಲಿ ಯಶಸ್ವಿ ಜೈಸ್ವಾಲ್ ಹಾಗೂ ರಾತ್ರಿ ಕಾವಲುಗಾರನಾಗಿ ಬಂದ ಮೊಹಮ್ಮದ್ ಸಿರಾಜ್ ಅವರ ವಿಕೆಟ್ ಗಳಿಸಿದರು.

ಬೌಂಡರಿ ಗಳಿಸುವ ಮೂಲಕ ತಮ್ಮ ರನ್ ಖಾತೆಯನ್ನು ತೆರೆದ ವಿರಾಟ್ ಕೊಹ್ಲಿ ರನೌಟ್ ಆದರು. ರಿಷಭ್ ಕ್ರೀಸ್‌ಗೆ ಬಂದರು.

ನ್ಯೂಜಿಲೆಂಡ್ ತಂಡದ ಬ್ಯಾಟರ್ ಡ್ಯಾರಿಲ್ ಮಿಚೆಲ್ ಅವರು ಬಿಸಿಲಿನ ಬೇಗೆಯಿಂದ ಉಂಟಾದ ಆಯಾಸವನ್ನು ಪರಿಹರಿಸಿಕೊಳ್ಳಲು ಆಟದ ಮಧ್ಯ ಐಸ್ ಪ್ಯಾಕ್ ಬಳಸಿದರು ಮತ್ತು ತಂಪು ಪಾನೀಯ ಕುಡಿದರು ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ನ್ಯೂಜಿಲೆಂಡ್

ಮೊದಲ ಇನಿಂಗ್ಸ್: 235 (65.4 ಓವರ್‌ಗಳಲ್ಲಿ), ಲೇಥಮ್ ಬಿ ವಾಷಿಂಗ್ಟನ್ 28 (44ಎ, 4x3), ಕಾನ್ವೆ ಎಲ್‌ಬಿಡಬ್ಲ್ಯು ಬಿ ಆಕಾಶ್ 4 (11ಎ, 4x1), ಯಂಗ್ ಸಿ ರೋಹಿತ್ ಬಿ ಜಡೇಜ 71 (138ಎ, 4x4, 6x2), ರಚಿನ್ ಬಿ ವಾಷಿಂಗ್ಟನ್ 5 (12ಎ) ಮಿಚೆಲ್ ಸಿ ರೋಹಿತ್ ಬಿ ವಾಷಿಂಗ್ಟನ್ 82 (129ಎ, 4x3, 6x3), ಬ್ಲಂಡೆಲ್ ಬಿ ಜಡೇಜ 0 (3ಎ), ಗ್ಲೆನ್ ಬಿ ಜಡೇಜ 17 (28ಎ, 4x1), ಸೋಧಿ ಎಲ್‌ಬಿಡಬ್ಲ್ಯು ಬಿ ಜಡೇಜ 7 (19ಎ, 4x1), ಹೆನ್ರಿ ಬಿ ಜಡೇಜ 0 (2ಎ), ಪಟೇಲ್ ಎಲ್‌ಬಿಡಬ್ಲ್ಯು ಬಿ ವಾಷಿಂಗ್ಟನ್ 7 (16ಎ, 6x1), ವಿಲಿಯಂ ಔಟಾಗದೆ 1 (1ಎ)

ಇತರೆ: 13 (ಬೈ 1, ಲೆಗ್‌ಬೈ 3, ನೋಬಾಲ್ 9)

ವಿಕೆಟ್ ಪತನ: 1–15 (ಡೆವೊನ್ ಕಾನ್ವೆ;3.2), 2–59 (ಟಾಮ್ ಲೇಥಮ್; 15.6), 3–72 (ರಚಿನ್ ರವೀಂದ್ರ; 19.6), 4–159 (ವಿಲ್ ಯಂಗ್;44.2), 5–159 (ಟಾಮ್ ಬ್ಲಂಡೆಲ್; 44.5), 6–187 (ಗ್ಲೆನ್ ಫಿಲಿಪ್ಸ್; 52.6), 7–210 (ಈಶ್ ಸೋಧಿ; 60.4), 8–210 (ಮ್ಯಾಟ್ ಹೆನ್ರಿ; 60.6), 9–228 (ಡ್ಯಾರಿಲ್ ಮಿಚೆಲ್; 65.1), 10–235 (ಎಜಾಜ್ ಪಟೇಲ್; 65.4)

ಬೌಲಿಂಗ್: ಮೊಹಮ್ಮದ್ ಸಿರಾಜ್ 6–0–16–0, ಆಕಾಶ್ ದೀಪ್ 5–0–22–1, ಆರ್. ಅಶ್ವಿನ್ 14–0–47–0, ವಾಷಿಂಗ್ಟನ್ ಸುಂದರ್ 18.4–2–81–4, ರವೀಂದ್ರ ಜಡೇಜ 22–1–65–5

ಭಾರತ: ಮೊದಲ ಇನಿಂಗ್ಸ್: 4 ವಿಕೆಟ್‌ಗೆ 86 (19 ಓವರುಗಳಲ್ಲಿ), ಜೈಸ್ವಾಲ್ ಬಿ ಪಟೇಲ್ 30 (52ಎ, 4x4), ರೋಹಿತ್ ಸಿ ಲೇಥಮ್ ಬಿ ಹೆನ್ರಿ 18 (18ಎ, 4x3), ಗಿಲ್ ಔಟಾಗದೇ 31 (38ಎ, 4x2, 6x1), ಸಿರಾಜ್ ಎಲ್‌ಬಿಡಬ್ಲ್ಯು ಬಿ ಪಟೇಲ್ 0 (1), ಕೊಹ್ಲಿ ರನೌಟ್ (ಹೆನ್ರಿ) 4 (6ಎ, 4x1), ಪಂತ್ ಔಟಾಗದೇ 1 (1ಎ)

ಇತರೆ 2 (ನೋಬಾಲ್ 2)

ವಿಕೆಟ್ ಪತನ: 1–25 (ರೋಹಿತ್ ಶರ್ಮಾ, 6.5), 2–78 (ಯಶಸ್ವಿ ಜೈಸ್ವಾಲ್, 17.2), 3–78 (ಮೊಹಮ್ಮದ್ ಸಿರಾಜ್, 17.3), 4–84 (ವಿರಾಟ್ ಕೊಹ್ಲಿ, 18.3)

ಬೌಲಿಂಗ್: ಮ್ಯಾಟ್ ಹೆನ್ರಿ 5–1–15–1; ವಿಲಿಯಂ ಓ ರೂರ್ಕಿ 2–1–5–0; ಎಜಾಜ್ ಪಟೇಲ್ 7–1–33–2; ಗ್ಲೆನ್ ಫಿಲಿಪ್ಸ್ 4–0–25–0; ರಚಿನ್ ರವೀಂದ್ರ 1–0–8–0.

12 ವರ್ಷದ ಸಾಧನೆ ಅಮೋಘ: ಜಡೇಜ

'ನಾನು ಆಡುವವರೆಗೂ ಭಾರತ ತಂಡವು ಒಂದೂ ಟೆಸ್ಟ್ ಸರಣಿ ಸೋಲುವುದಿಲ್ಲ ಎಂದುಕೊಂಡಿದ್ದೆ. ಈಗ ಸೋತಿದ್ದೇವೆ. ನಾನು ಏನೇ ಯೋಚಿಸಿದರೂ ಅದು ಹೇಗೋ ಆಗಿಬಿಟ್ಟಿರುತ್ತದೆ' ಎಂದು ಭಾರತ ತಂಡದ ಸ್ಪಿನ್ನರ್ ರವೀಂದ್ರ ಜಡೇಜ ನಕ್ಕರು.

ಶುಕ್ರವಾರ ದಿನದಾಟದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಜನರು ನಮ್ಮ ಮೇಲೆ ಅಗಾಧವಾದ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಇಷ್ಟು ವರ್ಷ ನಾವು ಮಾಡಿರುವ ಸಾಧನೆಯಿಂದಾಗಿ ಸಹಜವಾಗಿಯೇ ಅವರ ನಿರೀಕ್ಷೆ ಉತ್ತುಂಗದಲ್ಲಿರುವುದು ಸಹಜ. ಕಳೆದ 12 ವರ್ಷಗಳಲ್ಲಿ ನಾವು ಕೇವಲ 5 ಟೆಸ್ಟ್ ಪಂದ್ಯಗಳನ್ನು ಮಾತ್ರ ಸೋತಿದ್ದೆವು. ತಂಡದ ಪಾಲಿಗೆ ಇದು ಬಹಳ ಉತ್ತಮವಾದ ಸಾಧನೆ. ಯಾವಾಗ ನಿರೀಕ್ಷೆಗಳು ಅಪಾರವಾಗಿರುತ್ತವೋ ಆಗ ಸೋಲುಗಳನ್ನು ಅರಗಿಸಿಕೊಳ್ಳುವುದು ಕಷ್ಟ. ಇದೆಲ್ಲವೂ ಆಟದಲ್ಲಿ ನಡೆಯುತ್ತದೆ. ಇದನ್ನು ಪಾಠವಾಗಿ ನಮ್ಮ ತಂಡವು ತೆಗೆದುಕೊಂಡಿದೆ' ಎಂದರು.

'ಈ ರೀತಿ ನಡೆಯುವುದು ಸಾಮಾನ್ಯ. ಎಲ್ಲರೂ ಸಣ್ಣಪುಟ್ಟ ತಪ್ಪುಗಳನ್ನು ಮಾಡುತ್ತಾರೆ. ಆದರೆ ನಮ್ಮ ಬ್ಯಾಟರ್‌ಗಳು ಜೊತೆಯಾಟಗಳನ್ನು ಬೆಳೆಸಬೇಕು. ಈ ಹಂತದಲ್ಲಿ ನಮ್ಮ ನಿಯಂತ್ರಣದಲ್ಲಿರುವುದೂ ಅಷ್ಟೇ' ಎಂದರು.

ವಿಶ್ವ ಚೆಸ್ ಫೈನಲ್ ಪಂದ್ಯದಂತೆ ಅನಿಸುತ್ತಿಲ್ಲ: ಕ್ಯಾಸ್ಪರೋವ್



ಕ್ಯಾಸ್ಪರೋವ್

ನವದೆಹಲಿ (ಪಿಟಿಐ): 'ಭಾರತದ ಡಿ.ಗುಕೇಶ್ ಮತ್ತು ಚೀನಾದ ಡಿಂಗ್ ಲಿರೆನ್ ನಡುವಣ ಈ ತಿಂಗಳ ಕೊನೆಯಲ್ಲಿ ಆರಂಭವಾಗುವ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯವು ತಮಗೆ ಫೈನಲ್‌ನಂತೆ ಕಾಣಿಸುತ್ತಿಲ್ಲ. ಐದು ಬಾರಿಯ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಗೈರುಹಾಜರಿಯಲ್ಲಿ ಇದನ್ನು ವಿಶ್ವ ಚಾಂಪಿಯನ್‌ಷಿಪ್ ಫೈನಲ್ ಎಂದು ತಾವು ಪರಿಗಣಿಸುವುದಿಲ್ಲ' ಎಂದು ರಷ್ಯಾದ ಚೆಸ್ ದಂತಕತೆ ಗ್ಯಾರಿ ಕ್ಯಾಸ್ಪರೋವ್ ಹೇಳಿದ್ದಾರೆ.

ನಾರ್ವೆಯ ಚೆಸ್ ಚತುರ ಕಾರ್ಲ್‌ಸನ್ ಅವರು ಹೋದ ವರ್ಷ ಪ್ರಶಸ್ತಿ ಪಂದ್ಯದಿಂದ ಹಿಂದೆಸರಿಯುವ ಮೂಲಕ ವಿಶ್ವ ಚಾಂಪಿಯನ್ನರ ದೀರ್ಘ ಪಟ್ಟ ಕೊನೆಗೊಂಡಿದೆ ಎಂದು ಕ್ಯಾಸ್ಪರೋವ್ ಅನಿಸಿಕೆ ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷ ಕಾರ್ಲ್‌ಸನ್ ಫೈನಲ್‌ನಲ್ಲಿ ಆಡಿರಲಿಲ್ಲ. ಇಂಥ ದೀರ್ಘ ಮಾದರಿಯಲ್ಲಿ ಆಡಲು ಮೊದಲಿನ ಪ್ರೇರಣೆ ಕಳೆದುಕೊಂಡಿರುವುದಾಗಿ ಅವರು ಹೇಳಿದ್ದರು. ಅವರು ಹಿಂದೆಸರಿದ ಕಾರಣ ಲಿರೆನ್ ಮತ್ತು ರಷ್ಯಾದ ನಿಪೊಮ್‌ನಿಷಿ ನಡುವೆ ಕಳೆದ ವರ್ಷ ಫೈನಲ್ ನಡೆದಿತ್ತು. ಲಿರೆನ್ ಈ ಸೆಣಸಾಟದಲ್ಲಿ ಗೆದ್ದು ವಿಶ್ವ ಚಾಂಪಿಯನ್ ಆಗಿದ್ದರು.

ವಿಶ್ವದ ಅತಿ ಶ್ರೇಷ್ಠ ಆಟಗಾರನನ್ನು ಒಳಗೊಂಡಿರುವ ಫೈನಲ್ ನನ್ನ ಪ್ರಕಾರ ವಿಶ್ವ ಚಾಂಪಿಯನ್‌ಷಿಪ್ ಫೈನಲ್ ಎನಿಸುತ್ತದೆ ಎಂದು ಕ್ಯಾಸ್ಪರೋವ್ ಸೇಂಟ್ ಲೂಯಿ ಚೆಸ್ ಕ್ಲಬ್‌ನ ಯು ಟ್ಯೂಬ್ ಚಾನೆಲ್‌ನಲ್ಲಿ ಶುಕ್ರವಾರ ಹೇಳಿದ್ದಾರೆ.

ಕಾರ್ಲ್‌ಸನ್ ಅವರವರೆಗೆ, 16 ವಿಶ್ವ ಚಾಂಪಿಯನ್ನರು ತಮ್ಮ ಕಾಲದ ಶ್ರೇಷ್ಠ ಆಟಗಾರರ ವಿರುದ್ಧ ಸೆಣಸಾಟವನ್ನು ಗೆದ್ದು ಆ ಪಟ್ಟಕ್ಕೇರಿದ್ದರು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಆದರೆ ಈ ಬಾರಿಯ ಪೈಪೋಟಿಯಲ್ಲಿ ಗುಕೇಶ್ ಅವರು ಗೆಲ್ಲುವ ನೆಚ್ಚಿನ ಆಟಗಾರ ಎಂದು ಕ್ಯಾಸ್ಪರೋವ್ ಹೇಳಿದ್ದಾರೆ. ಲಿರೆನ್ ಅವರು ಗುಕೇಶ್ ವಿರುದ್ಧ ಆಡುತ್ತಿರುವುದು ಮಹತ್ವದ ಪಂದ್ಯದಲ್ಲಿ. ಇದನ್ನು ಫಿಡೆ ನಡೆಸುತ್ತಿದೆ. ಗುಕೇಶ್ ಪ್ರಶಸ್ತಿ ಗೆಲ್ಲುವ ಫೇವರೀಟ್. ಲಿರೆನ್ ಅವರು ಇತ್ತೀಚಿನ ದಿನಗಳಲ್ಲಿ ಆಡುತ್ತಿರುವ ರೀತಿ ನೋಡಿದರೆ ಅವರು ನಾವು ನೆನಪಿಡುವ ಹಿಂದಿನ ಲಿರೆನ್ ಅವರಂತೆ ಕಾಣದೇ ಅವರ ನೆರಳಿನಂತೆ ಕಾಣುತ್ತಿದ್ದಾರೆ ಎಂದಿದ್ದಾರೆ.

'ಅವರ (ಲಿರೆನ್) ಆಟದಲ್ಲಿ ಪವಾಡದ ರೀತಿ ಚೇತರಿಕೆ ಕಂಡರೆ ಮಾತ್ರ ಹೋರಾಟ ಕುತೂಹಲಕರವಾಗಲಿದೆ. ಏನೇ ಇರಲಿ, ಈ ಪಂದ್ಯವು ಲೋಕದ ಅತಿ ಶ್ರೇಷ್ಠ ಆಟಗಾರನನ್ನು ನಿರ್ಧರಿಸುವ ಮೂಲ ಆಶಯಕ್ಕೆ ಸಮನಾಗುವುದಿಲ್ಲ' ಎಂದಿದ್ದಾರೆ ಕ್ಯಾಸ್ಪರೋವ್.

ಹಾಂಗ್‌ಕಾಂಗ್ ಸಿಕ್ಸಸ್ ಟೂರ್ನಿ ಪಾಕಿಸ್ತಾನಕ್ಕೆ ಸುಲಭ ಜಯ

ಹಾಂಗ್‌ಕಾಂಗ್ (ಪಿಟಿಐ): ಭಾರತ ತಂಡ, ಹಾಂಗ್‌ಕಾಂಗ್ ಸಿಕ್ಸಸ್ 2024 ಟೂರ್ನಿಯ ಆರಂಭದ ಪಂದ್ಯದಲ್ಲಿ ಬದ್ಧ ಎದುರಾಳಿ ಪಾಕಿಸ್ತಾನ ಎದುರು ಶುಕ್ರವಾರ ಆರು ವಿಕೆಟ್‌ಗಳ ಸೋಲನುಭವಿಸಿತು.

ಟಿನ್‌ಕ್ವಾಂಗ್ ರೋಡ್ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಭಾರತ ನಿಗದಿತ 6 ಓವರುಗಳಲ್ಲಿ 2 ವಿಕೆಟ್‌ಗೆ 119 ರನ್ ಗಳಿಸಿತು. ಕನ್ನಡಿಗ ಭರತ್ ಚಿಪ್ಲಿ ಕೇವಲ 16 ಎಸೆತಗಳಲ್ಲಿ 53 ರನ್ ಗಳಿಸಿದರೆ, ನಾಯಕ ಹಾಗೂ ಇನ್ನೊಬ್ಬ ಕನ್ನಡಿಗ ರಾಬಿನ್ ಉತ್ತಪ್ಪ 8 ಎಸೆತಗಳಲ್ಲಿ 31 ರನ್ ಬಾಚಿದರು.

ಆದರೆ ಪಾಕಿಸ್ತಾನ ಒತ್ತಡಕ್ಕೀಡಾಗದೇ ಇನ್ನೂ ಒಂದು ಓವರ್ ಇರುವಂತೆ 4 ವಿಕೆಟ್ ನಷ್ಟದಲ್ಲಿ ಗುರಿತಲುಪಿತು. ಆಸಿಫ್ ಅಲಿ 15 ಎಸೆತಗಳಲ್ಲಿ 55 ರನ್ ಚಚ್ಚಿ ಭದ್ರ ಅಡಿಪಾಯ ಹಾಕಿಕೊಟ್ಟರು. ಆಸಿಫ್ ಅಲಿ ನಿವೃತ್ತರಾದ ಮೇಲೆ, ಮುಹಮ್ಮದ್ ಅಖ್ಲಾಕ್ (12 ಎಸೆತಗಳಲ್ಲಿ ಅಜೇಯ 40) ಮತ್ತು ಫಾಹೀಮ್ ಅಶ್ರಫ್ (5 ಎಸೆತಗಳಲ್ಲಿ ಅಜೇಯ 22) ಗೆಲುವನ್ನು ಸುಲಭಗೊಳಿಸಿದರು.

ಕ್ರಿಕೆಟ್: ಆಸ್ಟ್ರೇಲಿಯಾ ಎ ವಿರುದ್ಧ ಭಾರತ ಎ ಮರು ಹೋರಾಟ

ದೇವದತ್ತ, ಸಾಯಿ ಜೊತೆಯಾಟ

ಮೆಕೆ, ಆಸ್ಟ್ರೇಲಿಯಾ (ಪಿಟಿಐ): ಕನ್ನಡಿಗ ದೇವದತ್ತ ಪಡಿಕ್ಕಲ್ ಮತ್ತು ಸಾಯಿ ಸುದರ್ಶನ್ ಅವರ ಅಮೋಘ ಬ್ಯಾಟಿಂಗ್ ಬಲದಿಂದ ಭಾರತ ಎ ತಂಡವು ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ಎ ಎದುರಿನ ಪಂದ್ಯದ ಎರಡನೇ ದಿನವಾದ ಶುಕ್ರವಾರ 120 ರನ್‌ಗಳ ಮುನ್ನಡೆ ಸಾಧಿಸಿದೆ.

ಮೊದಲ ಇನಿಂಗ್ಸ್‌ನಲ್ಲಿ ಭಾರತ ಎ ತಂಡವು ಕೇವಲ 107 ರನ್‌ಗಳಿಗೆ ಆಲೌಟ್ ಆಗಿತ್ತು. ಅದಕ್ಕುತ್ತರವಾಗಿ ಆಸ್ಟ್ರೇಲಿಯಾ ಎ ತಂಡವು 62.4 ಓವರ್‌ಗಳಲ್ಲಿ 195 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಭಾರತ ಎ ತಂಡದ ಮುಕೇಶ್ ಕುಮಾರ್ (24ಕ್ಕೆ6) ಮತ್ತು ಪ್ರಸಿದ್ಧ ಕೃಷ್ಣ (59ಕ್ಕೆ3) ಅವರ ಬೌಲಿಂಗ್ ಪರಿಣಾಮಕಾರಿಯಾಗಿತ್ತು. ಆತಿಥೇಯ ತಂಡವು 88 ರನ್‌ಗಳ ಮುನ್ನಡೆ ಪಡೆಯಿತು.

ಇದಕ್ಕುತ್ತರವಾಗಿ ಎರಡನೇ ಇನಿಂಗ್ಸ್ ನಲ್ಲಿ ಭಾರತ ಎ ತಂಡದ ಆರಂಭ ಚೆನ್ನಾಗಿರಲಿಲ್ಲ. ಆರಂಭಿಕ ಜೋಡಿ ಋತುರಾಜ್ ಗಾಯಕವಾಡ (5 ರನ್) ಮತ್ತು ಅಭಿಮನ್ಯು ಈಶ್ವರನ್ (12 ರನ್) ಅವರು ಬೇಗನೆ ಔಟಾದರು. ಆಗ ತಂಡದ ಮೊತ್ತವು ಕೇವಲ 30 ರನ್‌ಗಳಾಗಿದ್ದವು. ಮೊದಲ ಇನಿಂಗ್ಸ್‌ನಲ್ಲಿ ಋತುರಾಜ್ ಸೊನ್ನೆ ಸುತ್ತಿದ್ದರು. ಈಶ್ವರನ್ 7 ರನ್ ಗಳಿಸಿದ್ದರು. ಆಗ ತಂಡವು ಮೂರಂಕಿ ಮೊತ್ತ ಗಳಿಸಲು ನೆರವಾಗಿದ್ದ ಸಾಯಿ ಸುದರ್ಶನ್ ಮತ್ತು ದೇವದತ್ತ ಮತ್ತೊಮ್ಮೆ ಮಿಂಚಿದರು. ಎರಡನೇ ಇನಿಂಗ್ಸ್‌ನಲ್ಲಿ ಅವರಿಬ್ಬರೂ ಮುರಿಯದ 3ನೇ ವಿಕೆಟ್ ಜೊತೆಯಾಟದಲ್ಲಿ 178 ರನ್ ಸೇರಿಸಿದರು. ಇದರಿಂದಾಗಿ ದಿನದಾಟದ ಅಂತ್ಯಕ್ಕೆ ತಂಡವು 64 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 208 ರನ್ ಗಳಿಸಿತು.

ಭಾರತ ಎ ತಂಡದ ದೇವದತ್ತ ಪಡಿಕ್ಕಲ್

ಚೆಂಡು ವೇಗವಾಗಿ ಪುಟಿದೇಳುವ ಪಿಚ್‌ನಲ್ಲಿ ಬೆಂಗಳೂರು ಹುಡುಗ ದೇವದತ್ತ ಆತ್ಮವಿಶ್ವಾಸ ಮತ್ತು ತಾಳ್ಮೆ ಮೇಳೈಸಿದ ಆಟವಾಡಿದರು. 167 ಎಸೆತಗಳಲ್ಲಿ 80 ರನ್ ಗಳಿಸಿದ್ದಾರೆ. ಅದರಲ್ಲಿ ಐದು ಬೌಂಡರಿಗಳಿವೆ. ಅವರಿಗೆ ಜೊತೆಗೂಡಿದ ಸುದರ್ಶನ್ ವೇಗವಾಗಿ ರನ್ ಗಳಿಸಲು ಆದ್ಯತೆ ನೀಡಿದರು. ಒಂಬತ್ತು ಬೌಂಡರಿ ಬಾರಿಸಿದರು. 185 ಎಸೆತಗಳಿಂದ 96 ರನ್ ಗಳಿಸಿ, ಶತಕದ ಸನಿಹ ಬಂದು ನಿಂತಿದ್ದಾರೆ. ಇಬ್ಬರೂ ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 47.4 ಓವರ್‌ಗಳಲ್ಲಿ 107, ಆಸ್ಟ್ರೇಲಿಯಾ ಎ: 62.4 ಓವರ್‌ಗಳಲ್ಲಿ 195 (ಟಾಡ್ ಮರ್ಫಿ 33, ಮುಕೇಶ್ ಕುಮಾರ್ 46ಕ್ಕೆ6, ಪ್ರಸಿದ್ಧ ಕೃಷ್ಣ 59ಕ್ಕೆ3) ಎರಡನೇ ಇನಿಂಗ್ಸ್: ಭಾರತ ಎ: 64 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 208 (ಸಾಯಿ ಸುದರ್ಶನ್ ಬ್ಯಾಟಿಂಗ್ 96, ದೇವದತ್ತ ಪಡಿಕ್ಕಲ್ ಬ್ಯಾಟಿಂಗ್ 80)

ಮಾಳವಿಕಾ ಬನ್ಸೋಡ್

ಹೈಲೊ ಓಪನ್ ಸೆಮಿಫೈನಲ್‌ಗೆ ಮಾಳವಿಕಾ

ಸಾರ್‌ಬ್ರಕೆನ್, ಜರ್ಮನಿ (ಪಿಟಿಐ): ಭಾರತದ ಉದಯೋನ್ಮುಖ ಆಟಗಾರ್ತಿ ಮಾಳವಿಕಾ ಬನ್ಸೋಡ್ ಅವರು ಇಲ್ಲಿ ನಡೆಯುತ್ತಿರುವ ಹೈಲೊ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಶುಕ್ರವಾರ ನಡೆದ ಮಹಿಳಾ ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ ಮಾಳವಿಕಾ ಅವರು 21–15, 21–17ರಿಂದ ತಮಗಿಂತ ಮೇಲಿನ ರ‍್ಯಾಂಕ್‌ನಲ್ಲಿರುವ ಆಟಗಾರ್ತಿ, ವಿಯೆಟ್ನಾಮ್‌ನ ಥೆಡ್ ಯವ್ವೆ ಲಿನ್ ಎನ್‌ಗುಯಾನ್ ಅವರನ್ನು ಸೋಲಿಸಿದರು.

ಸೆಮಿಫೈನಲ್‌ನಲ್ಲಿ ಮಾಳವಿಕಾ ಅವರು ಎಂಟನೇ ಶ್ರೇಯಾಂಕದ ಡೆನ್ಮಾರ್ಕಿನ ಆಟಗಾರ್ತಿ ಜೂಲಿ ದಾವಲ್ ಜ್ಯಾಕೊಬಸನ್ ಅವರನ್ನು ಎದುರಿಸುವರು.

ಭಾರತದ ಮತ್ತೊಬ್ಬ ಸ್ಪರ್ಧಿ ಆಯುಷ್ ಶೆಟ್ಟಿ 21-18, 21-18ರಿಂದ ಫಿನ್ಲೆಂಡ್‌ನ ಕ್ಯಾಲಿ ಕೊಲ್‌ಜೋನ್ ವಿರುದ್ಧ ಗೆದ್ದರು. ಅವರು ಪುರುಷರ ಸಿಂಗಲ್ಸ್ ಸೆಮಿಫೈನಲ್ ತಲುಪಿದರು. ಆಯುಷ್ ಅವರು ಫ್ರಾನ್ಸ್‌ನ ಕ್ರಿಸ್ಟೊ ಪೊಪೊವ್ ಅವರನ್ನು ಎದುರಿಸುವರು.

ಹಾಕಿ: ಸೋಮಯ್ಯ ನಾಯಕ

ಬೆಂಗಳೂರು: ಕರ್ನಾಟಕ ಪುರುಷರ ಹಾಕಿ ತಂಡದ ನಾಯಕರನ್ನಾಗಿ ಕೆ.ಪಿ. ಸೋಮಯ್ಯ ಅವರನ್ನು ಆಯ್ಕೆ ಮಾಡಲಾಗಿದೆ.

ಚೆನ್ನೈನಲ್ಲಿ ನ. 4ರಿಂದ 16ರವರೆಗೆ ನಡೆಯಲಿರುವ ರಾಷ್ಟ್ರಮಟ್ಟದ ಚಾಂಪಿಯನ್‌ಷಿಪ್‌ನಲ್ಲಿ ಈ ತಂಡವು ಆಡಲಿದೆ. ಟೂರ್ನಿಯ ಡಿ ಗುಂಪಿನಲ್ಲಿ ಕರ್ನಾಟಕ ತಂಡವಿದೆ. ಇದೇ ಗುಂಪಿನಲ್ಲಿ ಚಂಡೀಗಡ, ಹಾಕಿ ಉತ್ತರಾಖಂಡ ಮತ್ತು ತ್ರಿಪುರ ತಂಡಗಳೂ ಇವೆ.

ಹಾಕಿ ಕರ್ನಾಟಕದ ಮಹಾಪ್ರಧಾನ ಕಾರ್ಯದರ್ಶಿ ಎ.ಬಿ. ಸುಬ್ಬಯ್ಯ ಅವರು ಶುಕ್ರವಾರ ಪ್ರಕಟಿಸಿರುವ ತಂಡ ಇಂತಿದೆ:

ಕೆ.ಪಿ. ಸೋಮಯ್ಯ (ನಾಯಕ), ಎಚ್.ಎಸ್. ಮೋಹಿತ್, ಎ.ಸಿ. ಸುಬ್ರಮಣಿ, ಕೆ.ಟಿ. ಕಾರಿಯಪ್ಪ, ಎಂ.ಕೆ. ಭರತ್, ಮಂಜೀತ್, ಎ.ಎಚ್. ದೀಕ್ಷಿತ್, ಜಿ.ಎನ್. ಪೃಥ್ವಿರಾಜ್, ಬಿ.ಎಂ. ಲಿಖಿತ್, ಮೊಹಮ್ಮದ್ ರಾಹಿಲ್ ಮೌಸೀನ್, ನೀಲೇಶ್ ಹಾನಗಲ್, ಸಿ.ಬಿ. ಪೂವಣ್ಣ, ಜಿ. ವಿಶ್ವಾಸ್, ಚಿರನ್ ಮಾದಪ್ಪ, ಮಜಿ ಗಣೇಶ್, ಸಿ.ಜೆ. ರಾಹುಲ್, ಎನ್.ಎಂ. ಸೂರ್ಯ, ಬಿ. ಆಭರಣ್ ಸುದೇವ್. ನೆರವು ಸಿಬ್ಬಂದಿ: ಕೆ.ಕೆ. ಪೂಣಚ್ಚ ಮತ್ತು ಕೆ.ಸಿ. ಗಣಪತಿ.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶುಕ್ರವಾರ ನಡೆದ ರೇಸ್‌ನಲ್ಲಿ ಗೆದ್ದ ಯುಕಾನ್ ಅಶ್ವದ ಮಾಲೀಕರಾದ ಮಾರ್ತಾಂಡ್ ಸಿಂಗ್ ಮಹೀಂದ್ರ ಅವರಿಗೆ ಸಚಿವ ಮಧು ಬಂಗಾರಪ್ಪ ಅವರು ರಾಜ್ಯೋತ್ಸವ ಟ್ರೋಫಿಯನ್ನು ಪ್ರದಾನ ಮಾಡಿದರು

ಬಿಎಫ್‌ಸಿಗೆ ಗೋವಾ ಎದುರಾಳಿ

ಐಎಸ್‌ಎಲ್: ಮೈಲಿಗಲ್ಲು ಬಳಿ ಗುರುಪ್ರೀತ್ ಸಂಧು

ಮಡಗಾಂವ್ (ಪಿಟಿಐ): ಮಾಜಿ ಚಾಂಪಿಯನ್ನರಾದ ಬೆಂಗಳೂರು ಎಫ್‌ಸಿ ಮತ್ತು ಗೋವಾ ಎಫ್‌ಸಿ ತಂಡಗಳೂ ಶನಿವಾರ ಇಲ್ಲಿ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಉಭಯ ತಂಡಗಳಲ್ಲಿ ಪ್ರತಿಭಾನ್ವಿತರಿದ್ದು ಉತ್ತಮ ಹೋರಾಟ ನಿರೀಕ್ಷಿಸಲಾಗಿದೆ.

ಆದರೆ ಗೋವಾ ತಂಡಕ್ಕೆಹೋಲಿಸಿದರೆ, ಹಾಲಿ ಲೀಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಬೆಂಗಳೂರು ಎಫ್‌ಸಿ ಉತ್ತಮ ಲಯದಲ್ಲಿದೆ. ಗೋವಾ ತವರಿನಲ್ಲಿ ಆಡಿದ ಪಂದ್ಯಗಳಲ್ಲಿ ಮೂರು ಪಂದ್ಯಗಳಲ್ಲಿ ಜಯಗಳಿಸಲು ವಿಫಲವಾಗಿದೆ.

ಈ ಬಾರಿ ಬಿಎಫ್‌ಸಿ ಲೀಗ್‌ನಲ್ಲಿ ಅಮೋಘ ಆರಂಭ ಮಾಡಿದ್ದು 6 ಪಂದ್ಯಗಳಿಂದ 16 ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನದಲ್ಲಿದೆ. ಇವುಗಳಲ್ಲಿ ಐದು ಗೆಲುವು, ಒಂದು ಡ್ರಾ ಸೇರಿವೆ. ಇದುವರೆಗೆ ಎದುರಾಳಿಗೆ ಬಿಟ್ಟುಕೊಟ್ಟಿರುವುದು ಒಂದೇ ಗೋಲು ಎಂಬುದೂ ಗಮನಾರ್ಹ. ಇನ್ನೊಂದೆಡೆ ಗೋವಾ ತಂಡ ಆರು ಪಂದ್ಯಗಳಿಂದ (1 ಜಯ, 3 ಡ್ರಾ, 2 ಸೋಲು) ಆರು ಪಾಯಿಂಟ್ಸ್ ಗಳಿಸಿ ಹತ್ತನೇ ಸ್ಥಾನದಲ್ಲಿದೆ.

ಉತ್ತಮ ಪಾಸ್ ಪರ್ಸಂಟೇಜ್, ಎದುರಾಳಿಗಳ ರಕ್ಷಣಾ ಕೋಟೆಯ ಮೇಲೆ ಒತ್ತಡ ಹೇರಿ ಅವಕಾಶಗಳನ್ನು ಸೃಷ್ಟಿಸಿಕೊಳ್ಳುವುದರಲ್ಲಿ ತಂಡ ಯಶ ಕಂಡಿದೆ. ಮುನ್ಪಡೆ ಕೂಡ ಅವಕಾಶಗಳನ್ನು ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಈ ಎರಡು ತಂಡಗಳು ಐಎಸ್‌ಎಲ್‌ನಲ್ಲಿ 15 ಬಾರಿ ಮುಖಾಮುಖಿಯಾಗಿವೆ. ಬಿಎಫ್‌ಸಿ ಏಳು ಬಾರಿ ಜಯಗಳಿಸಿದರೆ, 4 ಬಾರಿ ಗೋವಾ ತಂಡ ವಿಜಯಿಯಾಗಿದೆ. 4 ಪಂದ್ಯ ಡ್ರಾ ಆಗಿವೆ.

ಆದರೆ ಗೋವಾಕ್ಕೆ ಇರುವ ಸಮಾಧಾನವೆಂದರೆ ಕೋಚ್ ಮನೊಲೊ ಮಾರ್ಕ್ವೆಝ್ ಅವರು ಬಿಎಫ್‌ಸಿ ಎದುರು ಉತ್ತಮ ದಾಖಲೆ ಹೊಂದಿದ್ದಾರೆ. 8 ಪಂದ್ಯಗಳಲ್ಲಿ ಒಂದೂ ಸೋತಿಲ್ಲ.

'ಈ ಸಲ ನಾವು ಕೆಟ್ಟದಾಗಿ ಆಡಿದ್ದು ಮೋಹನ್ ಬಾಗನ್ ವಿರುದ್ಧ ಮಾತ್ರ. ಮುಂಬೈ ವಿರುದ್ಧ ನಮ್ಮ ಪಂದ್ಯ ಹೋರಾಟದಿಂದ ಕೂಡಿತ್ತು. ಉಳಿದ ಪಂದ್ಯಗಳು ಸಮಬಲವಾಗಿದ್ದವು. ನಮ್ಮ ದಾಳಿ ಈಗ ಉತ್ತಮವಾಗಿದೆ' ಎಂದು ಮಾರ್ಕ್ವೆಝ್ ಹೇಳಿದರು.

ಬಿಎಫ್‌ಸಿ ಹೆಡ್ ಕೋಚ್ ಜೆರಾಲ್ಡ್ ಝರಗೋಜಾ ಅವರು ತಮ್ಮ ರಕ್ಷಣಾ ತಂತ್ರದ ಯೋಜನೆಯು ಯಶಸ್ಸಿಗೆ ಕಾರಣವೆನ್ನುತ್ತಾರೆ. ಇದರಿಂದ ಎದುರಾಳಿಗೆ ಗೋಲು ಗಳಿಸಲು ಅವಕಾಶವಾಗಿಲ್ಲ ಎನ್ನುವುದು ಅವರ ಅಭಿಮತ.

ಬಿಎಫ್‌ಸಿ ತಂಡದ ಸುನಿಲ್ ಚೆಟ್ರಿ ಮತ್ತು ಮುಖ್ಯ ಕೋಚ್ ಜೆರಾರ್ಡ್ ಝರಗೋಜಾ

'ನಮ್ಮ ಗೋಲಿನ ಬಾಕ್ಸ್‌ನತ್ತ ಚೆಂಡು ಬರುವುದನ್ನು ತಡೆಯಲು ಶ್ರಮ ಹಾಕುತ್ತಿದ್ದೇವೆ. ನಮ್ಮ ಗೋಲು ರಕ್ಷಿಸುವುದು, ಗುರುಪ್ರೀತ್ (ಗೋಲ್ ಕೀಪರ್) ಅವರನ್ನು ರಕ್ಷಿಸುವುದು ತಂತ್ರ' ಎನ್ನುತ್ತಾರೆ.

ಗುರುಪ್ರೀತ್ ಸಂಧು ಅವರು 50 ಪಂದ್ಯಗಳಲ್ಲಿ (ಈ ಋತುವಿನಲ್ಲಿ ಐದು ಪಂದ್ಯ ಸೇರಿ) ಗೋಲುಗಳನ್ನು ಬಿಟ್ಟುಕೊಡದ ಐಎಸ್‌ಎಲ್‌ನ ಮೊದಲ ಗೋಲ್‌ಕೀಪರ್ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗುವ ಹಾದಿಯಲ್ಲಿದ್ದಾರೆ. ಈವರೆಗೆ 49 ಐಎಸ್‌ಎಲ್ ಪಂದ್ಯಗಳಲ್ಲಿ ಎದುರಾಳಿಗೆ ಗೋಲುಬಿಟ್ಟುಕೊಟ್ಟಿಲ್ಲ.

ಪಂದ್ಯ ಆರಂಭ: ರಾತ್ರಿ 7.30.

ಭಾರತದ ಅಭಿಮಾನಿಗಳಿಗೆ ತ್ವರಿತ ವೀಸಾ: ನಕ್ವಿ

ಲಾಹೋರ್ (ಪಿಟಿಐ): ಮುಂದಿನ ವರ್ಷದ ಆರಂಭದಲ್ಲಿ ಪಾಕಿಸ್ತಾನದಲ್ಲಿ ನಡೆಯುವ ಐಸಿಸಿ ಚಾಂಪಿಯನ್ಸ್ ಟ್ರೋಫಿಗೆ ಬರಲು ಬಯಸುವುದಾದರೆ ಭಾರತದ ಕ್ರಿಕೆಟ್ ಅಭಿಮಾನಿಗಳಿಗೆ ತ್ವರಿತ ವೀಸಾ ನೀಡಲು ಕ್ರಮ ಕೈಗೊಳ್ಳುವುದಾಗಿ ಪಾಕಿಸ್ತಾನದ ಸಚಿವರೂ ಆಗಿರುವ ಕ್ರಿಕೆಟ್ ಮಂಡಳಿ ಅಧ್ಯಕ್ಷ ಮೊಹ್ಸಿನ್ ನಕ್ವಿ ಭರವಸೆ ನೀಡಿದ್ದಾರೆ

ನಕ್ವಿ ಅವರು, ಅಮೆರಿಕದಿಂದ ಬಂದಿದ್ದ ಸಿಖ್ ಯಾತ್ರಾರ್ಥಿಗಳ ಜೊತೆ ಸಭೆಯ ವೇಳೆ ಈ ಭರವಸೆ ನೀಡಿದ್ದಾರೆ. ಭಾರತದ ಕ್ರಿಕೆಟ್ ಅಭಿಮಾನಿಗಳಿಂದ ಸಕಾರಾತ್ಮಕ ಪ್ರತಿಕ್ರಿಯೆ ನಿರೀಕ್ಷಿಸುವುದಾಗಿ ನಕ್ವಿ ಹೇಳಿದ್ದಾರೆ.

ಐಪಿಎಲ್ ಬಿಡ್: ರೇಸ್‌ನಲ್ಲಿ ಶ್ರೇಯಸ್, ಸಿರಾಜ್, ವಾಷಿಂಗ್ಟನ್

ರಿಷಭ್ ಪಂತ್, ರಾಹುಲ್‌ಗೆ ಬೇಡಿಕೆ?

ನವದೆಹಲಿ (ಪಿಟಿಐ): ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮೆಗಾ ಹರಾಜಿನಲ್ಲಿ ವಿಕೆಟ್‌ಕೀಪರ್ ರಿಷಭ್ ಪಂತ್ ಮತ್ತು ಕನ್ನಡಿಗ ಕೆ.ಎಲ್. ರಾಹುಲ್ ಅವರನ್ನು ಖರೀದಿಸಲು ಅಪಾರ ಪೈಪೋಟಿ ಏರ್ಪಡುವ ನಿರೀಕ್ಷೆ ಗರಿಗೆದರಿದೆ.

ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ರಿಷಭ್ ಮತ್ತು ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಮುನ್ನಡೆಸಿದ್ದ ರಾಹುಲ್ ಅವರಿಬ್ಬರನ್ನೂ ತಂಡಗಳು ಬಿಡುಗಡೆ ಮಾಡಿವೆ. ಅದರಿಂದಾಗಿ ಅವರಿಬ್ಬರೂ ಈಗ ಬಿಡ್ ಪ್ರಕ್ರಿಯೆಯಲ್ಲಿ ಲಭ್ಯರಾಗಲಿದ್ದಾರೆ. ಇಬ್ಬರೂ ಆಟಗಾರರು ನಾಯಕತ್ವ, ವಿಕೆಟ್‌ಕೀಪಿಂಗ್ ಮತ್ತು ಬ್ಯಾಟಿಂಗ್‌ಗಳಲ್ಲಿ ನುರಿತವರಾಗಿರುವುದರಿಂದ ತಂಡಗಳು ಖರೀದಿಸಲು ಮುಗಿಬೀಳುವ ಸಾಧ್ಯತೆ ಇದೆ.

ಇವರಷ್ಟೇ ಅಲ್ಲ; ಶ್ರೇಯಸ್ ಅಯ್ಯರ್, ವೇಗಿಗಳಾದ ಅರ್ಷದೀಪ್ ಸಿಂಗ್, ಮೊಹಮ್ಮದ್ ಸಿರಾಜ್, ಮೊಹಮ್ಮದ್ ಶಮಿ ಮತ್ತು ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರಿಗೂ ಬೇಡಿಕೆ ಕುದುರುವ ನಿರೀಕ್ಷೆ ಇದೆ.

ರಿಷಭ್ ಪಂತ್ ಮತ್ತು ಕೆ.ಎಲ್. ರಾಹುಲ್

ಡಿಸೆಂಬರ್ ತಿಂಗಳಿನ ಮೂರನೇ ವಾರದಲ್ಲಿ ಎರಡು ದಿನಗಳ ಬಿಡ್ ಪ್ರಕ್ರಿಯೆ ನಡೆಯಲಿದೆ. ಈ ಬಾರಿ ವಿದೇಶದಲ್ಲಿ ಪ್ರಕ್ರಿಯೆ ನಡೆಯಲಿದೆ.

ಅಂತರರಾಷ್ಟ್ರೀಯ ಆಟಗಾರರ ಮೇಲೆ ₹ 75 ಕೋಟಿ ರಿಟೆನ್ಷನ್ ಮೊತ್ತ ನಿಗದಿಯಾಗಿರುವುದು ಮತ್ತು ರೈಟ್ ಟು ಮ್ಯಾಚ್ ಕಾರ್ಡ್ ನಿಯಮಗಳು ಇರುವುದರಿಂದ ಬಿಡ್ ಕುತೂಹಲ ಮೂಡಿಸಿದೆ. ಕೆಲವು ಫ್ರ್ಯಾಂಚೈಸಿಗಳು ತಮ್ಮ ರಿಟೆನ್ಷನ್ ಕೋಟಾದ ಬಹುತೇಕ ಭಾಗವನ್ನು ಖಾಲಿ ಮಾಡಿಕೊಂಡಿದೆ. ಪ್ರತಿ ತಂಡವೂ 15 ಆಟಗಾರರನ್ನು ಕಡಿಮೆ ಮೊತ್ತದಲ್ಲಿ ಪಡೆಯಬೇಕಿದೆ.

ಆದರೆ ಪಂಜಾಬ್ ಕಿಂಗ್ಸ್ (₹ 110.5 ಕೋಟಿ) ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು (₹83 ಕೋಟಿ) ತಂಡಗಳ ಬಳಿ ಹೆಚ್ಚು ಹಣ ಪರ್ಸ್‌ನಲ್ಲಿ ಉಳಿದುಕೊಂಡಿದೆ. ಅದರಿಂದಾಗಿ ಈ ತಂಡಗಳು ದೊಡ್ಡ ಮೊತ್ತವನ್ನು ವಿನಿಯೋಗಿಸುವ ಸಾಧ್ಯತೆ ಹೆಚ್ಚಿದೆ.

ಪಂತ್ ಅವರು ಡೆಲ್ಲಿ ತಂಡದ ಸಹ ಮಾಲೀಕರ ಧೋರಣೆಗೆ ಅಸಮಾಧಾನಗೊಂಡು ಹೊರ ನಡೆದಿದ್ದಾರೆನ್ನಲಾಗಿದೆ. ಅದರಲ್ಲೂ ಹೇಮಂಗ್ ಬದಾನಿ ಮತ್ತು ವೈ. ವೇಣುಗೋಪಾಲ್ ಅವರನ್ನು ಕ್ರಮವಾಗಿ ಮುಖ್ಯ ಕೋಚ್ ಮತ್ತು ನಿರ್ದೇಶಕರಾಗಿ ನೇಮಕ ಮಾಡಿದ್ದರ ಬಗ್ಗೆ ಪಂತ್ ಅವರಿಗೆ ಅತೃಪ್ತಿ ಇತ್ತು ಎನ್ನಲಾಗಿದೆ.

'ಭಾರತ ತಂಡ ಇಂಟ್ರಾಸ್ಕ್ವಾಡ್ ಪಂದ್ಯಗಳಿಲ್ಲ'

ನವದೆಹಲಿ (ಪಿಟಿಐ): ಇದೇ ತಿಂಗಳು ಆಸ್ಟ್ರೇಲಿಯಾದಲ್ಲಿ ಬಾರ್ಡರ್ – ಗಾವಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯಲ್ಲಿ ಆಡಲು ಭಾರತ ತಂಡವು ತೆರಳಲಿದೆ. ಪ್ರತಿ ಬಾರಿಯಂತೆ ಈ ಬಾರಿ ಇಂಟ್ರಾ ಸ್ಕ್ವಾಡ್ ಅಭ್ಯಾಸ ಪಂದ್ಯಗಳನ್ನು ಏರ್ಪಡಿಸುವುದಿಲ್ಲ. ಬದಲಿಗೆ ನೆಟ್ಸ್ ಅಭ್ಯಾಸದಲ್ಲಿ ತೊಡಗಿಸಿಕೊಳ್ಳಲು ಅವಕಾಶ ನೀಡಲಾಗುವುದು ಎಂದು ತಂಡದ ವ್ಯವಸ್ಥಾಪನ ಮಂಡಳಿ ನಿರ್ಧರಿಸಿದೆ.

ಇದೇ 22ರಿಂದ ಪರ್ತ್‌ನಲ್ಲಿ ಮೊದಲ ಟೆಸ್ಟ್ ಆರಂಭವಾಗಲಿದೆ. ರೋಹಿತ್ ನಾಯಕತ್ವದ ತಂಡವು ತನ್ನ ಮೊದಲ ಅಭ್ಯಾಸ ಪಂದ್ಯವನ್ನು ಋತುರಾಜ್ ಗಾಯಕವಾಡ ನಾಯಕತ್ವದ ಭಾರತ ಎ ತಂಡದ ಎದುರು ಆಡಲಿದೆ. ಆ ಮೂಲಕ ಅಭ್ಯಾಸ ಆರಂಭಿಸಲಿದೆ. ನ. 15 ರಿಂದ 17ರವರೆಗೆ ಈ ಪಂದ್ಯ ನಡೆಯುವುದು.

ಆದರೆ ಪ್ರತಿ ಬಾರಿಯಂತೆ ತಂಡವನ್ನು 2 ವಿಭಾಗಗಳಲ್ಲಿ ವಿಂಗಡಿಸಿ ಪಂದ್ಯಗಳನ್ನು ನಡೆಸಲಾಗುವುದಿಲ್ಲ ಎನ್ನಲಾಗಿದೆ.